ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 6

ಫೆಬ್ರವರಿ 06, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com



ಮಹಿಳಾ ಕೂಲಿಕಾರರು ಹೆಚ್ಚಾದ ಶೋಷಣೆ ನಿಲ್ಲದ ಬವಣೆ



ಭ್ರಷ್ಟರ ರಕ್ಷಣೆಯ ಕರ್ನಾಟಕ ಬಂದ್





ಗಣರಾಜ್ಯೋತ್ಸವ

ಬದಲಾಗಬೇಕಾದ ಆರ್ಥಿಕ ನೀತಿಗಳ ಹಾದಿ

ಬಿಬಿಎಂಪಿ ವರ್ಕ್‌ಕೋಡ್ ಹಗರಣ :

ಯಾರು ನುಂಗಿದರು 2000 ಕೋಟಿ ಹಣ ?

ಪಶ್ಚಿಮ ಬಂಗಾಳದಲ್ಲಿ ಮತ್ತೆ ತೃಣಮೂಲಿ - ಮಾವೋವಾದಿಗಳ ಅಟ್ಟಹಾಸ

■ ಸಿಬ್ಬಿಸಿ

ಇತ್ತೀಚಿನ ದಿನಗಳಲ್ಲಿ ಪಶ್ಚಿಮ ಬಂಗಾಲದ ಜಂಗಲ್ ಮಹಲ್ ಸುತ್ತಮುತ್ತ ನಡೆಯುತ್ತಿರುವ ಜನಚಳವಳಿ ನಿಜಕ್ಕೂ ಮಾವೋವಾದಿಗಳು ಹಾಗೂ ತೃಣಮೂಲ ನಾಯಕರ ನಿದ್ದೆಗೆಡಿಸಿದೆ. ಅದರಲ್ಲೂ ಬಂಗಾಳದ ಪಶ್ಚಿಮಾತ್ಯ ಜಿಲ್ಲೆಗಳಲ್ಲಿ ಜನ ಈ ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಒಂದಾಗಿ ನಿಂತಿದ್ದಾರೆ. ಮಾವೋ ಉಗ್ರ ಪೀಡಿತ ಪ್ರದೇಶಗಳಲ್ಲಿ ಸಭೆಗಳು, ರ್‍ಯಾಲಿಗಳು ಹಾಗೂ ನಿರಂತರ ಹೋರಾಟಗಳ ಮೂಲಕ ಇದು ಮತ್ತಷ್ಟು ಬಲಗೊಳ್ಳುವ ಸೂಚನೆ ಕಂಡುಬರುತ್ತಿದ್ದಂತೆ ಮತ್ತೆ ಹಿಂಸಾಚಾರದ ತನ್ನ ಕೆಟ್ಟಚಾಳಿಗೆ ಈ ಮೈತ್ರಿಕೂಟ ಮೊರೆಹೋಗಿದೆ.

ಜನವರಿ 23ರಂದು ಮುಂಜಾನೆ ಸೊಲಾಬನಿ ಪ್ರದೇಶದ ಭೀಮಪುರ ರಾಮೇಶ್ವರ ವೃತ್ತದಲ್ಲಿ ಸಿಪಿಐಎಂ ಕಾರ್ಯಕರ್ತರು ಮತ್ತೆ ಹತ್ಯೆಯಾಗಿದ್ದಾರೆ. ಹಾಡಹಗಲೇ ಎಡ ಉಗ್ರರಿಂದ ನಡೆದ ಈ ಕೃತ್ಯ ನಡೆದಿರುವುದು ಹಿಂಸಾಚಾರ ಮತ್ತೆ ಮರಳುವ ಸೂಚನೆ ನೀಡಿದೆ.

ತೃಣಮೂಲಿ-ಉಗ್ರರ ಈ ಕೃತ್ಯ ಎಲ್ಲರೂ ಕಣ್ಣಾರೆ ಕಾಣುವಂತಾಗಿದೆ. ಇತ್ತೀಚಿನ ವರೆಗೂ ಭೂಗತ ಜೀವನ ನಡೆಸಿದ್ದ ಸಿಪಿಐ(ಎಂ) ಕಾರ್ಯಕರ್ತರಾಗಿರುವ ಕರ್ಮಚಂದ್ ಸಿಂಙ್ ಮಹತೋ, ಉತ್ತಮ್ ಸಿಂಗ್ ಮತ್ತು ಕಾಶೀನಾಥ್ ಪಲ್ಮಲ್ ಬೆಳಿಗ್ಗಿನ ಕೊರೆಯುವ ಚಳಿಗೆ ಬೆಚ್ಚಗೆ ರಾಮೇಶ್ವರ ಚೌಕದ ಕ್ಯಾಂಟೀನ್‌ನಲ್ಲಿ ಟೀ ಕುಡಿಯುತ್ತಿದ್ದರು. ಆಗ ಒಂದು ಬೈಕ್ ಬಂತು. ಬೈಕ್ ರೈಡರ್ ಹಿಂದೆ ಕುಳಿತಿದ್ದ ಮೂವರು ತೃಣಮೂಲಿಗಳು ಒಂದು ಕ್ಷಣ ದುರುಗುಟ್ಟಿ ನೋಡಿದರು. ಬೈಕ್ ಮರಳುತ್ತಿದ್ದಂತೆ ಮೂವರು ಸಂಗಾತಿಗಳು ಚಹಾ ಕುಡಿಯುತ್ತಾ ತಮ್ಮ ದಿನಚರಿಯನ್ನು ಮುಂದುವರಿಸಿದರು. ಆದರೆ, ಇದು ಅಪಾಯದ ಮುನ್ಸೂಚನೆ ಎಂಬುದನ್ನು ಅರಿಯದೆ ಹೋದರು. ಇದಾದ ಕೆಲವೇ ಕ್ಷಣಗಳಲ್ಲಿ ಮತ್ತೆ ಮೋಟಾರ್ ಬೈಕ್‌ಗಳ ಆಗಮನವಾಯಿತು. ಈ ಬೈಕ್‌ನಲ್ಲಿದ್ದವರು ಮಾರಕಾಸ್ತ್ರಗಳಿಂದ ಅಲ್ಲಿ ಸೇರಿದ್ದ ಮಂದಿಯ ಮೇಲೆ ಗಂಭೀರ ಹಲ್ಲೆ ನಡೆಸಿದರು. ಬೈಕ್‌ನ್ನು ವ್ಯವಸ್ಥಿತವಾಗಿ ಚಾಲಿತ ಸ್ಥಿತಿಯಲ್ಲಿ ಇಟ್ಟ ಮುಸುಕುಧಾರಿ ದುಷ್ಕರ್ಮಿಗಳು ಏಕಾಏಕಿ ಗುಂಡಿ ದಾಳಿ ನಡೆಸಿದರು. ಒಂದು ಕ್ಷಣ ಕ್ಯಾಂಟೀನ್ ಪರಿಸರ ಭೀತಿಯ ವಾತಾವರಣ ಉಂಟಾಯಿತು. ಮೂರು ಸಿಪಿಐ(ಎಂ) ಕಾರ್ಯಕರ್ತರು ರಕ್ತದ ಮಡುವಿನ ಮಧ್ಯೆ ಹತ್ಯೆಯಾದರು. ಗುಂಡಿನ ದಾಳಿಯಿಂದ ಹಲವರು ಗಾಯಗೊಂಡರು. ಗನ್ ಟ್ರಿಗರ್ ಅದುಮುವ ವೇಳೆ, ಮುಸುಕುಧಾರಿ ಹಂತಕರ ಮುಖದಲ್ಲಿ ವಿಕೃತ ನಗು ಮಿಂಚಿತ್ತು ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ.

ಘಟನೆಯ ಕೆಲವೇ ಗಂಟೆಗಳಲ್ಲಿ ಈ ಬರ್ಬರ ಹತ್ಯೆಯನ್ನು ಖಂಡಿಸಿ ಜಂಗಲ್ ಮಹಲ್‌ನ ಬೀದಿಗಳಲ್ಲಿ ಜನ ಪ್ರತಿಭಟನೆ ನಡೆಸಿದರು. ಅಸಂಖ್ಯಾತ ಮಹಿಳೆಯರು ಸೇರಿದಂತೆ ಸಾವಿರಾರು ಮಂದಿ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡರು. ಹಾಡಹಗಲೇ ಪ್ರಜಾಪ್ರಭುತ್ವದ ಬರ್ಬರ ಕೊಲೆ ನಡೆಸಿದ ಈ ಘಟನೆಯನ್ನು ಎಲ್ಲರೂ ಪಕ್ಷಭೇದ ಮರೆತು ಖಂಡಿಸುವಂತೆ ರಾಜ್ಯ ಎಡರಂಗದ ಕಾರ್ಯದರ್ಶಿ ಬಿಮನ್ ಬಸು ಕರೆ ನೀಡಿದ್ದಾರೆ.



ಪುರುಲಿಯಾ ಜಿಲ್ಲೆಯ ಜಾಲ್ದಾದಲ್ಲಿ ಮಾವೋವಾದಿಗಳಿಂದ ಕಗ್ಗೊಲೆಗೊಳಗಾದ ಫಾರ್ವರ್ಡ್ ಬ್ಲಾಕ್ ಕಾರ್ಯಕರ್ತರ ದೇಹಗಳು

ಜಂಗಲ್ ಮಹಲ್ ಒಂದರಲ್ಲೇ ಕಳೆದ ಒಂದೂವರೆ ವರ್ಷದಲ್ಲಿ ಎಡರಂಗದ ಕಾರ್ಯಕರ್ತರನ್ನು ಕೇಂದ್ರೀಕರಿಸಿ ಅಮಾನುಷ ಹಿಂಸಾಚಾರ ನಡೆಯುತ್ತಿದೆ. ಈ ಅವಧಿಯಲ್ಲಿ ಎಡರಂಗದ 266 ಮಂದಿಯನ್ನು ದಾರುಣವಾಗಿ ಹತ್ಯೆ ಮಾಡಲಾಗಿದೆ.

ಎಡರಂಗದ ಸಚಿವರೂ ತೃಣಮೂಲದ ಟಾರ್ಗೆಟ್!

ಕಳೆದ ಕೆಲವು ತಿಂಗಳಿನಿಂದ ಎಡರಂಗದ ಸಚಿವರೂ ತೃಣಮೂಲ ಹಾಗೂ ಮಾವೋವಾದಿಗಳ ಟಾರ್ಗೆಟ್. ಜನವರಿ 15ರಿಂದ ನಿರಂತರ ಘಟನೆಗಳು ಇದನ್ನು ಸಾಬೀತುಪಡಿಸಿವೆ. ಹೂಗ್ಲಿ ಜಿಲ್ಲೆಯ ಪುರುಸುರ ಎಂಬಲ್ಲಿ ಕಾಲೇಜು ಕಟ್ಟಡಕ್ಕೆ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇಬ್ಬರು ಸಚಿವರ ಹತ್ಯೆಗೆ ಪ್ರಯತ್ನ ನಡೆದಿತ್ತು. ಸಚಿವರಾದ ಸೌಮೇಂದ್ರ ನಾಥ್ ಬೇರಾ ಮತ್ತು ಚಕ್ರಧತ್ ಮೀಕಾಪ್ ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾದರು.

ಸುದೇರ್‌ಪುರ ಬಜಾರ್ ಮೂಲಕ ಹಾದುಹೋಗಬೇಕಿದ್ದ ಸಂದರ್ಭದಲ್ಲಿ ಈ ಕೃತ್ಯ ನಡೆಸಲಾಗಿದೆ. ಕಾರ್ಯಕ್ರಮಕ್ಕೆ ಮುನ್ನವೇ ಹತ್ತಿರದ ತೃಣಮೂಲ ಕಾಂಗ್ರೆಸ್‌ನ ಕಚೇರಿಯಲ್ಲಿ ಈ ವ್ಯವಸ್ಥಿತ ಸಂಚು ಹೆಣೆಯಲಾಗಿತ್ತು. ಕಾರನ್ನು ಸ್ಫೋಟಿಸುವ ಈ ಸಂದರ್ಭದಲ್ಲಿ ಪೊಲೀಸರ ಮಧ್ಯಪ್ರವೇಶ ಮತ್ತು ವಾಹನದ ವೇಗವನ್ನು ಹೆಚ್ಚಿಸಿದ ಕಾರಣ ಸಚಿವರಿಬ್ಬರು ಸಣ್ಣಪುಟ್ಟ ಗಾಯಗೊಂಡರೂ ಗಂಭೀರ ಅಪಾಯದಿಂದ ಪಾರಾದರು.

ಜನವರಿ 27ರಂದು ಸೋಷಿಯಲಿಸ್ಟ್ ಪಕ್ಷದ ನಾಯಕ ಹಾಗೂ ಎಡರಂಗ ಸರ್ಕಾರದ ಸಚಿವ ಕಿರಣ್ಮಯಿ ನಂದಾ ಕೂಡ ಇಂಥದ್ದೇ ದಾಳಿಯಿಂದ ಪಾರಾಗಿದ್ದಾರೆ. ತೃಣಮೂಲದ ಪ್ರಾಬಲ್ಯ ಇರುವ ಕೇಜೂರಿ ಜಿಲ್ಲೆಯ ಗಡಿಭಾಗದಲ್ಲಿರುವ ತೃಣಮೂಲ ಕಾರ್ಯಕರ್ತರ ದಾಳಿ ನಡೆಯಿತಾದರೂ ಸಚಿವರಿಗೆ ಯಾವುದೇ ಅಪಾಯ ಉಂಟಾಗಲಿಲ್ಲ. ತನ್ನ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಂಡು ವಾಪಸ್ ಆಗುತ್ತಿದ್ದಾಗ ಈ ಘಟನೆ ನಡೆದಿದೆ. ಮಾರಕಾಸ್ತ್ರ ಮಾತ್ರವಲ್ಲ, ಗುಂಡಿನ ದಾಳಿ ಮೂಲಕವೂ ಅಪಾಯ ಸಂಭವಿಸುವ ಸಾಧ್ಯತೆ ಇತ್ತು. ಆದರೆ, ಪೊಲೀಸರ ತಕ್ಷಣ ಮಧ್ಯಪ್ರವೇಶ ಹಾಗೂ ಚಾಣಾಕ್ಷ ನಿರ್ಧಾರದಿಂದ ಸಚಿವರು ಪ್ರಾಣಾಪಾಯದಿಂದ ಪಾರಾಗಿದ್ದರೂ ದೇಹಕ್ಕೆ ಸಣ್ಣಪುಟ್ಟ ಗಾಯಗಳಾದವು.

ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಎಡರಂಗದ ಕಾರ್ಯದರ್ಶಿ ಬಿಮನ್ ಬಸು, ಇಬ್ಬರು ಸಚಿವರ ಮೇಲೆ ನಡೆದ ಹಿಂದಿನ ಘಟನೆಯನ್ನೂ ಸ್ಮರಿಸಿದ್ದಾರೆ. ಸಂವಿಧಾನಾತ್ಮಕವಾಗಿ ಕಾರ್ಯ ನಿರ್ವಹಿಸುವುದು ಬಿಟ್ಟು ಹಿಂಸಾಚಾರದ ಹಾದಿ ತುಳಿದ ತೃಣಮೂಲಕ್ಕೆ ಜನ ಪಾಠ ಕಲಿಸುತ್ತಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ○

ಸಮುದಾಯದ ರಾಜ್ಯ ಸಮ್ಮೇಳನ

ಸಾಂಸ್ಕೃತಿಕ ಸಂಘಟನೆ ಸಮುದಾಯದ ಕರ್ನಾಟಕ ರಾಜ್ಯ ಸಮ್ಮೇಳನವು ಇದೇ ಜನವರಿ 22, 23 ರಂದು ಗುಲಬರ್ಗಾ ನಗರದಲ್ಲಿ ಯಶಸ್ವಿಯಾಗಿ ನಡೆದಿದೆ. ಸಾಂಸ್ಕೃತಿಕ ರಂಗದಲ್ಲಿ ಕಂಡುಬರುತ್ತಿರುವ ಬದಲಾವಣೆಗಳು ಎದುರಾಗಿರುವ ಸವಾಲುಗಳ ಕುರಿತು ಗಂಭೀರವಾಗಿ ಚರ್ಚಿಸಿದ ಸಮ್ಮೇಳನವು ಹಲವು ನಿರ್ಣಯಗಳನ್ನು ಕೈಗೊಂಡಿದೆ.

ಸಮ್ಮೇಳನವು 38 ಜನರ ರಾಜ್ಯ ಸಮಿತಿಯಲ್ಲಿ ಈ ಕೆಳಕಂಡಂತೆ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳು

ಅಧ್ಯಕ್ಷರು : **ಪ್ರೊ ಆರ್.ಕೆ.ಹುಡುಗಿ**

ಉಪಾಧ್ಯಕ್ಷರು : **ಅಚ್ಯುತ** (ಕೆ.ಜಿ.ಎಫ್)
ಡಿ.ಬಿ.ಬಡಿಗೇರ (ಹರಪನಹಳ್ಳಿ)
ಡಾ. ಮೀನಾಕ್ಷಿ ಬಾಳಿ (ಗುಲಬರ್ಗಾ)

ಪ್ರ.ಕಾರ್ಯದರ್ಶಿ : **ಟಿ. ಸುರೇಂದ್ರರಾವ್**

ಸಹ ಕಾರ್ಯದರ್ಶಿಗಳು :
ಡಾ. ಹೆಚ್.ವಿ.ವೇಣುಗೋಪಾಲ್
ಕೆ.ಎಸ್ ವಿಮಲಾ
ಡಾ.ವಿಠ್ಠಲ ಭಂಡಾರಿ

ಖಜಾಂಚಿ : **ರವೀಂದ್ರನಾಥ್ ಸಿರಿವರ**

ಜನಶಕ್ತಿ ವಿಳಾಸ-ಸಂಪರ್ಕಕ್ಕೆ ವಿವರ ಗಮನಿಸಿ

'ಜನಶಕ್ತಿ'ಯ ಸಂಪರ್ಕ ವಿಳಾಸ ಬದಲಾಗಿದೆ. ವರದಿ, ಲೇಖನ, ಫೋಟೊ, ಚಂದಾ ಹಣ, ವಿಳಾಸ ಇತ್ಯಾದಿಗಳನ್ನು ಬದಲಾದ ವಿಳಾಸಕ್ಕೆ ಕಳಿಸಿ.

ಕಛೇರಿ ವಿಳಾಸ

'ಜನಶಕ್ತಿ' ಕನ್ನಡ ವಾರಪತ್ರಿಕೆ ಕಾರ್ಯಾಲಯ, ಇ.ಎಂ.ಎಸ್. ಭವನ, ನಂ.37/ಎ, 8ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಹತ್ತಿರ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು 560 086

ದೂರವಾಣಿ : 9448505789 (ಆರ್.ರಾಮಕೃಷ್ಣ), 9482220931 (ನಾಗರಾಜ್)

ದೂರವಾಣಿ : 080 - 23491114 (ಜನಶಕ್ತಿ ಕಾರ್ಯಾಲಯ)

ಕಪ್ಪು ಹಣ

ಮಠ ಗುಡಿಯ ಒಳಗಿಟ್ಟ ಕಪ್ಪು ಹಣಬಿಟ್ಟು
ಸ್ವಿಸ್ ಬ್ಯಾಂಕ್ ಎಡೆಗಷ್ಟೇ ತೋರುವರು ಬಟ್ಟು
ಸ್ವಿಸ್ ಬ್ಯಾಂಕ್ ಹಾಗೆಯೇ ಮಠಗುಡಿಯ ಒಳಗೆ
ಹುದುಗಿಸಿಹ ಹಣ ಕೂಡ ಬರಲಯ್ಯ ಹೊರಗೆ

ಸ್ವಿಸ್ ಬ್ಯಾಂಕ್ ಲೂಟಿ

ಮಂತ್ರಿಗಳು ಸುಗ್ರಾಸ ಭೋಜನವ ಮಾಡಿ
ಸುತ್ತಪ್ಪತ್ತಿಗೆಯ ಏರಿ ಒರಗಿರಲು ನೋಡಿ
ಆ ಸ್ವಿಸ್ ಬ್ಯಾಂಕ್ ಲೂಟಿ ಆದಂತೆ
ಕನಸಾಗಿ ಪಾಪಪ್ಪ ಎದ್ದಿಲ್ಲವಂತೆ

- ವಿಡಂಬಾರಿ

ಸಂಪಾದಕೀಯ

ನೀಲಿ ನರಿಯ ನಿಜ ಬಣ್ಣ

ಅಧಿಕಾರದಿಂದ ತೊಲಗಬೇಕಾದ ಮುಖ್ಯಮಂತ್ರಿಗಳೇ ರಾಜ್ಯಪಾಲರು ತೊಲಗಬೇಕೆಂದು ಅಬ್ಬರಿಸುತ್ತಿರುವುದು ಹಾಸ್ಯಾಸ್ಪದ ಮತ್ತು ಸ್ವಯಂ ಸಮರ್ಥನೆಯ ಹಾದಿ ತಪ್ಪಿಸುವ ಕ್ರಮವಾಗಿದೆ. ಮುಖ್ಯಮಂತ್ರಿಗಳು ಭಾಗಿಯಾಗಿರುವ ಭೂ ಹಗರಣಗ ಪ್ರಕರಣಗಳ ಬಗ್ಗೆ ದೂರು ದಾಖಲಿಸಲು ರಾಜ್ಯಪಾಲರು ಅನುಮತಿ ನೀಡಿರುವುದು ಸರಿಯೇ, ತಪ್ಪೇ ಎಂಬ ಬಗ್ಗೆ ಗಂಟೆಗಟ್ಟಲೇ ಚರ್ಚೆ ನಡೆಸಿ ವಿವಾದ ಸೃಷ್ಟಿಸಬಹುದಾದರೂ ಅತ್ಯಂತ ಉನ್ನತ ಸ್ಥಾನದಲ್ಲಿರುವ ಮುಖ್ಯಮಂತ್ರಿಯವರು ತಮ್ಮ ಮೇಲೆಯೇ ಆರೋಪಗಳು ಬಂದಾಗ ಆ ಸ್ಥಾನ ತ್ಯಜಿಸುವುದು ನೈತಿಕ ಕ್ರಮ ಮಾತ್ರವಲ್ಲ ತನಿಖೆಯು ಸೂಕ್ತವಾಗಿ, ನಿಷ್ಪಕ್ಷಪಾತದಿಂದ ನಡೆದು ಸತ್ಯ ಹೊರಬರಬೇಕಿರುವಲ್ಲಿ ತುಂಬಾ ಅಗತ್ಯವಿದೆ. ಇಲ್ಲವಾದರೆ ಮುಖ್ಯಮಂತ್ರಿಯಂತಹ ಪ್ರಧಾನ ಅಧಿಕಾರ ಕೇಂದ್ರ ಸ್ಥಾನದಲ್ಲಿದ್ದು, ದಾಖಲೆ, ಸಾಕ್ಷಿಗಳನ್ನು ತಿರುಚುವ ಇಲ್ಲವೇ ನಾಶಪಡಿಸುವ ಕೃತ್ಯಗಳು ನಡೆಯುವ ಎಲ್ಲಾ ಅವಕಾಶ, ಸಂಭವಗಳೂ ಇವೆಯೆಂದೇ ರಾಜೀನಾಮೆ ಸಲ್ಲಿಸಲು ಆಗ್ರಹಿಸಲಾಗುತ್ತಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರಲ್ಲಂತೂ ಇಂತಹ ಸತ್ ಪರಂಪರೆ, ಸೂಕ್ಷ್ಮತೆ, ನ್ಯಾಯ ನಿಷ್ಠುರತೆ ಕಾಣುವುದೇ ಇಲ್ಲ, ಬದಲಾಗಿ ಏನಾದರೂ, ಎಂತಾದರೂ ಅಧಿಕಾರವನ್ನು ಉಳಿಸಿಕೊಳ್ಳುವ, ಅಕ್ರಮ ಹಗರಣಗಳನ್ನು ದಕ್ಕಿಸಿಕೊಳ್ಳುವ ಭಂಡತನವೇ ಎದ್ದು ಕಾಣುತ್ತದೆ. ಆದ್ದರಿಂದಲೇ ಅವರು ರಾಜ್ಯಪಾಲರು, ವಿರೋಧಪಕ್ಷಗಳ ಮೇಲೆ ಎಲ್ಲೇ ಮೀರಿ ಧಾಳಿ ನಡೆಸಿ, ದ್ವೇಷದ ರಾಜಕಾರಣ ನಡೆಸುತ್ತಿದ್ದಾರೆ.

ಮುಖ್ಯಮಂತ್ರಿಗಳ ಮೇಲೆ ದೂರು ನೀಡಲು ಅನುಮತಿ ನೀಡಿದ ಮೇಲಂತೂ ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರದ ನಡುವಿನ ಸಂಘರ್ಷ ವಿಪರೀತ ಹಂತಕ್ಕೆ ಹೋಗುತ್ತಿದೆ. ಜನವರಿ 26 ರಂದು ಎಂದಿನಂತೆ ನಡೆದ ಚಹಾಕೂಟಕ್ಕೆ ಶಿಷ್ಟಾಚಾರದಂತೆ ಹೋಗದೇ ಮುಖ್ಯಮಂತ್ರಿಗಳು ಹೊಸ ದಾಖಲೆ ಸೃಷ್ಟಿಸಿಬಿಟ್ಟಿದ್ದಾರೆ. ಇದು ಅನಪೇಕ್ಷಿತ, ಅನಗತ್ಯ.

ರಾಜ್ಯಪಾಲರ ಕ್ರಮಗಳ ಬಗ್ಗೆ ಅಸಮಾಧಾನ, ಭಿನ್ನಾಭಿಪ್ರಾಯವಿದ್ದರೆ ಕಾನೂನು, ಸಂವಿಧಾನಾತ್ಮಕ ಕ್ರಮಗಳನ್ನು ಆಧರಿಸಿ ಎದುರಿಸಬಹುದಿತ್ತು. ಆದರೆ ಅಂತಹ ಯಾವುದನ್ನೂ ಅನುಸರಿಸಲು ಸಿದ್ದರಿಲ್ಲ, ಅದಕ್ಕೆ ವಿಶ್ವಾಸವಿಲ್ಲ. ದೂರು ದಾಖಲಿಸುವ ಅನುಮತಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಸಾರಿದ್ದ ಅವರೇ ನಂತರ ಹಿಂದೆ ಸರಿದದ್ದು ಅದು ತಿರುಗೇಟಾಗುವ ಭಯದಿಂದ, ಅಲ್ಲದೇ ಕೆಳಹಂತಗಳಿಂದಲೇ ಮೇಲ್‌ವರೆಗೆ ಹೋಗುವ ಕಾಲಹರಣದಲ್ಲಿ ಅಧಿಕಾರದಲ್ಲೇ ಮುಂದುವರಿಯುವ ತಂತ್ರವಾಗಿಯೇ. ಹೀಗೆಲ್ಲಾ ಹಾದಿ ತಪ್ಪಿಸುತ್ತಾ, ಕಪ್ಪು ಮಸಿ ಬಳಿದುಕೊಂಡ ರಾಜ್ಯ ಮುಖಂಡತ್ವಕ್ಕೆ, ಬುದ್ಧಿ ಹೇಳಿ ಸರಿದಾರಿಗೆ ತರಬೇಕಾಗಿದ್ದ 'ನೈತಿಕ ಪೋಲೀಸ್' ಬಿಜೆಪಿ ಹೈಕಮಾಂಡ್ ಆ ಎಲ್ಲಾ ಹುನ್ನಾರಗಳನ್ನು ಸಕ್ರಿಯವಾಗಿ ಸಮರ್ಥಿಸಿಕೊಳ್ಳುತ್ತಿರುವುದು ರಾಷ್ಟ್ರದ ನಾಯಕರೂ ಇವುಗಳಲ್ಲಿ ತೊಡಗಿರುವ ಆಳ ನಂಟನ್ನು ತೋರಿಸುತ್ತದೆ.

ಹೀಗೆಲ್ಲಾ ಸಮರ್ಥಿಸಿಕೊಂಡು, ದಕ್ಕಿಸಿಕೊಳ್ಳಲು ಹವಣಿಸುತ್ತಿದ್ದರೂ ಸತ್ಯ ಮುಚ್ಚಿಡಲಾಗದ ಅನಿವಾರ್ಯ ಒತ್ತಡವನ್ನು ಬಿಜೆಪಿ ಎದುರಿಸುತ್ತಿರುವುದು ರಾಷ್ಟ್ರೀಯ ವಕ್ತಾರ ಜಾವಡೇಕರ್‌ರವರ ಮಾತುಗಳಲ್ಲಿ ವ್ಯಕ್ತವಾಗಿದೆ. ಅವರು ಬಿಜೆಪಿ ಪಕ್ಷವೂ ಸಹ ಹಗರಣಗಳ ಆರೋಪಗಳ ಬಗ್ಗೆ ಆಂತರಿಕ ತನಿಖೆ ನಡೆಸುತ್ತಿರುವುದಾಗಿ, ಒಂದು ತಿಂಗಳಲ್ಲಿ ಅದು ಮುಗಿಯಬಹುದೆಂದು ಹೇಳುವ ಮೂಲಕ ಅಕ್ರಮಗಳನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಇದು ಒಂದೆಡೆ ಮುಖ್ಯಮಂತ್ರಿ ಯಡಿಯೂರಪ್ಪನವರ ಮೇಲಿನ ಒಂದು ವ್ಯವಹಾರಿಕ ಉದ್ದೇಶದ ಲೆಕ್ಕ ಚುಕ್ತಾದ ದಬಾವಣೆಯಾಗಿಯೂ, ತೀರಾ ಅನಿವಾರ್ಯವಾದರೆ ಸರ್ಕಾರ ಉಳಿಸಿಕೊಳ್ಳಲು ನಡೆಸಿರುವ ತಂತ್ರ-ಕುತಂತ್ರಗಳ ಜೊತೆಗೆ ನಡೆಸುವ ನಾಯಕತ್ವ ಬದಲಾವಣೆಯ ಸರ್ಕಸ್ಸಿಗೆ ಮೆಟ್ಟಿಲಾಗಿಯೂ ಬಳಸುವ ಕಣ್ಣೊರೆಸುವ ಇರಾದೆಯನ್ನೂ ನಿರಾಕರಿಸುವಂತಿಲ್ಲ. ಆದರೆ ಒಟ್ಟಾರೆ ಭ್ರಷ್ಟಾಚಾರ, ಪಾರದರ್ಶಕತೆ ಬಗ್ಗೆ ಬೊಗಳೆ ಹೊಡೆಯುವ ಬಿಜೆಪಿ ತನ್ನ ಹೊಲಸಲ್ಲಿ ಮುಳುಗೇಳುತ್ತಾ ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ನೈತಿಕತೆ ಕಳೆದುಕೊಂಡು ನೆಲ ಕಚ್ಚಿದೆ. ರಾಜ್ಯಪಾಲರನ್ನು ವಾಪಸ್ಸು ಕರೆಸಿಕೊಳ್ಳಲು ಆಗ್ರಹಿಸಿ ಅಡ್ವಾಣಿ, ಸುಷ್ಮಾ, ಜೇಟ್ಲಿ ಹಾಗೂ ರಾಜ್ಯದ ಸಂಸದರು, ನಾಯಕರ ರಾಷ್ಟ್ರಪತಿ ಭೇಟಿಯೂ ಅರ್ಥ ಕಳೆದುಕೊಂಡಿದೆ. ಯಡಿಯೂರಪ್ಪನವರ ರಾಜೀನಾಮೆ ಪಡೆದು ಒಂದು ಹೆಜ್ಜೆ ಮುಂದೆ ಇಟ್ಟಿದ್ದರೆ ಕನಿಷ್ಠ ಒಂದು ಅರ್ಥವಾದರೂ ಬರುತ್ತಿತ್ತು. ಆದರೆ ಹೈಕಮಾಂಡ್ ಸಹ ಹಾಲಿ ಸಿ.ಎಂ. ರವರ ಬ್ಲಾಕ್‌ಮೇಲ್ ಬಲೆಯಲ್ಲೇ ಇರುವಾಗ ಅದು ಸಾಧ್ಯವಾಗುವುದಾದರೂ ಹೇಗೆ?

ಈಗಲೂ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಆಡಳಿತದತ್ತ, ಜನರ ಪ್ರಶ್ನೆಗಳತ್ತ ಗಮನ ನೀಡುತ್ತಿಲ್ಲ. ವಿಧಾನಸಭೆಯಲ್ಲೂ ಕೂರುತ್ತಿಲ್ಲ. ಆಡಳಿತ ಜನರ ಪಾಲಿಗೆ ಇಲ್ಲವಾಗಿದೆ. ಮಠಮಂದಿರ, ಯಜ್ಞಗಳಲ್ಲಿ ಕುರ್ಚಿ ಉಳಿಸಿಕೊಳ್ಳುವ ಮಂತ್ರ ಪಠಣದಲ್ಲಿ ಕಾಲ ಕಳೆಯದೇ, ಸೇಡಿನ ರಾಜಕಾರಣ ನಡೆಸದೇ ತೊಲಗಬೇಕೆಂಬ ಜನರ ಆಗ್ರಹಕ್ಕೆ ಅವರು ಮಣಿಯಲೇಬೇಕು. ತಾವು ಅಧಿಕಾರದಲ್ಲಿ ಉಳಿದುಕೊಳ್ಳಲು ಮಾಜಿ ಮುಖ್ಯಮಂತ್ರಿ, ಕುಮಾರಸ್ವಾಮಿ, ಬಳಗದ ಮೇಲೂ ಲೋಕಾಯುಕ್ತರಲ್ಲಿ ದೂರು ಸಲ್ಲಿಸಿ ಬೆದರಿಕೆ ಹಾಕುವುದು ಯಾವ ಮಟ್ಟದಲ್ಲಿಯೂ ತಮ್ಮನ್ನು ದೋಷಮುಕ್ತ ನನ್ನಾಗಿಸಿಕೊಳ್ಳಲು ಅಸಾಧ್ಯವೆಂಬುದನ್ನು ತಿಳಿಯಬೇಕು. ಎಂದಿದ್ದರೂ 'ನೀಲಿ ನರಿ'ಯ ನಿಜ ಬಣ್ಣ ಮಳೆಗಾಲದಲ್ಲಾದರೂ ಬಯಲಾಗಿಯೇ ತೀರುತ್ತದೆ' ಎಂಬ ಸತ್ಯ ನೆನಪಿಸಿಕೊಳ್ಳಬೇಕು. ಜನರ ಎಚ್ಚರ ಪ್ರತಿರೋಧವೇ ಅಂತಹ ಮಳೆಯಾಗಿದೆ. ○


ಭ್ರಷ್ಟರ ರಕ್ಷಣೆಗೆ ಕರ್ನಾಟಕ ಬಂದ್

ಕಳ್ಳನೇ ಪೊಲೀಸನನ್ನು ದಬಾಯಿಸಿದ ಪ್ರಸಂಗ

ಮುಖ್ಯಮಂತ್ರಿ ಯಡಿಯೂರಪ್ಪನವರ ಮೇಲೆ ದೂರು ದಾಖಲಿಸಲು ವಕೀಲರಿಬ್ಬರಿಗೆ ಅನುಮತಿ ನೀಡಿದ 'ರಾಜ್ಯಪಾಲರು ಕರ್ನಾಟಕದ ಆರು ಕೋಟಿ ಜನರಿಗೆ ಅಪಮಾನ ಎಸಗಿದ್ದಾರೆ. ವಿರೋಧಪಕ್ಷಗಳ ಮಾತುಗಳನ್ನು ಕೇಳಿ ಹೀಗೆಲ್ಲಾ ಮಾಡಲಾಗುತ್ತಿದೆ" ಎಂದೆಲ್ಲಾ ಆರೋಪಿಸಿ ಬಿಜೆಪಿ ಹಾಗೂ ರಾಜ್ಯ ಸರ್ಕಾರ ಪ್ರತಿಕ್ರಿಯೆಗೆ ಆಯ್ಕೆ ಮಾಡಿಕೊಂಡಿದ್ದು, ಜನವರಿ 22ರ 'ಕರ್ನಾಟಕ ಬಂದ್' ನ್ನು ಭೂ ಹಗರಣದಲ್ಲಿ ಆರೋಪಿಯಾಗಿರುವ ಮುಖ್ಯಮಂತ್ರಿಗಳು ಹಾಗೂ ಸಹಚರರ ಮೇಲೆ ದೂರು ದಾಖಲಿಸಲು ಅನುಮತಿ ದೊರೆಯುತ್ತಿದ್ದಂತೆಯೇ ಆಕ್ರೋಶಗೊಂಡ ಬಿಜೆಪಿ ಬಣ ಕೆಂಡಮಂಡಲವಾಗಿದ್ದದ್ದು ಸಹಜ.

ಭುಗಿಲೇನಲ್ಲ

'ಇದು ದಿಢೀರನೇ ಜನರಿಂದಾದ ಸ್ವಯಂ ಪ್ರೇರಣೆಯ ಬಂದ್' ಎಂದೇನೋ ಬಿಜೆಪಿ ವ್ಯಾಖ್ಯಾನಿಸಿ ತಮ್ಮ ಮೇಲಿನ ಕಾನೂನಾತ್ಮಕ ಪರಿಣಾಮದಿಂದ ತಪ್ಪಿಸಿಕೊಳ್ಳಲು ಬಹುವಾಗಿ ಪ್ರಯತ್ನಿಸುತ್ತಿದೆ. ಅವರು ಹೇಳುವಂತೆ ಇದೇನು ಜನ ಸಿಡಿದೆದ್ದು ಮಾಡಿದ ಬಂದ್ ಏನೂ ಅಲ್ಲ! ಸ್ವಯಂಪ್ರೇರಣೆಯದ್ದು ಅಲ್ಲ, ಹಾಗೆ ನೋಡಿದರೆ ನಾಗರೀಕರಿಬ್ಬರ ಕೋರಿಕೆಯಂತೆ ಭೂ ಹಗರಣದಲ್ಲಿ ದೂರು ದಾಖಲಿಸುವ ಮೊದಲು ರಾಜ್ಯಪಾಲರು ಕಡತಗಳನ್ನು ಪರಿಶೀಲನೆಗೆಂದು ತರಿಸಿಕೊಂಡಾಗಲೇ, ಅವರು ಅನುಮತಿ ನೀಡಬಹುದೆಂಬ ಅನುಮಾನದ ಸುಳಿಯಲ್ಲಿದ್ದ ಅವರು ಅನುಮತಿ ನೀಡದಂತೆ ರಾಜ್ಯಪಾಲರ ಮೇಲೆ ಒತ್ತಡ ಹೇರುವ ತಂತ್ರಗಳನ್ನು ಹೆಣೆಯತೊಡಗಿದ್ದರು.' ಸಂಪುಟದಲ್ಲಿ ಅನುಮತಿ ನೀಡಬಾರದೆಂದು ಕೋರುವ ನಿರ್ಣಯ ತೆಗೆದುಕೊಂಡು ಸಂವಿಧಾನಾತ್ಮಕ ಸಮಸ್ಯೆ ಸೃಷ್ಟಿಸಿ





ಕೃಪೆ : ಪ್ರಜಾವಾಣಿ

ಅಡ್ಡಿ ಮಾಡುವುದಲ್ಲದೇ, ರಾಜಭವನ-ರಾಷ್ಟ್ರಪತಿ ಭವನಕ್ಕೆ ಪರೇಡ್ ಮಾಡುವ, ಬಂದ್ ನಡೆಸುವ ಒತ್ತಡವನ್ನು ಹಾಕಿತ್ತು. ಅದರಂತೆ ಈ ಬಂದ್ ನಡೆದಿದೆ. ಎಲ್ಲಾ ಲೆಕ್ಕಾಚಾರದಂತೆ ಇಡೀ ಸರ್ಕಾರವೇ ತನ್ನ ಆಡಳಿತ ಯಂತ್ರವನ್ನು ಪೂರ್ಣವಾಗಿ ತೊಡಗಿಸಿದೆ. ಕಾರ್ಯಕರ್ತರೆಂಬ ಅದರ ಕೆಲವು ಪುಂಡರು ಬಸ್‌ಗಳಿಗೆ ಬೆಂಕಿಯಿಕ್ಕುವುದು, ಸಾರ್ವಜನಿಕರ ಆಸ್ತಿ-ಪಾಸ್ತಿ ನಾಶ ಮಾಡಿದ ಇಂತಹ ದಾಂಧಲೆಗಳಿಗೆ ಪೋಲೀಸರ 'ಮೌನ' ಬೆಂಬಲ ಇದ್ದುದಲ್ಲದೇ ಸಾರ್ವಜನಿಕ ಸಾರಿಗೆ ಬಸ್‌ಗಳ ನಿಲುಗಡೆ, ಶಾಲಾ-ಕಾಲೇಜ್ ಮುಚ್ಚಿದ್ದು, ಬಹುತೇಕ ಸಂಚಾರವನ್ನು ಕುಂಠಿತಗೊಳಿಸಿ, ಜನಜೀವನ ಅಸ್ತವ್ಯಸ್ತಗೊಳಿಸಿ ಬಿಟ್ಟಿತು. ಬಲವಂತ ಮಾಡದೇ, ಸ್ವಯಂ ಪ್ರೇರಣೆಗೆ ಬಿಟ್ಟಿದ್ದರೆ ಈ ಬಂದ್ ಹೇಗಿರುತ್ತಿತ್ತು ಎಂಬುದನ್ನು ನೋಡಬೇಕಿತ್ತು. ಇಂತಹ ಸರ್ಕಾರಿ ಪ್ರಾಯೋಜಿತ ಬಂದ್ ಜನರ 'ಮುಗಿಲು ಮುಟ್ಟಿದ ಆಕ್ರೋಶದ ಭುಗಿಲೇನಲ್ಲ'.

ಯಾರ ಹಿತಕ್ಕಾಗಿ?

ಹೀಗೆ ಜನಜೀವನವನ್ನು ಇದ್ದಕ್ಕಿದ್ದಂತೆಯೇ ಅರಾಜಕವಾಗಿ ಅಸ್ತವ್ಯಸ್ತಗೊಳಿಸಿ ಶಾಂತಿ ಕದಡಿದ ಈ ಬಂದ್‌ಬಗ್ಗೆ ಏನೆನ್ನುವುದು? ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಬಂದ್, ಅಥವಾ ಸಾರ್ವತ್ರಿಕ ಮುಷ್ಕರ ಎಂಬುದು ಕೂಡ ಜನರ ಪ್ರತಿಭಟನೆಯ ವಿಶಿಷ್ಟ ಅನಿವಾರ್ಯ ವಿಧಾನ. ಆಳುವವರಿಗೆ ಜನತೆ ನೀಡುವ ಸಾಮೂಹಿಕ ಆಗ್ರಹದ ಕೂಗು. ಸ್ವಾತಂತ್ರ್ಯ ಪೂರ್ವದಲ್ಲಿಯೂ, ನಂತರದಲ್ಲಿಯೂ ಆಳುವ ವರ್ಗಗಳ ನೀತಿಗಳೆದುರು ಅನೇಕ ಬಂದ್‌ಗಳು ಪರಿಣಾಮಕಾರಿ ಪಾತ್ರ ವಹಿಸಿವೆ. ಯಥಾ ಸ್ಥಿತಿಯನ್ನು ಒಂದು ಮಟ್ಟಿಗೆ ಬದಲಿಸಿವೆ. 80-90ರ ಈ ದಶಕಗಳಲ್ಲಿಯೂ ಕಾರ್ಮಿಕ ವರ್ಗ ಕರೆ ನೀಡಿದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳು ದೇಶದಲ್ಲಿ ಹೊಸ ರಾಜಕೀಯ ಬದಲಾವಣೆಗೆ ಇಂಬು ನೀಡಿವೆ. ಬೆಲೆ ಏರಿಕೆ ವಿರುದ್ಧ ಎಡಪಕ್ಷಗಳ ಇಂತಹ ಇತ್ತೀಚಿನ ಕರೆ ಆಳುವವರು ಮೂಲೆಗೊತ್ತಿದ್ದ ಪ್ರಶ್ನೆಯನ್ನು ಮತ್ತೇ ಕೇಂದ್ರದ ವಿಷಯವನ್ನಾಗಿಸಿತು ಎಂಬುದನ್ನು ಗಮನಿಸಬೇಕು. ಇವುಗಳಲ್ಲಿ ಇಡೀ ದೇಶದ ಹಿತವಿತ್ತು. ಜನತೆಯ ಗಹನವಾದ ಪ್ರಶ್ನೆಗಳಿದ್ದವು. ಆದರೆ ಬಿಜೆಪಿ ರಾಜ್ಯ ಸರ್ಕಾರ ನೀಡಿದ 22 ರ ಬಂದ್ ಕರೆಯಲ್ಲಿ ಯಾವ ಸಾರ್ವಜನಿಕ ಉದ್ದೇಶವಿತ್ತು? ನಮ್ಮ ದೇಶದ ಅತ್ಯಮೂಲ್ಯ ಪ್ರಾಕೃತಿಕ ಸಂಪತ್ತನ್ನು ಸಂರಕ್ಷಿಸಲೆಂದೇ, ಅಕ್ರಮ ಭೂ ಗಣಿಗಳ್ಳರನ್ನು ಶಿಕ್ಷಿಸಬೇಕೆಂದೋ? ಅಂತಹ ಯಾವುದೇ ಪ್ರಶ್ನೆಗಳೇ ಇರಲಿಲ್ಲ. ಬದಲಾಗಿ ಭೂಗಳ್ಳತನ, ಡಿ ನೋಟಿಫಿಕೇಷನ್ ಹಗರಣಗಳು, ಅಕ್ರಮಗಳಲ್ಲಿ ತೊಡಗಿ ಹಲವಾರು ದಾಖಲೆಗಳ ಸಮೇತ ಸಿಕ್ಕಿಬಿದ್ದಿರುವ ಭ್ರಷ್ಟ ಮುಖ್ಯಮಂತ್ರಿಯನ್ನು, ರಕ್ಷಿಸಲೆಂದೇ 'ಬಂದ್'ಗೆ ಕರೆ ನೀಡಲಾಗಿತ್ತು. ಇಂತಹ

ಪುಟ 15ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಶು ವೈದ್ಯಕೀಯ ವಿ.ವಿ. ಯ ಭೂಮಿ ಕಬಳಿಸಲು ವ್ಯವಸ್ಥಿತ ಸಂಚು

■ ಲಿಂಗರಾಜು, ಬೆಂಗಳೂರು

ರಾಜ್ಯ ಬಿಜೆಪಿ ಸರ್ಕಾರದ ಎರಡೂವರೆ ವರ್ಷಗಳ ಈ ಅವಧಿಯಲ್ಲಿ ಸರ್ಕಾರ ತೆಗೆದುಕೊಂಡ ಬಹುತೇಕ ಯಾವುದೇ ತೀರ್ಮಾನಗಳು ವಿವಾದಮುಕ್ತ ಎನಿಸಿಕೊಂಡ ಯಾವ ತೀರ್ಮಾನಗಳು ಕಾಣುತ್ತಿಲ್ಲ. ನೈಜ ಪ್ರಗತಿಯ ಉದ್ದಿಶ್ಯ ಹೊಂದಿರುವ ಸರ್ಕಾರಗಳಿಂದ ಮಾತ್ರ ವಿರೋಧ ಪಕ್ಷಗಳೂ ತಲೆಬಾಗುವಂತಹ ಪ್ರಶ್ನಾತೀತ ತೀರ್ಮಾನಗಳು ಬರಲು ಸಾಧ್ಯ.

ರಾಜ್ಯದ ಬಿಜೆಪಿ ಸರ್ಕಾರ ಲೂಟಿಗಾಗಿ ಅಧಿಕಾರಕ್ಕೆ ಬಂದಿತೆಂಬುದನ್ನು ಇತ್ತೀಚಿನ ಅದರ ಭೂಹಗರಣಗಳೇ ಸಾಕ್ಷೀಕರಿಸಿದೆ. ಇದನ್ನು ಪುಷ್ಠೀಕರಿಸುವಂತೆ ಪಶುವೈದ್ಯಕೀಯ ವಿಶ್ವವಿದ್ಯಾನಿಲಯ ಆವರಣದಲ್ಲಿ ನ್ಯಾಯಮೂರ್ತಿಗಳಿಗೆ ವಸತಿ ಕಲ್ಪಿಸುವ ತೀರ್ಮಾನವೊಂದು ಇತ್ತೀಚಿನ ಸಂಪುಟ ಸಭೆಯಲ್ಲಿ ಹೊರಬಿದ್ದಿದೆ.

ಬೆಂಗಳೂರು ನಗರದ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆಯ ಹೆಬ್ಬಾಳದ ಬಳಿ ಇರುವ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಅಗತ್ಯ ಮೂಲಭೂತ ಸೌಕರ್ಯಗಳಿಲ್ಲದೆ ಸರ್ಕಾರಗಳ ನಿರ್ಲಕ್ಷದ ದಾಳಿಗೆ ಒಳಗಾಗಿ ಸೊರಗಿನಿಂತಿದೆ.

24 ಡಿಸೆಂಬರ್ 2010 ರಂದು ನಡೆದ ರಾಜ್ಯ ಸಚಿವ ಸಭೆಯಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳ ವಸತಿಗಾಗಿ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯದ 20 ಎಕರೆ



ಭೂಮಿಯನ್ನು ನೀಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ಸುಪ್ರಿಂಕೋರ್ಟ್ ನೀಡಿದ ನಿರ್ದೇಶನದ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ.

ಒಟ್ಟು 75 ಎಕರೆ ಪ್ರದೇಶದಲ್ಲಿ 20 ಎಕರೆ ನೀಡುವುದೆಂದರೆ ಕೇವಲ 55 ಎಕರೆಯಲ್ಲಿ ವಿಶ್ವವಿದ್ಯಾಲಯವನ್ನು ಭವಿಷ್ಯದಲ್ಲಿ ಅಭಿವೃದ್ದಿಪಡಿಸುವುದಾದರೂ ಹೇಗೆ? ಅದೂ ಕೂಡ ಪಶು ವೈದ್ಯಕೀಯ ವಿ.ವಿ.ಯನ್ನು ಯಾವುದೇ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ವಿ.ವಿ.ಯ ವಿಸ್ತೀರ್ಣ ಅತ್ಯಂತ ಕಡಿಮೆಯಿದೆ.

ಬೆಂಗಳೂರು ವಿ.ವಿ. 1100 ಎಕರೆ, ಮೈಸೂರು ವಿ.ವಿ. 739 ಎಕರೆ, ಗುಲ್ಬರ್ಗಾ ವಿ.ವಿ. 860 ಎಕರೆ ವಿಸ್ತೀರ್ಣ ಹೊಂದಿವೆ. ಇವುಗಳಿಗೆ ಹೋಲಿಸಿದರೆ ಭೂಮಿ ಏನೇನೂ ಸಾಲದು. ಹೀಗಿದ್ದೂ ಕೂಡ 20 ಎಕರೆ ಜಮೀನು ನೀಡಲು ಮುಂದಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಆಯಕಟ್ಟಿನ ಜಾಗದಲ್ಲಿರುವ ಕೋಟ್ಯಾಂತರ ರೂ. ಬೆಲೆಬಾಳುವ ಭೂಮಿ ಉಳ್ಳವರ ಬಾಯಲ್ಲಿ ನೀರೂರಿಸದೆ ಇರುತ್ತದೆಯೇ? ವಿಶ್ವಾಸನೀಯ ಮೂಲಗಳ ಪ್ರಕಾರ ಮುಂದಿನ ದಿನಗಳಲ್ಲಿ ಪೂರ್ತಿಯಾಗಿ ವಿಶ್ವವಿದ್ಯಾಲಯವನ್ನೇ ಸ್ಥಳಾಂತರಿಸಿ ಎಂ.ಪಿ, ಎಂ.ಎಲ್.ಎ ಗಳಿಗೆ, ಐ.ಎ.ಎಸ್. ಅಧಿಕಾರಿಗಳಿಗೆ ಲೇಔಟ್ ಮಾಡಲು ಆಲೋಚಿಸಲಾಗಿದೆ ಎಂದು ಹೇಳಲಾಗುತ್ತಿದೆ. ನಿಧಾನವಾಗಿ ಇಡೀ ಆವರಣವನ್ನು ಆವರಿಸುವ ಈ ದುಷ್ಕೃತ್ಯಕ್ಕೆ ಬಿ.ಜೆ.ಪಿ ಸರ್ಕಾರ ನೀರು ಗೊಬ್ಬರ ಹಾಕಿ ಪೋಷಿಸುತ್ತಿದೆ.

ವಿ.ವಿ. ಕಾಯ್ದೆಯ ಸ್ಪಷ್ಟ ಉಲ್ಲಂಘನೆ

ಸುಪ್ರಿಂ ಕೋರ್ಟ್ ನಿರ್ದೇಶನ ಹೊರಬಿದ್ದ ನಂತರ ಪಶು ವೈದ್ಯಕೀಯ ವಿ.ವಿ.ಗೆ ಪತ್ರ ಬರೆದ ಸರ್ಕಾರ 20 ಎಕರೆ ಭೂಮಿ ನೀಡುವಂತೆ ಕೋರಲಾಗಿ ಇದಕ್ಕೆ ಪ್ರತಿಯಾಗಿ ವಿ.ವಿ. ಆಡಳಿತ ಮಂಡಳಿ ಪ್ರತಿಕ್ರಿಯಿಸಿ "ಕೃಷಿ ವಿಶ್ವವಿದ್ಯಾನಿಲಯವು 60 ಹೆಕ್ಟೇರ್ ಭೂಮಿ ನೀಡಬೇಕಾಗಿದ್ದು, ಒಂದು ವೇಳೆ ನೀಡಿದರೆ ಪರಿಶೀಲಿಸಲಾಗುವುದೆಂದು ಹೇಳಿದೆ. ಇದನ್ನೇ ನೆಪವಾಗಿಟ್ಟುಕೊಂಡು ಸಂಪುಟಸಭೆಯಲ್ಲಿ ಏಕಾಏಕಿ ತೀರ್ಮಾನಕ್ಕೆ ಬರಲಾಗಿದೆ.

ಸರ್ಕಾರದ ಈ ತೀರ್ಮಾನದ ವಿರುದ್ದ ವಿ.ವಿ. ಒಕ್ಕೊರಲ ವಿರೋಧ ವ್ಯಕ್ತಪಡಿಸಿ ಸರ್ಕಾರಕ್ಕೆ ಪತ್ರ ಬರೆದಿದೆ. ಹೀಗಿದ್ದೂ ಕೂಡ ಭೂಮಿ ಪಡೆದೇ ತೀರಲು ಸರ್ಕಾರ ಫರ್ಮಾನು ಹೊರಡಿಸಿದೆ. ವಿ.ವಿ. ಆಡಳಿತ ಮಂಡಳಿಯ ಒಪ್ಪಿಗೆ ಇಲ್ಲದೆ ಸರ್ಕಾರ ವಿ.ವಿ. ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಲು ಬರುವುದಿಲ್ಲ. ಹಾಗೊಂದು ವೇಳೆ ತೀರ್ಮಾನ ತೆಗೆದುಕೊಂಡರೆ ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳ ಶಿಕ್ಷಣ, ಸಂಶೋಧನೆ ಮೇಲೆ ಇದು ಮಾರಕ ಪರಿಣಾಮ ಬೀರಲಿದೆ. ರಾಜ್ಯದ, ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬಹುದಾದ ವಿಶ್ವವಿದ್ಯಾನಿಲಯಕ್ಕೆ ಈ ಸ್ಥಿತಿ ಬಂದಿರುವುದು ದುರದೃಷ್ಟಕರ.

ಪರ್ಯಾಯ ವ್ಯವಸ್ಥೆ ಇಲ್ಲವೇ.....?

ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ವಸತಿ ಕಲ್ಪಿಸಲು ಭೂಮಿ ನೀಡುವುದು ತಪ್ಪಲ್ಲ. ಇದಕ್ಕೆ ಯಾರ ವಿರೋಧವೂ ಇರಲಾರದು. ಆದರೆ ಒಂದು ಪ್ರತಿಷ್ಠಿತ ವಿಶ್ವವಿದ್ಯಾನಿಲಯವನ್ನೇ ಬಲಿತೆಗೆದುಕೊಂಡು, ಅದರ ಮೇಲೆ ವಸತಿ ನಿರ್ಮಿಸುವುದು ಯಾವ ನ್ಯಾಯ....?

ಎ.ಟಿ.ರಾಮಸ್ವಾಮಿ ನೇತೃತ್ವದ ಆಯೋಗ ಬೆಂಗಳೂರು ನಗರದಲ್ಲಿ 44 ಸಾವಿರ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುವುದಾಗಿ ವರದಿ ನೀಡಿರುವುದು ಸರ್ಕಾರಕ್ಕೆ ತಿಳಿಯದ ಸಂಗತಿಯೇನಲ್ಲ. ಈ ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು

ಪುಟ 15 ಕ್ಕೆ

ಏಳಿದ್ ಮಾತ್ ಕೇಳ್ದೋರ್ಗೆ ಶೌರ್ಯ ಪ್ರಶಸ್ತಿ ಕೊಟ್ಟವ್ರಂತೆ !!!

ಕಟ್ಟೆ

ಈ. ಬಸವರಾಜು ಮಲ್ಲೇನಹಳ್ಳಿ

ಯಣ್ಣ, ಬಿದ್ರಿಗೆ ಶೌರ್ಯ ಪ್ರಶಸ್ತಿ ಬಂದದೆ, ಗೊತ್ತೆ?

ಪ್ರಶಸ್ತಿನ ಮನುಸ್ರಿಗೆ ಕೊಡದ ನೋಡಿದ್ದಿನಿ. ಮರುಕ್ಕೂ ಕೊಟ್ಟರೆ? ಅಂಗೇನಾದ್ರೂ ಕೊಟ್ರೆ ಬಿದ್ರಿಗಿಂತ ಮದ್ದು ತಂಗಿನ್ ಮರಕ್ಕೆ ಕೊಡ್ಬೇಕು ಅನ್ನದು ನನ್ನ ರೆಕ್ಮೆಂಡು.

ಬಿದ್ರಿ ಅಂದ್ರೆ ಬಿದ್ರಲ್ಲ ಕಣಣ್ಣ, ಅದೂ ಒಂದು ಹೆಸ್ರು. ಬೆಂಗ್ಳೂರಲ್ಲಿ ಪೋಲೀಸ್ ಆಫೀಸರ್ ಅವ್ನೆ. ಅವ್ನ ಯಸ್ರು ಬಿದ್ರಿ ಅಂತವ. ಬೆಂಗ್ಳೂರಿಗೆ ಪೂರ್ತಿ ಅವ್ನೆ ಯಜಮಾನಿದ್ದಂಗೆ. ಅವ್ನಿಗೆ ಶೌರ್ಯ ಪ್ರಶಸ್ತಿ ಕೊಟ್ಟವ್ರೆ.

ಶೌರ್ಯ ಪ್ರಶಸ್ತಿ ಅಂದ್ರೆ ಪ್ರಾಣ ಒಗದ್ದೂ ಮರ್ತು ಓರಾಟ ಮಾಡಿದವ್ನಿಗೆ ಕೊಡ್ತರಪ್ಪ. ಈಗ ಕಾರ್ಗಿಲ್ ಓರಾಟಾನೂ ಇಲ್ಲ, ವೀರಪ್ಪನೂ ಇಲ್ಲ. ಇವ್ನ ಎಲ್ಲಿ ಅಂತ ಓರಾಟ ಮಾಡವ್ನೆ? ಪ್ರಶಸ್ತಿ ಕೊಟ್ಟೋರ್ಯಾರು?

ಪ್ರತಿ ವರ್ಷ ಶೌರ್ಯ ಪ್ರಶಸ್ತಿ ಅಂತ ಕೊಡ್ಬೇಕು, ಕೊಟ್ಟವ್ರೆ, ಕೊಟ್ಟೋರ್ಯಾರು ಅಂದ್ರೆ ರಾಷ್ಟ್ರಪತಿಗಳು

ಆಯ್ತು ಯಾರ್ಗಾರ ಕೊಡ್ಲಿ, ಆದ್ರೆ ಯಾಕ್ ಕೊಟ್ರು, ಅಂತದೇನ್ ಇವು ಮಾಡಿದ್ರು ಅದ್ನೆಲ್ಲ ಏಳ್ಬೇಕಪ್ಪ.

ಯಾಕ್ ಕೊಟ್ಟಿರ್ ಬೌದು ಅಂತ ನೀನೇ ಏಳಪ್ಪ ನೋಡನ

ಇನ್ನಾಕೆ? ಗೌರ್ಮೆಂಟು ಏಳಿದಂಗೆ ಕೇಳ್ತರಲ ಅದ್ಕಿರ್ಬೌದು. ಇದ್ಯಾಕೇಳ್ತೀನಿ ಅಂದ್ರೆ ಈ ಮೋಲೀಸ್ನರು ನಮ್ ರೈತ್ರು ಟ್ರೈಕ್ ಮಾಡಿದ್ರೆ ಮುದುಕ್ರು-ಮೋಟ್ರು ಅನ್ನದ್ದೂ ನೋಡ್ದಂಗೆ ಲಾಟಿ ತಗಂಡು ವಡಿತರೆ. ಬೆಂಗ್ಳೂರಲ್ಲಿ ಅದ್ಯಾವ್ದೋ ರಸ್ತೆಮ್ಯಾಲೆ ಟ್ರೈಕ್ ಮಾಡ್ತಾ ಇದ್ರೆ ಯಂಗ್ ವಡುದ್ರು ಅಂದ್ರೆ ಅದ ನೋಡಕ್ಕಾಯ್ತಾ ಇರ್ಲಿಲ್ಲ. ಅವ್ರೇನು ಕಳ್ರಲ್ಲ, ಸುಳ್ರಲ್ಲ, ರೈತ್ರಪ್ಪ. ಅವರ್ನ ಅಂಗೆ ವಡುದ್ರಲ್ಲ, ಅದ್ಕೇ ಇಂತ ಪ್ರಶಸ್ತಿ ಕೊಟ್ಟಿರ್ಬೇಕು ಅಂತ ನಾನೇಳದು.

ಈ ಬಿದ್ರಿ ಅನ್ನನು ಏನಾರ ಅಲ್ಲಿದ್ನೆ?

ಇವ್ನು ಅಲ್ಲೆಲ್ಲಿರ್ತನೆ, ಅವ್ನ ಕೈಳಗೆ ಇರ್ತರಲ, ಅವ್ರಿಗೇಳಿ ವಡಿಸಿರ್ತನೆ.

ಗೌರ್ಮೆಂಟು ಏಳಿದಂಗೆ ಮೋಲೀಸ್ನರು ಕೇಳ್ತರೆ ಅಂದ್ಯಲ್ಲ, ಎಲ್ಲಿ ನೋಡಿದ್ದಿ?

ಅದ್ಕೆ ಒಂದ್ ರೂಪಾಯಿ ಕೊಟ್ಟು ಸಾಸ್ರ ಕೇಳ್ಬೇಕಾಗಿಲ್ಲ. ಮನ್ನೆ ದಿನ ಬಿಜೇಪಿ ಪಕ್ಷದೋರು ಲಂಚ ತಿಂದು ಸಿಗಾಯ್ಕಂಡು ಅದ ಮುಚ್ಚಿಕಳಕೆ ಕರ್ನಾಟಕ ಬಂದ್ ಮಾಡಿ ಬಸ್ ಸುಟ್ರಲ್ಲ, ಈ ಮೋಲೀಸ್ನರು ವಬ್ಬುನ್ನೂ ವಡೀಲಿಲ್ವಲ, ಇದ್ಕೇನೇಳ್ತಿ?

ಅವು ಅದ್ನೆಲ್ಲ ಶಾಂತಿಯುತವಾಗಿ ಮಾಡಿರ್ಬೇಕೇನೊ! ಅದ್ಕೆ ಮೋಲೀಸ್ನರು ಸುಮ್ಮೆ ಇರ್ಬೇಕು!

ಅದೇ ಯಮ್ಮೆಲ್ಲೇಗಳ್ನ ವಿದಾನ ಸೌದುಕ್ಕೆ ಬುಡ್ದೇ ಗೇಟಾಕ್ಯಂಡು ಯಡ್ಯೂರಪ್ಪ ಮೀಟಿಂಗ್ ಮಾಡ್ತಾ ಇದ್ನಲ, ಆಗ ಆಚಿಕಡೆ ಇದ್ದ ಯಮ್ಮೆಲ್ಲೇಗಳು ವಳಿಕೋಗಕೆ ಓದಾಗ ಈ ಬಿದ್ರಿ ಬಂದೂಕ ತಗಂಡು ಅಡ್ಡ ನಿಂತಿದ್ನಪ್ಪ, ಇದ್ಕೇನೇಳ್ತಿ?

ಯಡ್ಯೂರಪ್ಪ ಏಳಿರ್ಬೇಕು, ಅಂಗ್ ಮಾಡಿರ್ತನೆ?

ಅದ್ಕೇ ನಾನೇಳದು, ಮೋಲೀಸ್ನರು ಇರದು ಅದಿಕಾರ್ದಲ್ಲಿ ಯಾರವ್ರೋ ಅವ್ರು ಏಳಿದ್ ಕೇಳ್ಕಿರದು ಅಷ್ಟೆಯ. ಅದ್ಕೆ ಸರ್ಕಾರ ಅವ್ರಿಗೆ ಪ್ರಶಸ್ತಿ ಕೊಡ್ತದೆ.

ಈಗ ಪ್ರಶಸ್ತಿ ಇರ್ವಾಗ ಯಾರಿಗಾದ್ರೂ ಕೊಡ್ಬೇಬೇಕಲ್ಲ, ಅದ್ಕೆ ಕೊಡ್ತರಪ್ಪ

ನಾನೇನು ಪೇಪ್ರ ಓದದಿಲ್ಲ ಅಂದ್ಕಬ್ಯಾಡ, ಕೊಡ್ಲೂಬೌದು, ಕೊಡ್ದೇ ಇರ್ಲೂಬೌದಂತೆ. ಈಗ ಭಾರತ ರತ್ನ ಪ್ರಶಸ್ತಿ ಈ ವರ್ಷ ಯಾರಿಗೂ ಕೊಟ್ಟಿಲ್ವಪ್ಪ!

ನಿಂಗ್ಯಾಕೆ ಈ ಮೋಲೀಸ್ನರ್ ಮ್ಯಾಲೆ ಇಷ್ಟೊಂದು ಕ್ವಾಪ?

ನಂಗೇನೂ ಕ್ವಾಪ ಇಲ್ಲ ಕಣಪ್ಪ. ಆದ್ರೆ ಇವ್ರಿಗೆ ಜನಗಳ ದುಡ್ಡಿಂದ ಸಂಬ್ಳ ಕೊಡ್ತರೆ. ಇವ್ರು ನೋಡಿದ್ರೆ, ಯಾರು ಅದಿಕಾರ ನಡುಸ್ತರೋ ಅವ್ರ ಪರ್ವಾಗಿ ಕ್ಯಲ್ಸ ಮಾಡ್ತರೆ. ಜಸ್ತಿಗೆ ಮೋಲೀಸ್ನರು ತಪ್ ಮಾಡಿದ್ರೆ ಮುಚ್ಚಾಕ್ತರೆ, ನಮ್ಮಂತರು ಯರ್ರಾರ ತಪ್ ಮಾಡಿದ್ರೆ ವದ್ದು ವಳಿಕಾಕ್ತರೆ. ಇವ್ರು ಮಾಡದು ಇನ್ ಯಾವ ಗನಂದಾರಿ ಕ್ಯಲ್ಸ ಅಂತವ ಪ್ರಶಸ್ತಿ ಕೊಡ್ತರೆ ಅನ್ನದೇ ನನಿಗೆ ಗೊತ್ತಾಗವಲ್ದು. ರೈತ್ರು, ಕೂಲಿ ಮಾಡರು ಏನ್ ಕಷ್ಟ ಪಟ್ಟು ಜೀವ್ನ ಮಾಡಿ ಮಕ್ಳು ಮರಿ ಸಾಕ್ತರೆ? ಅವ್ರ ಬಗ್ಗೆ ಮಾತಾಡರು ಯಾರೂ ಇಲ್ಲ, ಇದ್ಕೆ ಕಣಪ್ಪ ನಂಗೆ ಬೇಜಾರು. ಇದ್ನೆಲ್ಲನು ಯಾರತ್ರ ಏಳದು, ಯಡ್ಯೂರಪ್ಪನ್ತ್ರ ಏಳನ ಅಂದ್ರೆ ಅವ್ನ ಅಜೀರ್ಣ ಆಗಂಗೆ ತಿಂದು ಮನಿಗ್ಗವ್ನೆ. ಅದ್ಕೆ ನಿನ್ನತ್ರ ಏಳ್ಕತಾ ಇದ್ದಿನಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮೂರನೇ ಕೇರಳ 'ಪಡನ್ ಕಾಂಗ್ರೆಸ್' "ಬೆಳವಣಿಗೆ ಬಗ್ಗೆ ಯೋಚನೆಗಳ ಹಬ್ಬ"

■ ವಸಂತ್‌ರಾಜ್ ಎನ್.ಕೆ


ಮೂರನೇ ಕೇರಳ ಪಡನ ಕಾಂಗ್ರೆಸ್ ನಿಜವಾಗಿಯೂ ಮೂರು ದಿನಗಳ 'ಬೆಳವಣಿಗೆ ಬಗ್ಗೆ ಯೋಚನೆಗಳ ಹಬ್ಬ' ಆಗಿ ಒಂದು ಮರೆಯಲಾಗದ ಅದ್ಭುತ ಅನುಭವ ನೀಡಿತು. ಇಂತಹ ಕರ್ನಾಟಕ ಅಧ್ಯಯನ ಕಾಂಗ್ರೆಸಿನ ಕನಸು ಕಾಣಲು ನಾವೂ ಆರಂಭಿಸಬಹುದೇ ?

ಕೇರಳ ಭಾರತಕ್ಕೂ ಜಗತ್ತಿಗೂ ಹಲವು ಪ್ರಥಮಗಳನ್ನು - ಚುನಾಯಿತ ಕಮ್ಯುನಿಸ್ಟ್ ಸರ್ಕಾರ, ಪೂರ್ಣ ಸಾಕ್ಷರತೆ, ಚಳುವಳಿಯೊಂದರ ಭಾಗವಾಗಿ 15 ನಿಮಿಷದಲ್ಲಿ ರಚಿತವಾದ 600 ಕಿ.ಮಿ.ಮಾನವ ಗೋಡೆ - ಕೊಟ್ಟಿದೆ. ಅದರಲ್ಲಿ "ಪಡನ ಕಾಂಗ್ರೆಸ್" ಸಹ ಒಂದು. ಪಡನ (ಪಠಣ) ಅಂದರೆ ಅಧ್ಯಯನ ಅಂತ ಮಲಯಾಳಂನಲ್ಲಿ. ಕಳೆದ ದಶಕದಿಂದ ಕೇರಳದಲ್ಲಿ ಬೆಳವಣಿಗೆಯ ಹಾದಿ ಚರ್ಚಿಸಲು ಸಂಶೋಧನೆ ಮತ್ತು ಅಧ್ಯಯನಗಳ ಎಕೆಜಿ ಕೇಂದ್ರ ಈ ಅಂತರ್‌ರಾಷ್ಟ್ರೀಯ ಕೇರಳ 'ಪಡನ ಕಾಂಗ್ರೆಸ್' ಸಂಘಟಿಸುತ್ತಿದೆ. 1994 ರಲ್ಲಿ ಮೊದಲ 'ಪಡನ ಕಾಂಗ್ರೆಸ'ನ್ನು ಸ್ವತಃ ಇಎಂಎಸ್ ಅವರೇ ಸಂಘಟಿಸಿದ್ದರು. ಐದು ವರ್ಷಗಳ ಹಿಂದೆ ಎರಡನೇ ಕಾಂಗ್ರೆಸ್ ನಡೆದಿತ್ತು. ಈ ಎರಡು ಕಾಂಗ್ರೆಸುಗಳೂ ಜಾಗತೀಕರಣದ ದಾಳಿಯ ಸಂದರ್ಭದಲ್ಲಿ ಕೇರಳದ ಅದ್ಭುತ ಸಾಮಾಜಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ಉಳಿಸಿಕೊಳ್ಳುವುದು ಹೇಗೆ ? ಕೃಷಿ-ಕೈಗಾರಿಕಾ ಉತ್ಪಾದನಾ ಶಕ್ತಿಗಳನ್ನು ಬೆಳೆಸುತ್ತಾ ಸರ್ವಾಂಗೀಣ ಆರ್ಥಿಕ ಬೆಳವಣಿಗೆ ಸಾಧಿಸುವ ಬಗೆ ಹೇಗೆ ? ಎಂಬ ಬಗ್ಗೆ ಅಧ್ಯಯನ, ಸಂಶೋಧನೆ ಮತ್ತು ಸಾಮೂಹಿಕ ಸಂವಾದಗಳ ವೇದಿಕೆಗಳಾಗಿದ್ದವು. ವಿಕೇಂದ್ರೀಕರಣ ಮತ್ತು ಪ್ರಜಾಸತ್ತಾತ್ಮಕ ಪಾಲ್ಗೊಳ್ಳುವಿಕೆಯಲ್ಲಿ ಜಾಗತಿಕವಾಗಿ ಪ್ರಸಿದ್ಧವಾದ 'ಜನತಾ ಯೋಜನೆ' ಮತ್ತು ಕಳೆದ ಎರಡು ಎಲ್ ಡಿ ಎಫ್ ಸರ್ಕಾರಗಳ ಹಲವು ಪ್ರಮುಖ ಸಫಲ ಕಾರ್ಯಕ್ರಮಗಳು ಪಡನ ಕಾಂಗ್ರೆಸುಗಳ ಕೂಸುಗಳಾಗಿದ್ದವು.

ಆದ್ದರಿಂದ ಮೂರನೇ ಪಡನ ಕಾಂಗ್ರೆಸ್ ಜನವರಿ 1 ರಿಂದ 3 ರ ವರೆಗೆ ನಡೆಯುತ್ತದೆ ಅಂತ ಗೊತ್ತಾದಾಗ ತಿರುವನಂತಪುರಕ್ಕೆ ಹೊರಟು ಬಿಟ್ಟೆ. ಅದರ ಬಗ್ಗೆ ವಿವರಗಳು ಏನೂ ಗೊತ್ತಿರಲಿಲ್ಲ. ಸಿಕ್ಕಿರಲಿಲ್ಲ. ಅಂತರ್‌ರಾಷ್ಟ್ರೀಯ ಕಾಂಗ್ರೆಸ್ ಅಂತ ಕರೆದಿರುವುದುರಿಂದ ಬಹುಶಃ ಬಹು ಭಾಗ ಇಂಗ್ಲಿಷಿನಲ್ಲಿ ಇರಬಹುದು ಅಂತ ಅಂದಾಜು ಮಾಡಿದ್ದೆ. ಆದರೆ ರಿಜಿಸ್ಟರು ಮಾಡುವ ಮೊದಲ ಕ್ಷಣದಿಂದ ಪ್ರತಿ ಹೆಜ್ಜೆಗೂ ಅಚ್ಚರಿ ಕಾದಿತ್ತು. ರಿಜಿಸ್ಟರು ಮಾಡಿದಾಗ ಕೊಟ್ಟ 50 ಪುಟಗಳ ಕಾಂಗ್ರೆಸಿನ 3-ದಿನಗಳ ಕಾರ್ಯಕ್ರಮ ಪಟ್ಟಿ ನೋಡಿದಾಗ ಗಾಬರಿ ಆಯಿತು. ಒಂದೇ ಒಂದು ಅಕ್ಷರ ಇಂಗ್ಲೀಷು ಇರಲಿಲ್ಲ! ಶುಭ್ರ ಬಿಳಿ ಪಂಚೆ ಉಟ್ಟು ಉದ್ಘಾಟನೆ ಮಾಡಿದ ಪ್ರಕಾಶ್ ಕಾರಟ್, ಪ್ರಭಾತ್ ಪಟ್ನಾಯಕ್ ಮತ್ತು ಇನ್ನಿಬ್ಬರು ಬಿಟ್ಟರೆ ಉಳಿದವರೆಲ್ಲಾ ಮಲಯಾಳಂನಲ್ಲಿ ಮಾತನಾಡಿದರು. ಪಡನ ಕಾಂಗ್ರೆಸುಗಳು 'ಬೆಳವಣಿಗೆ ಬಗ್ಗೆ ಯೋಚನೆಗಳ ಹಬ್ಬ' (ಫೆಸ್ಟಿವಲ್ ಆಫ್ ಐಡಿಯಾಸ್ ಆನ್ ಡೆವಲೆಪ್ ಮೆಂಟ್) ಎಂದು ಪ್ರಭಾತ್ ಕರೆದಿದ್ದು ಮಾತ್ರ ಅಕ್ಷರಶಃ ನಿಜವಾಗಿತ್ತು..

ಹೆಜ್ಜೆ ಹೆಜ್ಜೆಗೂ ಅಚ್ಚರಿ

ತಿರುವನಂತಪುರ ರೈಲ್ವೇ ಸ್ಟೇಶನಿನಲ್ಲಿ ಇಳಿಯುತ್ತಿದ್ದಂತೆ ಮುಗುಳ್ನಗೆಯ ಸ್ವಯಂಸೇವಕರು ಸ್ವಾಗತಿಸಿ ಮಿನಿಬಸ್ಸು ಹತ್ತಿಸಿ ವಾಸ್ತವ್ಯದ ವ್ಯವಸ್ಥೆ ಮಾಡಿರುವ ಕಾಲೇಜು ಗೆಸ್ಟ್ ಹೌಸಿಗೆ ಕರೆದೊಯ್ದರು. ಆ ಮೇಲೆ ಅದೇ ಬಸ್ಸು ಉದ್ಘಾಟನಾ ಸಮಾರಂಭ ನಡೆದ ಎಕೆಜಿ ಭವನಕ್ಕೆ ತಂದು ಬಿಟ್ಟಿತು. ಆಗಲೇ ಮೂರು ಸಾವಿರಕ್ಕೂ ಹೆಚ್ಚು ಕುರ್ಚಿಗಳಿರುವ ಎಕೆಜಿ ಹಾಲ್ ಕಿಕ್ಕಿರಿದು ತುಂಬಿತ್ತು. ಎಕೆಜಿ ಭವನದಲ್ಲೂ ಮತ್ತು ಸುತ್ತ ಮುತ್ತ ಹಬ್ಬದ ವಾತಾವರಣ. ಅಷ್ಟು ಹೊತ್ತಿಗೆ ಇಂಗ್ಲೀಷು ಬಲ್ಲ ಸಂಗಾತಿಯೊಬ್ಬರ ಸಹಾಯದಿಂದ ಕಾರ್ಯಕ್ರಮ ಪಟ್ಟಿ ಭಾಷಾಂತರ ಮಾಡಿಸಿಕೊಂಡೆ. ಕಾಂಗ್ರೆಸಿನಲ್ಲಿ ಮೂರು ಸಾವಿರ ಪ್ರತಿನಿಧಿಗಳು ರಿಜಿಸ್ಟರ್ ಮಾಡಿದ್ದಾರೆ. 700 ಜನ ಪರಿಣತರು ಪ್ರಬಂಧ ಮಂಡಿಸುವವರಿದ್ದಾರೆ. ಮೊದಲ ದಿನ ಮಧ್ಯಾಹ್ನ ಒಂಬತ್ತು ಸಂವಾದಗಳು, ಎರಡನೇ ದಿನ (ಬೆಳಿಗ್ಗೆ ಮತ್ತು ಊಟದ ನಂತರ ತಲಾ ಎರಡರಂತೆ) ನಾಲ್ಕು ಅಧಿವೇಶನಗಳಲ್ಲಿ 77 (ಪ್ರತಿ ಅಧಿವೇಶನದಲ್ಲಿ ಸುಮಾರು 20-30 ರಂತೆ) ಸಮಾನಾಂತರ ಕಾರ್ಯಾಗಾರಗಳು ಇದ್ದವು. ಕೊನೆಯ ದಿನ ಎರಡು ಅಂತರ್‌ರಾಷ್ಟ್ರೀಯ ಸೆಮಿನಾರುಗಳು ಮತ್ತು ಸಮಾರೋಪ ಇರುತ್ತದೆ. ಅಂತ ಕಾರ್ಯಕ್ರಮ ಪಟ್ಟಿ ಮತ್ತು ಸಹ-ಪ್ರತಿನಿಧಿಗಳಿಂದ ಗೊತ್ತಾಯ್ತು.



ಇವೆಲ್ಲಾ ಅಚ್ಚರಿ ಸಾಲದೆಂಬಂತೆ ಕಾಂಗ್ರೆಸಿನಲ್ಲಿ ಮಡಿಸುವ ಪ್ರಬಂಧಗಳು ಅಥವಾ ಅದರ ಸಾರ ಉಳ್ಳ ಸುಮಾರು 180 ಪುಟಗಳ ನಾಲ್ಕು ದೊಡ್ಡ ಪುಸ್ತಕಗಳನ್ನು ರಿಜಿಸ್ಟರ್ ಮಾಡುವಾಗ ಕೊಟ್ಟಿದ್ದರು. ಸುವ್ಯವಸ್ಥಿತ ಅಕಾಡೆಮಿಕ್ ಸಮ್ಮೇಳನಗಳಲ್ಲೂ ಇದು ಅಪರೂಪದ ಸಂಗತಿ. ಊಟದ ಹೊತ್ತಿಗೆ ಇನ್ನಷ್ಟು ಅಚ್ಚರಿ ಕಾದಿತ್ತು. ಊಟದ ವ್ಯವಸ್ಥೆ ಹತ್ತಿರದ ಚಂದ್ರಶೇಖರ್ ಸ್ಟೇಡಿಯಂನಲ್ಲಿ ಹಾಕಿದ ದೊಡ್ಡ ಪೆಂಡಾಲಿನಲ್ಲಿ 16 ಕೌಂಟರುಗಳಲ್ಲಿ ಆಗಿತ್ತು. ಸುಮಾರು ಮೂರುವರೆ -ನಾಲ್ಕು ಸಾವಿರ ಜನರ ಊಟ ಅರ್ಧ ಗಂಟೆಯಲ್ಲಿ ಮುಗಿದು ಹೋಗುತ್ತಿತ್ತು. ಎಲ್ಲೂ ಉದ್ದ ಕ್ಯೂ ಇರಲಿಲ್ಲ. ಈ ಸುವ್ಯವಸ್ಥಿತತೆ ಇಡೀ ಕಾಂಗ್ರೆಸಿನ ತುಂಬಾ ಕಂಡು ಬಂತು.

9 ಸಂವಾದಗಳು, 77 ಕಾರ್ಯಾಗಾರಗಳು

ಸಂವಾದ ಮತ್ತು ಕಾರ್ಯಾಗಾರಗಳು ಹತ್ತಿರದ ಕೇರಳ ವಿಶ್ವವಿದ್ಯಾಲಯದ ಕ್ಯಾಂಪಸಿನ ಕ್ಲಾಸುರೂಮುಗಳಲ್ಲಿ ನಡೆದವು. ಇಷ್ಟು ಹೊತ್ತಿಗೆ ಭಾಗಶಃ ಆದರೂ ಇಂಗ್ಲೀಷಿನಲ್ಲಿ ನಡೆಯುವ ಮತ್ತು ನನಗೆ ಆಸಕ್ತಿ ಇರುವ ಸಂವಾದ, ಕಾರ್ಯಾಗಾರ ಗುರುತಿಸಿದೆ. 'ಜ್ಞಾನ-ಆಧಾರಿತ ಸಮಾಜ' ಎಂಬ ಸಂವಾದದಲ್ಲಿ ಭಾಗವಹಿಸಿದೆ. ಈ ಸಂವಾದದಲ್ಲಿ ಸುಮಾರು 15 ಪರಿಣತರು ಭಾಗವಹಿಸಿದ್ದರು. ಸಂವಾದದ ಅಧ್ಯಕ್ಷತೆ ವಹಿಸಿದ್ದವರು ಐಐಎಸ್ಸಿಯ ವಿಶ್ರಾಂತ ವಿಜ್ಞಾನಿ ಪ್ರೊ.ವಿಜಯನ್. ಸಂವಾದದಲ್ಲಿ ಭಾಗವಹಿಸಿದ ಕೆಲವು ಪ್ರಮುಖರೆಂದರೆ ಪ್ರೊ. ಇಕ್ಬಾಲ್, ಪ್ರಬೀರ್ ಪುರಕಾಯಸ್ಥ, ಐಐಎಸ್ಸಿಯ ಪ್ರೊ. ಗೋಪಿನಾಥ್. ಕೇರಳದ ಮತ್ತು ದೇಶದ ವಿಶ್ವವಿದ್ಯಾಲಯಗಳು, ಉಚ್ಚ ಶಿಕ್ಷಣ ಸಂಸ್ಥೆಗಳು, ರಾಜ್ಯ ಕೇಂದ್ರ ಸರ್ಕಾರಗಳ ಪ್ರಮುಖ ವಿಜ್ಞಾನ-ತಂತ್ರಜ್ಞಾನ ಸಂಶೋಧನಾ ಕೇಂದ್ರಗಳ ಹಲವು ಪ್ರಸ್ತುತ ಮತ್ತು ವಿಶ್ರಾಂತ ಹಿರಿಯ ಪ್ರೊಫೆಸರುಗಳು, ವಿಜ್ಞಾನಿಗಳು ಸಂವಾದದಲ್ಲಿ ಭಾಗವಹಿಸಿದರು. ಜ್ಞಾನ-ಆಧಾರಿತ ಸಮಾಜ ಎಂದರೇನು ? ಕೇರಳ ಜ್ಞಾನ-ಆಧಾರಿತ ಸಮಾಜ ಆಗಬೇಕೆ ? ಇಂದಿನ ಜಾಗತಿಕ-ದೇಶೀಯ ಸನ್ನಿವೇಶದಲ್ಲಿ ಅದರ ಸಾಧ್ಯತೆಗಳೇನು ? ಅದಕ್ಕೆ ಕೇರಳ ಏನು ಮಾಡಬೇಕು ? ಮುಂತಾದ ವಿಷಯಗಳ ಬಗ್ಗೆ ಬಿಸಿ ಬಿಸಿ ಚರ್ಚೆ ನಡೆಯಿತು. ಉಳಿದ ಪ್ರಮುಖ ಸಂವಾದಗಳೆಂದರೆ - ಜಾಗತೀಕರಣದ ಸಂದರ್ಭದಲ್ಲಿ ಕೃಷಿ, ಸುಧಾರಣೆಗಳು - ಇಂದಿಗೂ ಮತ್ತು ನಾಳೆಗೂ, ಬದಲಾಗುತ್ತಿರುವ ಮಲಯಾಳಿ ಸಂಸ್ಕೃತಿ, ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ - ಕೇರಳದ ಅನುಭವ ಮತ್ತು ಮುಂದಿನ ಹಾದಿ, ಕೇರಳದ ಮಹಿಳೆಯರು, ಸಮಗ್ರ ಸಾಮಾಜಿಕ ಭದ್ರತೆಯತ್ತ, ಕೊಲ್ಲಿ ನಿವಾಸಿಗಳು.

ಎರಡನೇ ದಿನ ಬೆಳಗ್ಗೆ 'ವೈಜ್ಞಾನಿಕ ಸಂಶೋಧನೆ ಮತ್ತು ತಂತ್ರಜ್ಞಾನದ ಬಳಕೆ' ಮತ್ತು 'ಹೊಸ ಪೀಳಿಗೆಯ ತಂತ್ರಜ್ಞಾನಗಳು - ಐಟಿ, ಬಿಟಿ ಇತ್ಯಾದಿ' ಕಾರ್ಯಾಗಾರಗಳಲ್ಲಿ ಭಾಗವಹಿಸಿದೆ. ಮಧ್ಯಾಹ್ನ 'ಉಚ್ಚ ಶಿಕ್ಷಣದಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ', 'ಮಾಧ್ಯಮಗಳು ಮತ್ತು ಬೆಳವಣಿಗೆ' ಮತ್ತು 'ಲೈಬ್ರರಿ ಮತ್ತು ಪುಸ್ತಕ ಪ್ರಕಾಶನ' ಕಾರ್ಯಾಗಾರಗಳಲ್ಲಿ ಭಾಗವಹಿಸಿದೆ. ಪ್ರತಿ ಕಾರ್ಯಾಗಾರದಲ್ಲೂ ಏಳೆಂಟು ಕೇರಳದ ಮತ್ತು ಇತರ ರಾಜ್ಯಗಳ ಹಲವು ಪರಿಣತರು ಭಾಗವಹಿಸಿದ್ದರು. ಹಲವು ಪರಿಣತರು ಕೇರಳದ ಸಂದರ್ಭಕ್ಕೆ ನಿರ್ದಿಷ್ಟವಾದ ಸಲಹೆ-ಸೂಚನೆಗಳನ್ನು ಮಂಡಿಸುತ್ತಿದ್ದರು. ಪ್ರತಿನಿಧಿಗಳು ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 20-30 ಕಾರ್ಯಾಗಾರಗಳು ಸಮಾನಾಂತರವಾಗಿ ನಡೆಯುತ್ತಿದ್ದರಿಂದ 80 ರಿಂದ 120 ಪ್ರತಿನಿಧಿಗಳು ಪ್ರತಿ ಕಾರ್ಯಾಗಾರದಲ್ಲಿ ಭಾಗವಹಿಸುತ್ತಿದ್ದರು. ಕಾರ್ಯಾಗಾರಗಳ ವಿಷಯದ ವೈವಿಧ್ಯತೆ ಅಗಾಧವಾಗಿತ್ತು ಮತ್ತು ಕೇರಳಕ್ಕೆ ನಿರ್ದಿಷ್ಟವಾಗಿತ್ತು. ಆಹಾರ ಉತ್ಪಾದನೆಯ ಹೆಚ್ಚಳ, ಕೃಷಿಯಲ್ಲಿ ವೈವಿಧ್ಯತೆ ಮತ್ತು ಮೌಲ್ಯ ವರ್ಧಿತ ಕೃಷಿ ಉತ್ಪನ್ನಗಳು, ಕೈಗಾರಿಕೆಗೆ ಮೂಲಸೌಕರ್ಯಗಳು, ತೆಂಗಿನ ನಾರು-ಗೇರು ಇತ್ಯಾದಿ ಸಾಂಪ್ರದಾಯಿಕ ಕೈಗಾರಿಕೆಗಳು, ಕಸ ತೆಗೆಯುವ ನಿರ್ವಹಣೆ, ಮಲಯಾಳಂನಲ್ಲಿ ಐಟಿ, ಆಯುರ್ವೇದ, ಕುಡುಂಬಶ್ರೀ, ಮೀನುಗಾರಿಕೆ, ಕ್ರೀಡೆಗಳು, ಮಕ್ಕಳ ಹಕ್ಕುಗಳು - ವಿಷಯದ ವೈವಿಧ್ಯತೆಗೆ ಕೆಲವು ಉದಾಹರಣೆಗಳು. ಪ್ರತಿ ಕಾರ್ಯಾಗಾರದ ಸಂಯೋಜಕರು ಅಲ್ಲಿ ಬಂದ ನಿರ್ದಿಷ್ಟ ಸಲಹೆ-ಸೂಚನೆಗಳ, ಚರ್ಚೆ-ಟೀಕೆ-ವಿಶ್ಲೇಷಣೆಗಳ ಸಾರ ಇರುವ ವರದಿ ಮಾಡುವ ವ್ಯವಸ್ಥೆಯಾಗಿತ್ತು. ಚರ್ಚೆಯನ್ನು ಗಮನಿಸಿದರೆ ಪ್ರತಿನಿಧಿಗಳು - ರೈತರು, ಕಾರ್ಮಿಕರು, ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು, ಟ್ರೇಡ್ ಯೂನಿಯನ್ ನಾಯಕರು, ಪಕ್ಷಗಳ ಕಾರ್ಯಕರ್ತರು, ಶಿಕ್ಷಕರು, ವಿದ್ಯಾರ್ಥಿಗಳು, ಸರ್ಕಾರದ ವಿಭಾಗಗಳ ಅಧಿಕಾರಿಗಳು ಉದ್ಯೋಗಿಗಳು - ಹೀಗೆ ಕೇರಳದ ಎಲ್ಲಾ ಜನವಿಬಾಗಗಳನ್ನು ಪ್ರತಿನಿಧಿಸುತ್ತಿದ್ದರು. ಮಿನಿ ಕೇರಳವೇ ಪ್ರತಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸುತ್ತಿದೆ ಎನ್ನುವಂತಿತ್ತು.

ಸಂಕ್ರಮಣ ಸರ್ಕಾರಗಳು

ಮೂರನೇ ದಿನ ಬೆಳಿಗ್ಗೆ 'ಜರ್ನಲಿಸಂ ಎತ್ತ ಸಾಗಿದೆ ?' ಮತ್ತು 'ಸಂಕ್ರಮಣ ಕಾಲದ ಸರ್ಕಾರಗಳು' - ಎಂಬ ಎರಡು ಅಂತರ್‌ರಾಷ್ಟ್ರೀಯ ಸೆಮಿನಾರುಗಳು ಎಕೆಜಿ ಹಾಲಿನಲ್ಲಿ ನಡೆದವು. ಮೊದಲ ಸೆಮಿನಾರಿನಲ್ಲಿ ದಿ ಹಿಂದೂನ ಎನ್.ರಾಂ, ಸಾಯಿನಾಥ್, ಸ್ವಿಡಿಶ್ ರೇಡಿಯೋ (ಬೋಫೋರ್ಸ್ ಹಗರಣ ಹೊರಗೆಡವಿದ ಖ್ಯಾತಿಯ) ಪ್ರಮುಖ ವರದಿಗಾರ, ದೇಶಾಭಿಮಾನಿ-ಚಿಂತಾ ಹಿರಿಯ ಪತ್ರಕರ್ತರು ಭಾಗವಹಿಸಿದ್ದರು. ಪ್ರಮುಖ ಸಾಮಾಜಿಕ-ರಾಜಕೀಯ ಬದಲಾವಣೆಗಳ ಸಂಕ್ರಮಣದ ಸರ್ಕಾರಗಳ ಪಾತ್ರದ ಬಗ್ಗೆ ಅಂತರ್‌ರಾಷ್ಟ್ರೀಯ ಸೆಮಿನಾರು ಅತ್ಯಂತ ಸಾಮಯಿಕ ಮತ್ತು ಅರ್ಥಪೂರ್ಣವಾಗಿತ್ತು. ಸೆಮಿನಾರು ಉದ್ಘಾಟಿಸುತ್ತಾ ಸೀತಾರಾಂ ಯೆಚ್ಚೂರಿ ನಾಲ್ಕು ತರಹದ ಸಂಕ್ರಮಣ ಸರ್ಕಾರಗಳ ಸ್ವರೂಪ, ಪಾತ್ರ, ಮಹತ್ವ, ಚಾರಿತ್ರಿಕ ಅನುಭವಗಳ, ಸವಾಲುಗಳ ಬಗ್ಗೆ ಉತ್ತಮ ವಿಶ್ಲೇಷಣೆ ಮುಂದಿಟ್ಟರು. ಬಂಡವಾಳಶಾಹಿ ಮೀರಿ ನಿಂತು ಸಮಾಜವಾದದತ್ತ (ಉದಾ. ಕ್ಯೂಬಾ, ಚೀನಾ), ವರ್ಣಭೇದ-ಆಧಾರಿತ ವಸಾಹತುಶಾಹಿ ಯಿಂದ ರಾಷ್ಟ್ರೀಯ ಪ್ರಜಾಸತ್ತೆಯತ್ತ (ದ.ಆಫ್ರಿಕಾ), ಬಂಡವಾಳಶಾಹಿಯಿಂದ ಜನತಾ ಪ್ರಜಾಪ್ರಭುತ್ವದತ್ತ

ಪುಟ 15ಕ್ಕೆ

ಮುಲ್ಕಿ ನಗರ ಪಂಚಾಯತಿಗೆ ಮುತ್ತಿಗೆ ಹಾಗೂ ಅತಿಥಿ ಉಪನ್ಯಾಸಕರ ಪ್ರತಿಭಟನೆ

ಮುಲ್ಕಿ ನಗರ ಪಂಚಾಯತಿಗೆ ಒಳಪಟ್ಟ ಲಿಂಗಪ್ಪಯ್ಯ ಕಾಡು ಪ್ರದೇಶದ 65 ಕುಟುಂಬಗಳಿಗೆ ಹಕ್ಕುಪತ್ರ ನೀಡುವಂತೆ ಒತ್ತಾಯಿಸಿ ಸಿ.ಪಿ.ಎಂ ನೇತೃತ್ವದಲ್ಲಿ ದಕ್ಷಿಣ ಕನ್ನಡ ದಲಿತ ಹಕ್ಕುಗಳ ಸಮಿತಿ ಜನವರಿ 24 ರಂದು ಮುಲ್ಕಿ ನಗರ ಪಂಚಾಯತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿತು. ನೂರಾರು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ನಗರ ಪಂಚಾಯಿತಿ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಲಿಂಗಪ್ಪಯ್ಯ ಕಾಡಿನಿಂದ ಮುಲ್ಕಿ ನಗರ ಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿತು. ನೂರಾರು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ನಗರ ಪಂಚಾಯಿತಿ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಲಿಂಗಪ್ಪಯ್ಯ ಕಾಡಿನಿಂದ ಮುಲ್ಲಿ ನಗರ ಪಂಚಾಯಿತಿ ಕಚೇರಿಯವರೆಗೆ ಮೆರವಣಿಗೆ ನಡೆಸಿದರು.



ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ ಸರ್ಕಾರಗಳು ಜನವಿರೋಧಿ ನೀತಿ ಅನುಸರಿಸುತ್ತಿದ್ದು, ನಾಗರೀಕರ ಮೇಲೆ ದಾಳಿ ದಬ್ಬಾಳಿಕೆ ನಡೆಸುತ್ತಿವೆ; ಮನೆ ನಿವೇಶನ, ಹಕ್ಕುಪತ್ರ, ಮನೆ ಸಂಖ್ಯೆ ನೀಡದೇ ಸತಾಯಿಸುತ್ತಿರುವ ರಾಜ್ಯಸರ್ಕಾರ ಕೇವಲ ಹಗರಣಗಳಲ್ಲಿ ಮಾತ್ರ ಅಭಿವೃದ್ಧಿ ಸಾಧಿಸಿದೆ; ಇಂತಹ ಸರ್ಕಾರಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆ ಎಂದರು.

ಲಿಂಗಪ್ಪಯ್ಯ ಕಾಡು ಪರಿಸರದ 150 ಕ್ಕೂ ಅಧಿಕ ನಾಗರಿಕರು 35 ವರ್ಷಗಳಿಂದ ಹಕ್ಕುಪತ್ರದಿಂದ ವಂಚಿತರಾಗಿದ್ದಾರೆ. ಈ ಕುರಿತು ಮುಲ್ಕಿ ನಗರ ಪಂಚಾಯಿತಿ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಲಿಂಗಪ್ಪ ನಂತೂರು, ಜಯಕುಮಾರ್, ತಿಮ್ಮಯ್ಯ ಕೊಂಚಾಡಿ, ಯಮುನಾ, ಸರೋಜಮ್ಮ, ರೇಷ್ಮಾ,ಡಿವೈಎಫ್ಐ ಮಂಗಳೂರು ಮುಖಂಡರಾದ ಸಂತೋಷ್ ಬಜಾಲ್, ಯೋಗೀಶ್ ಜಪ್ಪಿನ ಮೊಗರು, ಲಿಂಗಪ್ಪಯ್ಯ ಕಾಡು ಹೋರಾಟ ಸಮಿತಿ ಮುಖಂಡರಾದ ಜುಬೇರಾ, ಶೋಭಾ, ಲತಾ, ವಿಠ್ಠಲ, ಸುಜಾತಾ, ಇಂದಿರಾ, ಹಸ್ಸೈನಾರ್, ಹಸನಬ್ಬಿ, ಖಾದರ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



★

ಉಡುಪಿಯಲ್ಲಿ ಅತಿಥಿ ಉಪನ್ಯಾಸಕರ ಪ್ರತಿಭಟನೆ

ಅತಿಥಿ ಉಪನ್ಯಾಸಕರ ಸಂಘ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಅತಿಥಿ ಉಪನ್ಯಾಸಕರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಜನವರಿ 24 ರಂದು ಬೆಳಗ್ಗಿನಿಂದ ಸಂಜೆವರೆಗೆ ಪ್ರತಿಭಟನೆ ನಡೆಸಲಾಯಿತು.

ಅತಿಥಿ ಉಪನ್ಯಾಸಕರಿಗೆ ವೇತನದಲ್ಲಿ, ಪದನಾಮದಲ್ಲಿ, ಗೌರವಧನ ನೀಡಿಕೆಯಲ್ಲಿ ಸಾಕಷ್ಟು ತಾರತಮ್ಯ ಮಾಡಲಾಗುತ್ತಿದೆ. ಕೂಡಲೇ ಅದನ್ನು ಸರಿಪಡಿಸಬೇಕು ಎಂದು ನೂರಾರು ಉಪನ್ಯಾಸಕರು ಆಗ್ರಹಿಸಿ ಧರಣಿ ನಡೆಸಿದರು.

ಧರಣಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಅತಿಥಿ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಆನಂದ ಪೂಜಾರಿ, ಉಡುಪಿ ಜಿಲ್ಲಾ ಅತಿಥಿ ಉಪನ್ಯಾಸಕರ ಸಂಘದ ಜಿಲ್ಲಾ ಸಮಿತಿ ಸದಸ್ಯ ಸುಜಾತಾ, ಎಸ್ಎಫ್ಐ ರಾಜ್ಯಸಮಿತಿ ಸದಸ್ಯ ಜೀವನ್‌ರಾಜ್, ಉಡುಪಿ ಜಿಲ್ಲಾ ಎಸ್ಎಫ್ಐ ಮುಖಂಡರಾದ ಕವಿರಾಜ್, ಭವ್ಯಾ ಮೊದಲಾದವರು ಉಪಸ್ಥಿತರಿದ್ದರು.



★

ಬಿಜೆಪಿ ಸರಕಾರದ ರಾಜೀನಾಮೆಗೆ ಒತ್ತಾಯಿಸಿ ಮಂಗಳೂರಲ್ಲಿ ಪ್ರತಿಭಟನೆ

ಯಡಿಯೂರಪ್ಪ ನೇತೃತ್ವದ ರಾಜ್ಯ ಬಿಜೆಪಿ ಸರಕಾರದ ರಾಜೀನಾಮೆಗೆ ಒತ್ತಾಯಿಸಿ ಸಿಪಿಎಂ ಪಕ್ಷವು ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪ್ರತಿಭಟನೆಯ ಅಂಗವಾಗಿ ಜನವರಿ 24 ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಎದುರು ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಎಂ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಆಪರೇಶನ್ ಕಮಲದ ಮೂಲಕ ಭ್ರಷ್ಟಾಚಾರದಿಂದಲೇ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಸರಕಾರ ಅಧಿಕಾರದಲ್ಲಿ



ಉಳಿಯುವ ನೈತಿಕತೆ ಕಳೆದುಕೊಂಡಿದೆ. ಹಾಗಾಗಿ ತತ್‌ಕ್ಷಣ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ರಾಜ್ಯಪಾಲರು ಕಾನೂನು ರೀತಿಯಲ್ಲಿ ಮುಖ್ಯಮಂತ್ರಿ ವಿರುದ್ಧ ಮೊಕದ್ದಮೆಗೆ ಅನುಮತಿ ನೀಡಿದ್ದರೂ ಯಡಿಯೂರಪ್ಪ ರಾಜೀನಾಮೆ ನೀಡದೇ ತಮ್ಮ ಸ್ಥಾನಕ್ಕೆ ಅಂಟಿಕೊಂಡಿರುವುದು ಪ್ರಜಾಪ್ರಭುತ್ವದ ಅವಹೇಳನ ಎಂದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್, ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಎಂ ಜಿಲ್ಲಾ ಸಮಿತಿ ನಾಯಕರಾದ ವಸಂತ ಆಚಾರಿ, ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ಕೆ.ಯಾದವಶೆಟ್ಟಿ, ಸಂಜೀವ ಬಂಗೇರ, ಕೃಷ್ಣಪ್ಪ ಸಾಲ್ಯಾನ್, ವಾಸುಗಟ್ಟಿ, ಕೃಷ್ಣಪ್ಪ ಕೊಂಚಾಡಿ, ಸದಾಶಿವದಾಸ್ ಮೊದಲಾದವರು ವಹಿಸಿದ್ದರು.

★

ಭವಿಷ್ಯನಿಧಿ ಪಿಂಚಣಿದಾರರ ಸಂಘದಿಂದ ಉಡುಪಿಯಲ್ಲಿ ಪ್ರತಿಭಟನೆ

ಕಾರ್ಮಿಕರ ಭವಿಷ್ಯನಿಧಿ ಸಂಸ್ಥೆಯ ಮೂಲಕ ಪಿಂಚಣಿ ಪಡೆಯುತ್ತಿರುವ ನಿವೃತ್ತ ಕಾರ್ಮಿಕರ ಸವಲತ್ತುಗಳನ್ನು ಕಡಿತ ಮಾಡಿರುವುದರ ವಿರುದ್ಧ ಮತ್ತು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಉಡುಪಿ ತಾಲ್ಲೂಕು ಭವಿಷ್ಯನಿಧಿ ಪಿಂಚಣಿದಾರರ ಸಂಘದ ನೇತೃತ್ವದಲ್ಲಿ ಜನವರಿ 25 ರಂದು ಉಡುಪಿಯಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು.

ಉಡುಪಿ ಸರ್ಕಾರಿ ಬಸ್ ನಿಲ್ದಾಣದಿಂ ಕೋರ್ಟುರಸ್ತೆಯ ತುಳುನಾಡು ಟವಸಾಣದಲ್ಲಿರು ಕಾರ್ಮಿಕರ ಭವಿಷ್ಯನಿಧಿ ಕಚೇರಿಯವರೆಗೆ ಮೆರವಣಿ ನಡೆಸಿದ ಕಾರ್ಮಿಕರು ಮತಪ್ರದರ್ಶನದ ಮೂಲ ಬೇಡಿಕೆ ಈಡೇರಿಸುವಂತೆ ಸರಕಾರವನ್ನು ಆಗ್ರಹಿಸಿದರು. ಬಳಿಕ ನವದೆಹಲಿಯ ಕಾರ್ಮಿಕ ಭವಿಷ್ಯನಿಧಿ ಸಂಸ್ಥೆಯ ಆಯುಕ್ತರಿಗೆ ಮನ ಸಲ್ಲಿಸಲಾಯಿತು.

ಸಿಪಿಎಂ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್, ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ವಿಶ್ವನಾಥ ರೈ, ಉಡುಪಿ ತಾಲ್ಲೂಕು ಭವಿಷ್ಯನಿಧಿ ಪಿಂಚಣಿದಾರರ ಸಂಘದ ಅಧ್ಯ ಎಚ್.ವಿಠ್ಠಲ ಪೂಜಾರಿ, ಕಾರ್ಯದರ್ಶಿ ರಮೇಶ್‌ಮೆಂಡನ್, ದೋಗು ಸುವರ್ಣ ಕವಿರಾಜ್, ಪುಷ್ಪ ಮಲಾರ್ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತಿದ್ದುಪಡಿ

ಸಂಚಿಕೆ 5 ರಲ್ಲಿ ಪುಟ 5-6 ರಲ್ಲಿ ಪ್ರಕಟವಾಗಿರುವ ಜಿ.ವಿ.ಶ್ರೀರಾಮರೆಡ್ಡಿಯವರ **'ಅನೈತಿಕ ಬಿಜೆಪಿ ಸರ್ಕಾರ ಪ್ರಜಾಪ್ರಭುತ್ವಕ್ಕೆ ಸಂಚಕಾರ'** ಲೇಖನದಲ್ಲಿ ತಾಂತ್ರಿಕ ದೋಷದಿಂದ ಕೊನೆಯ ಕೆಲವು ಸಾಲುಗಳು ಮುದ್ರಣವಾಗದೇ ತಪ್ಪಿಹೋಗಿವೆ, ಆ ಸಾಲುಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಓದುಗರು ಗಮನಿಸುವುದು. ತಪ್ಪಿಗಾಗಿ ವಿಷಾದಿಸುತ್ತೇವೆ.

- ಸಂ

ಸಿನಿಕತನದ ದೃಷ್ಟಿ

...... ಬಿ.ಜೆ.ಪಿ. ಎಂಬ ಭ್ರಷ್ಟ, ಬಂಡ, ಲಜ್ಜೆಗೇಡಿ, ಜನವಿರೋಧಿ ಸರ್ಕಾರವನ್ನು ಕಿತ್ತೊಗೆಯುವುದೇ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಎಲ್ಲರ ಪ್ರಥಮ ಕೆಲಸ ಇದಕ್ಕೆ ಪೂರಕವಾಗಿ ಜನರನ್ನು ಜಾಗೃತಿಗೊಳಿಸಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಮೆರೆಯಬೇಕಿದ್ದ ಮಾಧ್ಯಮಗಳು ಕೊಲೆಗಡುಕನನ್ನು ಮತ್ತು ಕೊಲೆಗೆ ಈಡಾದವನನ್ನು ಒಂದೇ ರೀತಿಯಲ್ಲಿ ನೋಡುವುದು ಜವಾಬ್ದಾರಿತನವಾಗುವುದಿಲ್ಲ. ಬಿ.ಜೆ.ಪಿ.ಯ ರಾಷ್ಟ್ರೀಯ ಅಧ್ಯಕ್ಷರೇ ಸ್ವತಃ ಯಡಿಯೂರಪ್ಪ ಅನೈತಿಕತೆಯನ್ನು ಎಸಗಿದ್ದಾರೆ ಎಂದ ಮೇಲೆ ಇಂತಹ ಅನೈತಿಕ ವ್ಯಕ್ತಿ ಮುಖ್ಯಮಂತ್ರಿಯಾಗಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಮುಂದುವರಿಯುವುದು ಈ ರಾಜ್ಯಕ್ಕೆ ಗಂಡಾಂತರಕಾರಿ ಎಂಬುದನ್ನು ತಿಳಿಯಬೇಕಾಗಿದೆ.

ಪಿಡಿ ಸಂಪಾದಕೀಯ

ಬಡಜನರನ್ನು ಸಬಲೀಕರಿಸುವ ಮಾರ್ಗವೇ ಇದು ?

ಸಿರಿವಂತರಿಗೆ ಕೊಡುವ ಬೃಹತ್ ಸ್ವರೂಪದ ರಿಯಾಯ್ತಿಗಳನ್ನು ಬೆಳವಣಿಗೆಯ 'ಉತ್ತೇಜಕ'ಗಳು ಎಂದು ಕರೆಯಲಾಗಿದೆ. ಬಡವರಿಗೆ, ಅಗತ್ಯವಿರುವವರಿಗೆ ರಿಯಾಯ್ತಿಗಳನ್ನು ಮಾತ್ರ ಸದಾ 'ಸಬ್ಸಿಡಿ'ಗಳು, ಆರ್ಥಿಕಕ್ಕೆ, ಬೆಳವಣಿಗೆಗೆ ಬಹಳ ಕೆಟ್ಟದ್ದು ಎನ್ನಲಾಗಿದೆ. ಹೀಗೆ ಭಾರತದ ಒಂದು ಅತೀ ಸಣ್ಣ ಭಾಗವನ್ನು ಹೆಚ್ಚು 'ಹೊಳೆಯುವಂತೆ' ಮಾಡುವ, ಅದಕ್ಕಾಗಿ ನಮ್ಮ ಬಹುಪಾಲು ಜನತೆ ಬೆಲೆ ತೆರುವಂತೆ ಮಾಡುವ ಭಂಡತನವ'ನ್ನು ಸ್ವಲ್ಪವೂ ಒಪ್ಪಲು ಸಾಧ್ಯವಿಲ್ಲ. ಈಗ ಮತ್ತೆ ಕೈಗೊಳ್ಳಬೇಕಾದ ಪ್ರತಿಜ್ಞೆಯೆಂದರೆ ಬಾಬಾ ಸಾಹೇಬ್ ಅಂಬೇಡ್ಕರ್ ಆರು ದಶಕಗಳ ಹಿಂದೆಯೇ ಕೊಟ್ಟ ಎಚ್ಚರಿಕೆಗೆ ಗಮನ ಕೊಡುವುದು, ಆರ್ಥಿಕ ಧೋರಣೆಯ ದಿಕ್ಕನ್ನು ಸಂಪೂರ್ಣವಾಗಿ ಬದಲಿಸುವುದು.

ನಮ್ಮ 62ನೇ ಗಣತಂತ್ರ ದಿನದ ಮುನ್ನಾದಿನದಂದು ಭಾರತದ ರಾಷ್ಟ್ರಪತಿಗಳು ರಾಷ್ಟ್ರವನ್ನುದ್ದೇಶಿಸಿ ಮಾಡುವ ತನ್ನ ಭಾಷಣದಲ್ಲಿ ನಮ್ಮ ಜನಸಂಖ್ಯೆಯ ಬಡ ಮತ್ತು ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳನ್ನು ಸಬಲೀಕರಿಸಿ ಅವರು ಕೂಡ ನಮ್ಮ ದೇಶದ ಬೆಳವಣಿಗೆಯ ಕಥೆಯ ಒಂದು ಭಾಗವಾಗುವಂತೆ ಮಾಡುವ ಪ್ರತಿಜ್ಞೆಯನ್ನು ನವೀಕರಿಸಿದರು.

ಸುಮಾರಾಗಿ ಅದೇ ವೇಳೆಗೆ, ಕಾರ್ಪೊರೇಟ್ ಭಾರತದ ಮುಂದಾಳುಗಳು ಮತ್ತು ನಮ್ಮ ಆರ್ಥಿಕ ಧೋರಣೆಗಳ ಕುರಿತು ಸಲಹೆ ನೀಡುವ ಮತ್ತು ಅವುಗಳ ನಿರ್ವಹಣೆ ಮಾಡುವ ಸರಕಾರದ ಹಿರಿಯ ಅಧಿಕಾರಿಗಳು ಬಡ ಮತ್ತು ಅಂಚಿಗೆ ತಳ್ಳಲ್ಪಟ್ಟ ಜನವಿಭಾಗಗಳಿಗೆ ಈಗ ಇರುವ ಬೆಂಬಲವನ್ನು ಕೂಡ ಹಿಂತೆಗೆದುಕೊಳ್ಳುವ ವಿಚಾರದ ಬಗ್ಗೆ ಸ್ವಿಝರ್ಲೆಂಡಿನ ದಾವೊಸ್‌ನಲ್ಲಿ ನಡೆಯುತ್ತಿದ್ದ 'ವಿಶ್ವ ಆರ್ಥಿಕ ವೇದಿಕೆ'ಯಲ್ಲಿ ಮಾತಾಡುತ್ತಿದ್ದರು.

ಅಂಬೇಡ್ಕರ್ ನೀಡಿದ ಎಚ್ಚರಿಕೆ

ಇದಕ್ಕಿಂತ ದೊಡ್ಡ ವೈರುಧ್ಯ ಸಾಧ್ಯವೇ? ಆದರೆ ವಾಸ್ತವವಾಗಿ ಇದು ನಮ್ಮ ಗಣತಂತ್ರದ ಹುಟ್ಟಿನಿಂದಲೇ ಆರಂಭವಾಗಿರುವ ವೈರುಧ್ಯ. ಸಂವಿಧಾನ ಸಭೆಗೆ ನಮ್ಮ ಸಂವಿಧಾನದ ಕರಡನ್ನು ಪ್ರಸ್ತುತ ಪಡಿಸುತ್ತ ಡಾ. ಬಿ.ಆರ್.ಅಂಬೇಡ್ಕರ್ ಎಚ್ಚರಿಸಿದ್ದು ಇದೇ ವೈರುಧ್ಯದ ಬಗ್ಗೆ. ನವಂಬರ್ 25, 1949ರಂದು ಅವರು ಏನು ಹೇಳಿದರು ಎಂಬುದನ್ನು ನೆನಪಿಸಿಕೊಳ್ಳುವುದು ಸೂಕ್ತ:

'ಜನವರಿ 26, 1950ರಂದು ನಾವು ಒಂದು ವೈರುಧ್ಯಗಳ ಜೀವನವನ್ನು ಪ್ರವೇಶಿಸಲಿದ್ದೇವೆ. ನಮಗೆ ರಾಜಕೀಯದಲ್ಲಿ ಸಮಾನತೆಯಿರುತ್ತದೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ನಾವು ಅಸಮಾನತೆಯನ್ನು ಹೊಂದಿರುತ್ತೇವೆ. ರಾಜಕೀಯದಲ್ಲಿ, ನಾವು ಒಬ್ಬ ವ್ಯಕ್ತಿ-ಒಂದು ಮತ ಮತ್ತು ಒಂದು ಮತ-ಒಂದು ಮೌಲ್ಯ ಎಂಬ ನೀತಿಯನ್ನು ಮಾನ್ಯ ಮಾಡುತ್ತೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಆರ್ಥಿಕ ಮತ್ತು ಸಾಮಾಜಿಕ ರಚನೆಯಿಂದಾಗಿ, ಒಬ್ಬ ವ್ಯಕ್ತಿ-ಒಂದು ಮೌಲ್ಯದ ನೀತಿಯನ್ನು ನಿರಾಕರಿಸುತ್ತಲೇ ಇರುತ್ತೇವೆ.

ಎಷ್ಟು ಕಾಲ ನಾವು ಈ ವೈರುಧ್ಯಗಳ ಜೀವನವನ್ನು ಸಾಗಿಸಬೇಕು? ಎಷ್ಟು ಕಾಲ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಾವು ನಿರಾಕರಿಸುತ್ತಲೇ ಇರಬೇಕು?

ಬಹಳ ಕಾಲ ಇದನ್ನು ನಿರಾಕರಿಸುತ್ತಲೇ ಮುಂದುವರೆದರೆ, ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಗಂಡಾಂತರದಲ್ಲಿ ಸಿಲುಕಿಸುತ್ತೇವಷ್ಟೇ. ಈ ವೈರುಧ್ಯವನ್ನು ನಾವು ಸಾಧ್ಯವಾದಷ್ಟು ಬೇಗ ನಿವಾರಿಸಬೇಕು. ಇಲ್ಲವಾದರೆ ಅಸಮಾನತೆಯಿಂದ ನರಳುವವರು ಈ ಸಭೆ ಶ್ರಮಪಟ್ಟು ಕಟ್ಟಿದ ರಾಜಕೀಯ ಪ್ರಜಾಪ್ರಭುತ್ವದ ರಚನೆಯನ್ನು ಸ್ಫೋಟಗೊಳಿಸಬಹುದು.?

ಆರು ದಶಕಗಳ ನಂತರವೂ ತೀವ್ರಗೊಳ್ಳುತ್ತಿರುವ ಈ ಕಣ್ಣಿಗೆ ರಾಚುವಂತಿರುವ ವೈರುಧ್ಯದ ಪರಿವೆ ದಾವೊಸಿನಲ್ಲಿ ಮಾತನಾಡುವ ಕಾರ್ಪೊರೇಟ್ ಭಾರತಕ್ಕೆ ಮತ್ತು ಸರಕಾರದ ವಕ್ತಾರರಿಗೆ ಇಲ್ಲವೆಂದೇನಲ್ಲ. ಸರಳವಾಗಿ ಹೇಳುವುದಾದರೆ, ಅವರು, ನಮ್ಮ ವಿಶಾಲ ಜನಸಮೂಹಗಳು ದಾರಿದ್ರ್ಯಕ್ಕಿಳಿದರೂ ಪರವಾಗಿಲ್ಲ, ಲಾಭವನ್ನು ಉತ್ಪತ್ತಿ ಮಾಡಲು ಹೆಚ್ಚೆಚ್ಚು ದಾರಿಗಳನ್ನು ಸೃಷಿಸಬೇಕು ಎಂದು ಸರಕಾರವನ್ನು ಭಂಡತನದಿಂದ ಮುಂದೊತ್ತುತ್ತಿದ್ದಾರೆ

ಕಾರ್ಪೊರೇಟ್ ಭಂಡತನ

ಯೋಜನಾ ಆಯೋಗದ ಉಪಾಧ್ಯಕ್ಷರು ಕಾರ್ಮಿಕ ಕಾನೂನುಗಳ ಸುಧಾರಣೆಗೆ ಕರೆ ನೀಡುತ್ತಾ ಲಂಗುಲಗಾಮಿಲ್ಲದ 'ಹೈರ್ ಅಂಡ್ ಫೈರ್ (ಮನಬಂದಂತೆ ಕೆಲಸಕ್ಕೆ ತಗೊಳ್ಳುವ, ಕೆಲಸದಿಂದ ತೆಗೆದು ಹಾಕುವ) ಧೋರಣೆಯನ್ನು ತರಬೇಕೆಂಬ ಕಾರ್ಪೊರೇಟ್ ಭಾರತದ ಆಗ್ರಹಕ್ಕೆ ದನಿ ನೀಡಿದ್ದಾರೆ. ಈಗಿರುವ ಕಾನೂನುಗಳು ಕೊಡುವ ಅಲ್ಪ-ಸ್ವಲ್ಪ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನೂ ನಿರ್ನಾಮ ಮಾಡುವ ಪ್ರಯತ್ನ ನಡೆದಿದೆ. ಕೈಗಾರಿಕಾ ಬೆಳವಣಿಗೆ ಯನ್ನು ತ್ವರಿತಗೊಳಿಸಲು ಇದು ಅತ್ಯಗತ್ಯವಂತೆ. ಈ ಕೈಗಾರಿಕಾ ಬೆಳವಣಿಗೆ ಉದ್ಯೋಗಾವಕಾಶ ನಿರ್ಮಿಸಲು ಅನಿವಾರ್ಯವಂತೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇಂದು 'ಉದ್ಯೋಗ'ದಲ್ಲಿರುವ ಒಬ್ಬ ಕಾರ್ಮಿಕನನ್ನು 'ನಿರುದ್ಯೋಗಿ'ಯಾಗಿಸುವುದರಿಂದಲೇ ಭವಿಷ್ಯದಲ್ಲಿ ಉದ್ಯೋಗಾವಕಾಶ ನಿರ್ಮಾಣ ಸಾಧ್ಯ ಎಂದು ನಮಗೆ ಹೇಳಲಾಗುತ್ತಿದೆ! ಇಂತಹ 'ಕಾರ್ಪೊರೇಟ್ ಭಂಡತನ'ವೇ ಜನಗಳನ್ನು ಈ ದಿಕ್ಕಿನಲ್ಲಿ ಮೂರ್ಖರಾಗಿಸಲು ಪ್ರಯತ್ನಿಸುತ್ತಿದೆ. ನೇರ ಮತ್ತು ಸರಳ ಸಂಗತಿಯೆಂದರೆ, ವಿಶಾಲ ಜನಸಮೂಹಗಳ ಶೋಷಣೆಯನ್ನು, ಸಂಕಟಗಳನ್ನು ತೀವ್ರಗೊಳಿಸಿ ಲಾಭಗಳನ್ನು ವಿಸ್ತರಿಸಲು ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆ ಅವರಿಗೆ ಬೇಕಾಗಿದೆ.

ಭಾರತದ ಪ್ರಧಾನ ಮಂತ್ರಿಗಳ ಸಲಹಾಗಾರರಲ್ಲಿ ಒಬ್ಬರಂತೂ ಸುಮಾರಾಗಿ ಎಲ್ಲಾ ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಎಲ್ಲ ಸಾಮಾಜಿಕ ಕಲ್ಯಾಣದ ಖರ್ಚುಗಳನ್ನು, ಸರಕಾರ ಬಹುವಾಗಿ ಡಂಗುರ ಹಾಕುತ್ತಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು 'ಭಾರತ ನಿರ್ಮಾಣ'ವೂ ಸೇರಿದಂತೆ ಎಲ್ಲವನ್ನೂ ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಬಹಿರಂಗವಾಗಿಯೇ ಕರೆ ನೀಡಿದ್ದಾರೆ! ನಿರ್ದಿಷ್ಟವಾಗಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಲ್ಲ ಸಬ್ಸಿಡಿಗಳನ್ನು ತೆಗೆಯಬೇಕು, ರಸಗೊಬ್ಬರ ಸಬ್ಸಿಡಿಯನ್ನೂ ತೆಗೆದು ಹಾಕಬೇಕು ಎಂದಿದ್ದಾರೆ. ಹೀಗೆ ಮಾಡಿದರೆ, ನಮ್ಮೆಲ್ಲ ಹಣಕಾಸು ಸಮಸ್ಯೆಗಳು ತಂತಾನೇ ಪರಿಹಾರವಾಗುತ್ತವಂತೆ! ಇಲ್ಲಿಯೂ ನೇರ



ಕೃಪೆ : ದಿ ಹಿಂದೂ

ಮತ್ತು ಸರಳ ಸಂಗತಿಯೆಂದರೆ, ಜನಗಳಿಗೆ ಈಗ ಸ್ವಲ್ಪ ಮಟ್ಟಿನ ಪರಿಹಾರಗಳನ್ನು ಒದಗಿಸುವ ಅಲ್ಪ-ಸ್ವಲ್ಪ ಸಂಪನ್ಮೂಲಗಳನ್ನು ಕೂಡ ಖಾಸಗೀ ಲಾಭವನ್ನು ವಿಸ್ತರಿಸಲು ಬಳಸಬೇಕು ಎಂಬುದು ಅವರ ಆಶಯ.

ಭಟ್ಟಂಗಿಗಳ ದಿವ್ಯಮೌನ

ಹೀಗೆ ವಿಶಾಲ ಭಾರತೀಯ ಜನಸಮೂಹಗಳನ್ನು 'ಭಾರತೀಯ ಬೆಳವಣಿಗೆ ಕಥೆ'ಯಿಂದ ಹೊರಗಿಡಲು ಭಂಡತನದಿಂದ ಪ್ರಯತ್ನಿಸುವ ನವ-ಉದಾರವಾದದ ಈ ಭಟ್ಟಂಗಿಗಳು ಕಾರ್ಪೊರೇಟ್ ವಲಯಕ್ಕೆ ಮತ್ತು ಬಹಳ 'ಮೌಲ್ಯ' ಹೊಂದಿರುವ ವ್ಯಕ್ತಿಗಳಿಗೆ ಕೊಡುವ ಸಬ್ಸಿಡಿಗಳ ಬಗ್ಗೆ ಸಂಪೂರ್ಣ ಮೌನ ತಳೆದಿದ್ದಾರೆ, ಉದ್ದೇಶಪೂರ್ವಕವಾಗಿಯೇ. ಇಂತಹ ಸಬ್ಸಿಡಿಗಳಿಂದಾಗಿ ಭಾರತ ಸರಕಾರ ಕಳಕೊಂಡ ಸಂಪನ್ಮೂಲ ಎಷ್ಟು ಎಂಬುದನ್ನು ಫೆಬ್ರುವರಿ 2010ರಲ್ಲಿ ಸಂಸತ್ತಿಗೆ ಸಲ್ಲಿಸಿದ ದಸ್ತಾವೇಜುಗಳು ಹೊರಗೆಡಹುವೆ. ಭಾರತ ಸರಕಾರ 'ಬಿಟ್ಟು ಕೊಟ್ಟ' ಆದಾಯ 2008-09ರಲ್ಲಿ ಒಟ್ಟು ತೆರಿಗೆ ಸಂಗ್ರಹದ 68.59 ಶೇಕಡಾ ಮತ್ತು 2009-10 ರಲ್ಲಂತೂ 79.54 ಶೇಕಡಾ. ಇದರ ಅರ್ಥ, ಕಳೆದ ಹಣಕಾಸು ವರ್ಷದಲ್ಲಿ ಸರಕಾರದ ನಾಲ್ಕನೇ ಐದು ಭಾಗದಷ್ಟು ಮೊತ್ತವನ್ನು ಈ ವಲಯದಿಂದ ಸಂಗ್ರಹಿಸಲಿಲ್ಲ. ಇದು ಒಂದು ಅಗಾಧ ಪ್ರಮಾಣದ ಸಬ್ಸಿಡಿಯೇ ತಾನೇ? ಕಾರ್ಪೊರೇಟ್ ತೆರಿಗೆ ಮತ್ತು ವೈಯಕ್ತಿಕ ಆದಾಯ ತೆರಿಗೆ ಬಾಬ್ತಿನಲ್ಲಿ ಸರಕಾರ ಬಿಟ್ಟು ಕೊಟ್ಟ ಹಣ 2008-09ರಲ್ಲಿ ರೂ.1,04,471 ಕೋಟಿಯಾದರೆ, 2009-10 ರಲ್ಲಿ ರೂ.1,20,483 ಕೋಟಿ. ಅಂದರೆ ಒಟ್ಟು 2.25 ಲಕ್ಷ ಕೋಟಿ ರೂ.ಗಳು! ಇದು ಕಾನೂನು ಪ್ರಕಾರ ಸರಕಾರದ ಆದಾಯಕ್ಕೆ ಸೇರಬೇಕಾಗಿತ್ತು, ಸರಕಾರ ಇದನ್ನು ಪ್ರಜ್ಞಾಪೂರ್ವಕವಾಗಿಯೇ ಬಿಟ್ಟು ಕೊಟ್ಟಿದೆ! ಇದರ ಬದಲು ಈ ಸಂಪನ್ಮೂಲಗಳನ್ನು ಸಂಗ್ರಹಿಸಿ ಸಾರ್ವಜನಿಕ ಹೂಡಿಕೆಗೆ ಬಳಸಿದ್ದರೆ, ಅದು ಅತ್ಯಂತ ಅಗತ್ಯವಾಗಿದ್ದ ಮೂಲರಚನೆಯನ್ನು ನಿರ್ಮಿಸಿ, ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸಿ ಜನಗಳ ಬದುಕನ್ನು ಉತ್ತಮಪಡಿಸುತ್ತಿತ್ತು. ಇದರಿಂದ ಆಂತರಿಕ ಬೇಡಿಕೆಯೂ ಹೆಚ್ಚಿ, ಅದರಿಂದ ಆರ್ಥಿಕ ಮೂಲಾಂಶಗಳು ಬಲಿಷ್ಟಗೊಂಡು ಒಂದು ಬಹಳ ತಾಳಿಕೆಯ ಬೆಳವಣಿಗೆಯ ದಿಕ್ಕಿನಲ್ಲಿ ಸಾಗುವುದು ಸಾಧ್ಯವಿತ್ತು. ಆದರೆ ಬೇಗನೇ ಸೂಪರ್ ಲಾಭಗಳನ್ನು ಬಾಚಿಕೊಳ್ಳುವ ಆತುರದಲ್ಲಿರುವ ಕಾರ್ಪೊರೇಟ್ ಭಾರತ ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರಿ ತನಗೆ ಇನ್ನಷ್ಟು ರಿಯಾಯ್ತಿಗಳನ್ನು ಕೊಡಬೇಕೆಂದು ಕೂಗಾಡುತ್ತಿದೆ.

ಆದರೆ ಸಿರಿವಂತರಿಗೆ ಇಂತಹ ಬೃಹತ್ ಸ್ವರೂಪದ ರಿಯಾಯ್ತಿಗಳನ್ನು ಬೆಳವಣಿಗೆಯ 'ಉತ್ತೇಜಕ'ಗಳು ಎಂದು ಕರೆಯಲಾಗಿದೆ. ಬಡವರಿಗೆ, ಅಗತ್ಯ ವಿರುವವರಿಗೆ ರಿಯಾಯ್ತಿಗಳನ್ನು ಮಾತ್ರ ಸದಾ 'ಸಬ್ಸಿಡಿ'ಗಳು, ಆರ್ಥಿಕಕ್ಕೆ, ಬೆಳವಣಿಗೆಗೆ ಬಹಳ ಕೆಟ್ಟದ್ದು ಎನ್ನಲಾಗಿದೆ.

ಹೀಗೆ ಭಾರತದ ಒಂದು ಅತೀ ಸಣ್ಣ ಭಾಗವನ್ನು ಹೆಚ್ಚು 'ಹೊಳೆಯುವಂತೆ' ಮಾಡುವ, ಅದಕ್ಕಾಗಿ ನಮ್ಮ ಬಹುಪಾಲು ಜನತೆ ಬೆಲೆ ತೆರುವಂತೆ ಮಾಡುವ ಭಂಡತನವ'ನ್ನು ಸ್ವಲ್ಪವೂ ಒಪ್ಪಲು ಸಾಧ್ಯವಿಲ್ಲ.

ಈಗ ನವೀಕರಿಸಬೇಕಾದ, ಅಂದರೆ ಮತ್ತೆ ಕೈಗೊಳ್ಳಬೇಕಾದ ಪ್ರತಿಜ್ಞೆಯೆಂದರೆ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಎಚ್ಚರಿಕೆಗೆ ಗಮನ ಕೊಡುವುದು ಮತ್ತು ಕಳಂಕಿತ, ಸಂಕಟಗಳನ್ನು ಹೇರುವ ನಮ್ಮ ಆರ್ಥಿಕ ಧೋರಣೆಯ ದಿಕ್ಕನ್ನು ಇದಕ್ಕಿಂತ ಸಂಪೂರ್ಣ ಭಿನ್ನವಾದ ದಿಕ್ಕಿನಲ್ಲಿ ಒಯ್ಯುತ್ತೇವೆ ಎನ್ನುವುದು. ಇನ್ನೂ ಶಕ್ತಿಶಾಲಿ ಜನಪರ ಹೋರಾಟಗಳ ಮೂಲಕ ಒಂದು ಉತ್ತಮ ಭಾರತವನ್ನು ನಿರ್ಮಿಸುವ ನಿರ್ಧಾರವನ್ನು ಜನತೆ ದ್ವಿಗುಣಗೊಳಿಸಬೇಕಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಮಹಿಳಾ ಕೃಷಿ ಕೂಲಿಕಾರರು ಹೆಚ್ಚಾದ ಶೋಷಣೆ, ನಿಲ್ಲದ ಬವಣೆ

ಜನವರಿ 29, 30 ರಂದು ಬೆಂಗಳೂರಿನಲ್ಲಿ ಪ್ರಥಮ ಮಹಿಳಾ ಕೃಷಿ ಕೂಲಿಕಾರರ ರಾಜ್ಯ ಸಮಾವೇಶ. ಈ ಹಿನ್ನೆಲೆಯಲ್ಲಿ ಈ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಓದಿ.

ನಿತ್ಯಾನಂದಸ್ವಾಮಿ

ಕೃಷಿಕೂಲಿಕಾರರೆಂದರೆ ನಮ್ಮ ಸಮಾಜದ ಕಟ್ಟಕಡೆಯ ಜನರು. ಸ್ವಂತ ಆಸ್ತಿಯಿಲ್ಲದವರು, ಬೇರೆಯವರ ಕೃಷಿ ಭೂಮಿಯಲ್ಲಿ ಕೆಲಸ ಮಾಡಿ ಜೀವನ ನಡೆಸುವವರು, ಖಾಯಂ ಕೆಲಸದ ಭರವಸೆ ಇಲ್ಲದೆ, ನಿಗದಿತ ಆದಾಯವಿಲ್ಲದೆ, ಯಾವುದೇ ಕಾನೂನು ರಕ್ಷಣೆ ಇಲ್ಲದೆ, ಬದುಕು ಸಾಗಿಸುವ ಅಸಹಾಯಕರಾಗಿರುತ್ತಾರೆ. ಇವರಲ್ಲಿ ಒಂದು ದೊಡ್ಡ ವಿಭಾಗ ಹೊಟ್ಟೆ ಪಾಡಿಗಾಗಿ ಉದ್ಯೋಗ ಹುಡುಕಿಕೊಂಡು ಊರೂರು ಅಲೆಯುತ್ತಿರುತ್ತಾರೆ. ಬರಗಾಲದಂತಹ ಸಂದರ್ಭದಲ್ಲಿ ಇವರು ಹೆಂಡರು-ಮಕ್ಕಳು ಸಮೇತರಾಗಿ ನಗರ ಪ್ರದೇಶಗಳಿಗೂ ನೆರೆಯ ರಾಜ್ಯಗಳಿಗೂ ವಲಸೆ ಹೋಗುತ್ತಿರುತ್ತಾರೆ. ಕೃಷಿಕೂಲಿಕಾರಲ್ಲಿ ಬಹುಸಂಖ್ಯಾತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದು ಜಾತಿ ದಮನ, ಜಾತಿ ಅಸ್ಪೃಶ್ಯತೆಯ ಹಿಂಸೆ, ಅವಮಾನಗಳಿಗೆ ಒಳಗಾಗುತ್ತಿರುತ್ತಾರೆ.

2001ರ ಜನಗಣತಿಯ ಪ್ರಕಾರ ದೇಶದಲ್ಲಿ ಒಟ್ಟು 10,74,47,725 ಕೃಷಿ ಕೂಲಿಕಾರರಿದ್ದಾರೆ.(ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಈ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರಬಹುದು.) ಇವರ ಪೈಕಿ ಪುರುಷ ಕೂಲಿಕಾರರ ಸಂಖ್ಯೆ 5, 73, 54, 281 ಇದೆ. ಮಹಿಳಾ ಕೃಷಿಕೂಲಿಕಾರರ ಸಂಖ್ಯೆ 5,00,93,444 ಇದೆ. ಸರ್ಕಾರದ ಈ ಅಂಕಿ ಅಂಶಗಳು ಅಷ್ಟೇನು ನಂಬಿಕೆಗೆ ಅರ್ಹವಾದುವುಗಳಲ್ಲ ವಲಸೆಗಾರ ಕೃಷಿ ಕೂಲಿಕಾರರ ನಿಖರವಾದ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಸುಲಭದ ಕೆಲಸವಲ್ಲ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ನೀತಿಗಳಿಂದಾಗಿ ಕೃಷಿ ರಂಗದಲ್ಲಿ ಬಿಕ್ಕಟ್ಟು ಆಳವಾಗುತ್ತಿದ್ದು, ಬಡರೈತರು ದಿವಾಳಿಯಾಗುತ್ತಿದ್ದಾರೆ. ಕಷ್ಟಪಟ್ಟು ಬೆಳೆದ ಫಸಲಿಗೆ ಯೋಗ್ಯ ಬೆಲೆ ಸಿಗದಂತಾಗಿ, ಮಾಡಿದ ಸಾಲ ತೀರಿಸಲಾಗದೆ ತಮ್ಮ ಕೃಷಿ ಭೂಮಿಯನ್ನೇ ಕಳೆದುಕೊಳ್ಳುತ್ತಾರೆ. ಒಂದು ಅಂದಾಜಿನ ಪ್ರಕಾರ ದೇಶದಲ್ಲಿ ಪ್ರತಿವರ್ಷ 30 ಲಕ್ಷಕ್ಕೂ ಹೆಚ್ಚು ರೈತರು ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ. ಹೀಗೆ ಭೂಮಿ ಕಳೆದುಕೊಂಡ ರೈತರು ಮತ್ತು ಅವರ ಕುಟುಂಬದ ಸದಸ್ಯರು ಹೊಟ್ಟೆಪಾಡಿಗಾಗಿ ಕೃಷಿಕೂಲಿಕಾರರಾಗಿ ಅಥವಾ ಅಸಂಘಟಿತ ಕಾರ್ಮಿಕರಾಗಿ ದುಡಿಯಲು ಆರಂಭಿಸುತ್ತಾರೆ. ಹೀಗಾಗಿ ಕೃಷಿ ಕೂಲಿಕಾರರ ಸಂಖ್ಯೆಯು ವರ್ಷ ವರ್ಷ ಹೆಚ್ಚಾಗುತ್ತಿದೆ. ಅದರೊಂದಿಗೆ ಅವರ ಬವಣೆಯೂ ಉಲ್ಬಣಗೊಳ್ಳುತ್ತಿದೆ.

ಕೃಷಿ ಕೂಲಿಕಾರರಲ್ಲಿ ಪುರುಷ ಕೂಲಿಕಾರರಿಗಿಂತ ಮಹಿಳಾ ಕೃಷಿಕೂಲಿಕಾರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಈ ಬೆಳವಣಿಗೆಯು ಸಹ ಉದಾರೀಕೃತ ನೀತಿಗಳ ಒಂದು ನೇರ ಪರಿಣಾಮವಾಗಿದೆ. ಕೃಷಿ ರಂಗದಲ್ಲಿ ಉದಾರೀಕರಣದ ನೀತಿಗಳ ಅನುಷ್ಠಾನದಿಂದಾಗಿ ಕೃಷಿ ಚಟುವಟಿಕೆಗಳು ಇಳಿಮುಖವಾಗಿವೆ. ಯಂತ್ರಗಳ ಬಳಕೆ ಹೆಚ್ಚಾಗಿದೆ. ಹೆಚ್ಚು ಕೂಲಿಕಾರರನ್ನು ಬಯಸುವ ಆಹಾರ ಬೆಳೆಗಳ ಬದಲಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಹೆಚ್ಚಿನ ಒಲವು ವ್ಯಕ್ತವಾಗುತ್ತಿರುವುದರಿಂದ ಕೂಲಿಕಾರರಿಗೆ ಮೊದಲಿನಷ್ಟು ಕೆಲಸ ಸಿಗದಂತಾಗಿದೆ. ಇದರ ಪರಿಣಾಮವಾಗಿ ಕೂಲಿಕಾರರ ಕುಟುಂಬಗಳ ನೈಜ ಆದಾಯ ಗಣನೀಯವಾಗಿ ಇಳಿಮುಖವಾಗಿದೆ. ಇದರ ಜೊತೆ ಜೊತೆಯಲ್ಲಿ ಇದೇ ಉದಾರೀಕರಣದ ನೀತಿಗಳ ಪರಿಣಾಮವಾಗಿ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ಹೀಗಾಗಿ ಕೂಲಿಕಾರರ ಮತ್ತು ಬಡ ರೈತರ ಮನೆಗಳಲ್ಲಿ ಕೇವಲ ಪುರುಷರ ಸಂಪಾದನೆಯಿಂದ ಕುಟುಂಬ ನಿರ್ವಹಣೆ ಅಸಾಧ್ಯವಾಗುತ್ತಿದ್ದು ಗ್ರಾಮೀಣ ಮಹಿಳೆಯರು ಹೆಚ್ಚೆಚ್ಚು ಸಂಖ್ಯೆಯಲ್ಲಿ ಕೂಲಿ ಕೆಲಸಕ್ಕೆ ಹೋಗುವುದು ಅನಿವಾರ್ಯವಾಗುತ್ತಿದೆ. ಮಹಿಳೆಯರನ್ನು ಹೆಚ್ಚು ದುಡಿಸಿಕೊಳ್ಳಬಹುದು, ಅವರಿಗೆ ಪುರಷರಿಗಿಂತ ಕಮ್ಮಿ ಕೂಲಿಕೊಟ್ಟು ದುಡಿಸಬಹುದು, ಪುಕ್ಕಟ್ಟೆ ಕೆಲಸಕ್ಕೂ ಬಲವಂತಪಡಿಸಬಹುದು, ಅವರ ಅಸಹಾಯಕತೆಯ ದುರುಪಯೋಗ ಪಡೆದುಕೊಳ್ಳಬಹುದು, ಅಷ್ಟೇ ಸುಲಭವಾಗಿ ಮಹಿಳೆಯರಿಗೆ ಕೆಲಸದಿಂದ ವಜಾಮಾಡಬಹುದು ಮುಂತಾದ ಕಾರಣಗಳಿಂದಾಗಿ ಮಹಿಳಾ ಕೃಷಿ ಕೂಲಿಕಾರರಿಗೆ ಬೇಡಿಕೆ ಹೆಚ್ಚಾಗಿದೆ. ಅಂದರೆ ಮಹಿಳಾ ಕೂಲಿಕಾರರ ಶೋಷಣೆ ಹೆಚ್ಚಾಗಿದೆ.



ಕರ್ನಾಟಕದಲ್ಲಿ ಮಹಿಳಾ ಕೃಷಿಕೂಲಿಕಾರರ ಪರಿಸ್ಥಿತಿ

ಕರ್ನಾಟಕದಲ್ಲಿ ಪುರುಷ ಕೃಷಿ ಕೂಲಿಕಾರರಿಗಿಂತ ಮಹಿಳಾ ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚು. ಪ್ರತಿವರ್ಷ ಮಹಿಳಾ ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಾ ಇದೆ. ಒಟ್ಟು ಕೃಷಿ ಕೂಲಿಕಾರರಲ್ಲಿ ಮಹಿಳೆಯರ ಪ್ರಮಾಣ 1981ರಲ್ಲಿ ಶೇ.46 ಇದ್ದದ್ದು, 1991ರಲ್ಲಿ ಶೇ.50ಕ್ಕೂ, 2001 ರಲ್ಲಿ ಶೇ.59 ಕ್ಕೂ ಏರಿದೆ. ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಕೊಪ್ಪಳ, ಬೆಳಗಾವಿ, ವಿಜಾಪುರ, ಬಾಗಲ ಕೋಟೆ, ಧಾರವಾಡ, ಹಾವೇರಿ, ಮೊದಲಾದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮಹಿಳಾ ಕೃಷಿ ಕೂಲಿಕಾರರ ಸಂಖ್ಯೆ ಅತ್ಯಧಿಕವಾಗಿದೆ.



15 ಜಿಲ್ಲೆಗಳು ದಕ್ಷಿಣ ಕರ್ನಾಟಕದ ಪ್ರದೇಶಕ್ಕೆ ಸೇರಿದ್ದು, ಇನ್ನುಳಿದ 12 ಜಿಲ್ಲೆಗಳು ಉತ್ತರ ಕರ್ನಾಟಕಕ್ಕೆ ಸೇರಿದವುಗಳಾಗಿವೆ. ಕೃಷಿ ಕೂಲಿಕಾರರ ಸಂಖ್ಯೆ ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗಿಂತ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು. ಅದರಂತೆಯೇ ಮಹಿಳಾ ಕೃಷಿ ಕೂಲಿಕಾರರ ಸಂಖ್ಯೆಯು ಸಹ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೇ ಹೆಚ್ಚು.

ಕರ್ನಾಟಕವು ಭೂ ಸುಧಾರಣೆಗಳ ಪ್ರಯೋಜನ ಪಡೆಯಲು ಸಾಧ್ಯವಾಗದಿರುವುದರಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಭೂರಹಿತ ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚು. ಕರ್ನಾಟಕ ಭೂ ಸುಧಾರಣ ಕಾಯ್ದೆಯಲ್ಲಿನ ಲೋಪದೋಷಗಳನ್ನು ಬಳಸಿಕೊಂಡು ಉತ್ತರ ಕರ್ನಾಟಕದ ದೊಡ್ಡ ದೊಡ್ಡ ಭೂಮಾಲಿಕರು ತಮ್ಮ ಹೆಚ್ಚುವರಿ ಭೂಮಿಯನ್ನು ಬೇನಾಮಿ ಹೆಸರುಗಳ ಅಡಿಯಲ್ಲಿ ತಮ್ಮ ಸ್ವಾದೀನದಲ್ಲೇ ಉಳಿಸಿಕೊಂಡರು. ಗೇಣಿದಾರ ರೈತರನ್ನು ನಿರ್ದಾಕ್ಷಣ್ಯವಾಗಿ ಒಕ್ಕಲೆಬ್ಬಿಸಿದರು. ಭೂಮಿಯಿಂದ ಹೊರದಬ್ಬಲ್ಪಟ್ಟ ಲಕ್ಷಾಂತರ ಭೂರಹಿತ ಗೇಣಿದಾರ ಕುಟುಂಬಗಳು ಕೃಷಿ ಕೂಲಿಕಾರರಾದರು. ಹೀಗಾಗಿ , ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕೃಷಿಕೂಲಿಕಾರರ ಸಂಖ್ಯೆ ಅತಿ ಹೆಚ್ಚು ಮತ್ತು ನಗರ ಪ್ರದೇಶಗಳಿಗೆ ವಲಸೆ ಹೋಗುವವರಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳ ಕೂಲಿಕಾರರು ಅತಿ ಹೆಚ್ಚು.

ಹೆಚ್ಚುತ್ತಿರುವ ಸಂಖ್ಯೆ

ಕರ್ನಾಟಕದಲ್ಲಿ ಮಹಿಳಾ ಕೃಷಿ ಕೂಲಿಕಾರರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ಈ ಬೆಳವಣಿಗೆಗೆ ಒಂದು ಪ್ರಮುಖ ಕಾರಣವೇನೆಂದರೆ, ಪುರುಷ ಕೂಲಿಕಾರರು ಕೃಷಿಯಲ್ಲಿ ಕೂಲಿ ಕೆಲಸ ಮಾಡುವುದರಿಂದ ಜೀವನ ನಿರ್ವಹಣೆಗೆ ಬೇಕಾಗುವಷ್ಟು ಆದಾಯ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ಕೃಷಿ ಕೂಲಿ ಕೆಲಸವನ್ನು ಬಿಟ್ಟು ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ ಮೊದಲಾದ ಉದ್ದಿಮೆಗಳಲ್ಲಿ ಕಾರ್ಮಿಕರಾಗಿ ದುಡಿಯಲು ಮುಂದಾಗುತ್ತಾರೆ ಮತ್ತು ಇದಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಪುರುಷರು ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾದಂತೆ, ಮಹಿಳೆಯರೇ ಕುಟುಂಬದ ನಿರ್ವಹಣೆ ಯನ್ನು ಒಂಟಿಯಾಗಿ ನಿಭಾಯಿಸಬೇಕಾಗುತ್ತದೆ. ಹೀಗಾಗಿ ಕೂಲಿಕಾರರ ಮತ್ತು ಬಡ ರೈತರ ಮನೆಗಳಲ್ಲಿನ ಮಹಿಳೆಯರು ಕೃಷಿಯಲ್ಲಿನ ಕೂಲಿ ಕೆಲಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮುಂದಾಗುತ್ತಾರೆ. ಮೇಲ್ವರ್ಗಗಳ ಮನೆಗಳಲ್ಲಿನ ಮಹಿಳೆಯರು ಮನೆಯೊಳಗೆ ಇರುತ್ತಾರೆ. ಆದರೆ ಬಡವರ ಮನೆಗಳಲ್ಲಿನ ಮಹಿಳೆಯರು ಹೆಚ್ಚೆಚ್ಚು ಸಂಖ್ಯೆಯಲ್ಲಿ ಕೂಲಿ ಕೆಲಸ ಹುಡುಕಿಕೊಂಡು ಮನೆಗಳಿಂದ ಹೊರಬರುತ್ತಾರೆ.

ಅಧಿಕ ದುಡಿಮೆಯ ಹೊರೆ :

ಬಿತ್ತುವುದು, ನಾಟಿ ಮಾಡುವುದು, ಕಳೆ ಕೀಳುವುದು, ಗೊಬ್ಬರ ಹೊರುವುದು, ಗೊಬ್ಬರ ಹಾಕುವುದು, ಕೊಯ್ಯುವುದು, ಒಕ್ಕುವುದು, ತೂರುವುದು, ಕಾಳು ಒಣಗಿಸುವುದು, ಬಣವೆ ಕಟ್ಟುವುದು, ಸಾಗಿಸುವುದು ಕಬ್ಬು ಕಡಿಯುವುದು, ಹತ್ತಿ ಬಿಡಿಸುವುದು, ಮೆಣಸಿಕಾಯಿ ಹರಿಯುವುದು, ಶೇಂಗಾ ಕೀಳುವುದು, ಅಡಿಕೆ ಸುಲಿಯುವುದು ಮೊದಲಾದ ಕೃಷಿಯ ಎಲ್ಲಾ ಕೆಲಸಗಳಲ್ಲಿ ಹೆಚ್ಚಿನ ಪಾಲನ್ನು ಮಹಿಳಾ ಕೃಷಿಕೂಲಿಕಾರರಿಂದಲೇ ಮಾಡಿಸಲಾಗುತ್ತದೆ. ಹೊರಗೆ ಕೆಲಸಕ್ಕೆ ಹೋಗುವ ಕೃಷಿ ಕೂಲಿಕಾರ ಮಹಿಳೆಗೆ ಮನೆಯೊಳಗಿನ ಕೆಲಸಗಳಿಂದ ವಿನಾಯಿತಿ ಇರುವುದಿಲ್ಲ. ಹೀಗಾಗಿ ಕೃಷಿ ಕೂಲಿಕಾರರ ಮಹಿಳೆಯ ಕೆಲಸದ ದಿನಚರಿ ಬೆಳಿಗ್ಗೆ 4 ಅಥವಾ 5 ಗಂಟೆಗೇ ಆರಂಭವಾಗುತ್ತದೆ. ದನಕರುಗಳ ಹೆಂಡಿ-ಕಸ ತೆಗೆಯುವುದು, ಹಾಲು ಹೈನು ಮಾಡುವುದು, ಅಡಿಗೆ ಮಾಡವುದು, ನೀರು ತರುವುದು, ಬಟ್ಟೆ ಒಗೆಯುವುದು, ಉರುವಲು ಕಟ್ಟಿಗೆ ಸಂಗ್ರಹಿಸಿ ತರುವುದು, ದನಕರುಗಳಿಗೆ ಮೇವು ತರುವುದು ಅಲ್ಲದೇ ಮಕ್ಕಳ-ಮುದುಕರ ಆರೈಕೆ ಮಾಡುವುದು ಮೊದಲಾದ ನಿತ್ಯದ ಕೆಲಸಗಳನ್ನು ಅವಳು ಮಾಡುತ್ತಲೇ ಇರುತ್ತಾಳೆ, ಈ ಕೆಲಸಗಳಿಗೆ ಯಾವುದೇ ದಾಖಲೆ ಇಲ್ಲ. ಯಾವುದೇ ಪುರಸ್ಕಾರವಿಲ್ಲ. ಹೀಗೆ ಕೃಷಿ ಕೂಲಿಕಾರ ಮಹಿಳೆ ಅಧಿಕ ದುಡಿಮೆಯ ಹೊರೆಯ ಅಡಿಯಲ್ಲ ನರಳುತ್ತಿರುತ್ತಾಳೆ.

ಸಮಾನ ಕೂಲಿ ನೀಡದೆ ವಂಚನೆ :

ಮಹಿಳಾ ಕೃಷಿ ಕೂಲಿಕಾರರಿಗೆ ಪುರುಷರೊಂದಿಗೆ ಸಮಾನ ಕೆಲಸಕ್ಕೆ ಸಮಾನ ಕೂಲಿ ನೀಡದೆ ವಂಚನೆ ಮಾಡಲಾಗುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಈ ಪರಿಸ್ಥಿತಿ ಇದೆ. ಮಹಿಳೆಯರನ್ನು ಪುರುಷರಿಗಿಂತ ಕೀಳಾಗಿ ಕಾಣುವ ಪರಂಪರಾಗತವಾದ ಪಾಳೆಗಾರಿ ಮನೋಭಾವ ಅವರು ಮಾಡುವ ಕೆಲಸಕ್ಕೂ ಅನ್ವಯಿಸಲಾಗುತ್ತದೆ. ಮಹಿಳೆ ಪುರುಷನಿಗೆ ಸಮಾನಳಾಗಿ ಕೆಲಸ ಮಾಡಿದರೂ ಅವಳಿಗೆ ಕೂಲಿ ಕೊಡುವಾಗ ಕಮ್ಮಿ ಕೂಲಿ ಕೊಟ್ಟು ತಾರತಮ್ಯ ಮಾಡಲಾಗುತ್ತದೆ.

ಮೇಲಿನ ಕೋಷ್ಟಕದಲ್ಲಿ ಕಂಡು ಬರುವುದೇನೆಂದರೆ - ಮಹಿಳಾ ಕೃಷಿಕೂಲಿಕಾರರಿಗೆ ಕನಿಷ್ಠ ಕೂಲಿಯೂ ಸಿಗುವುದಿಲ್ಲ ಮಾತ್ರವಲ್ಲ ಮಹಿಳಾ ಕೂಲಿಕಾರರಿಗೆ ಸಿಗುವ ಕೂಲಿ ಪುರುಷರಿಗೆ ಸಿಗುವ ಕೂಲಿಗಿಂತ ಕಮ್ಮಿಯಾಗಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 60ಕ್ಕೂ ಹೆಚ್ಚು ವರ್ಷಗಳು ಕಳೆದರೂ ಈ ದೇಶದಲ್ಲಿ

ಪುಟ 11 ಕ್ಕೆ

ಆಪರೇಷನ್ ಬಿಬಿಎಂಪಿ

2000 ಸಾವಿರ ಕೋಟಿ ರೂ.ಗಳ ಈ ಅಕ್ರಮ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿದೆ. ಇದು ಬಿಜೆಪಿ ಸಚಿವರೇ ನಡೆಸಿದ ಹಗರಣ. ಬಿಜೆಪಿಯೇ ಇದಕ್ಕೆ ಹೊಣೆ. ಏಕೆಂದರೆ ಚುನಾಯಿತ ಸಂಸ್ಥೆ ಇಲ್ಲದ ಸ್ಥಿತಿಯಲ್ಲಿ ಅಧಿಕಾರ ನಡೆಸಿದ್ದೇ ಬಿಜೆಪಿ ಸಚಿವರು.

ಬೃಹತ್ ಭ್ರಷ್ಟಾಚಾರದ ಬೆಂಬಲಕ್ಕೆ ಮಹಾಪೌರರು




■ ಕೆ.ಎನ್.ಉಮೇಶ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆ ಮುಗಿದು 10 ತಿಂಗಳು ತುಂಬುತ್ತಿದೆ. ಬಿ.ಬಿ.ಎಂ.ಪಿ. ಚುನಾವಣೆಗಳನ್ನು ಮುಂದೆ ದೂಡುತ್ತಾ 2008-09, 2009-10 ರ ಸಾಲಿನ ಆಡಳಿತವನ್ನು ಆಡಳಿತಾಧಿಕಾರಿಗಳ ಆಡಳಿತದ ನೆಪದಲ್ಲಿ ರಾಜ್ಯ ಸರ್ಕಾರ ನಡೆಸಿರುವುದು ಈಗ ಇತಿಹಾಸ. ರಾಜ್ಯ ಸರ್ಕಾರ ಎಂದೊಡನೆ ಬೆಂಗಳೂರನ್ನು ಉತ್ತರ ದಕ್ಷಿಣ ಎಂಬಂತೆ ಹಂಚಿಕೊಂಡು ಉಸ್ತುವಾರಿ ವಹಿಸಿಕೊಂಡಿದ್ದ ಸಚಿವರಾದ ಆರ್.ಅಶೋಕ್ ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ರವರದೇ ಆಡಳಿತವಾಗಿತ್ತು ಎಂಬುದೇನು ಗುಪ್ತವಾಗಿ ಉಳಿದಿಲ್ಲ. ಅವರೊಟ್ಟಿಗೆ ಬೆಂಗಳೂರಿನಲ್ಲಿನ ಬಿಜೆಪಿ ಶಾಸಕರ ಆಡಳಿತವೇ ಅದು ಆಗಿತ್ತು. ಆ ಅವಧಿಯಲ್ಲಿ ಆಡಳಿತಾಧಿಕಾರಿಗಳಾಗಿದ್ದವರು ಆಯುಕ್ತರಾದ ಡಾ.ಎಸ್.ಸುಬ್ರಹ್ಮಣ್ಯ ಮತ್ತು ಭರತ್‌ಲಾಲ್ ಮೀಣಾ. ಈ ಅವಧಿಯಲ್ಲೇ ಬಜೆಟ್ ಎಲ್ಲಾ ಮಂಡನೆಗೆ ಯತ್ನ ನಡೆದಿದ್ದು.

....ಈ ಅವಧಿಯಲ್ಲೇ, ನೋಡಿ 60 ವರ್ಷಗಳಲ್ಲಿ ಬೆಂಗಳೂರಿಗೆ ಸಿಗದಿದ್ದದ್ದು ಬಿಜೆಪಿ ಅಧಿಕಾರಾವಧಿಯಲ್ಲಿ ಸಿಕ್ಕಿದೆ. ಎಲ್ಲೆಂದರಲ್ಲಿ ಅಭಿವೃದ್ಧಿಯ ಹೊಳೆ ಹರಿದಿದೆ. ಇಡೀ ಬೆಂಗಳೂರು ಅಭಿವೃದ್ಧಿಯ ಚಿಮ್ಮುಹಲಗೆಯ ಮೇಲಿದೆ. ಹಣದ ಕೊರತೆಯಿಲ್ಲ. ಸಂಕಲ್ಪದ ಕೊರತೆಯಿತ್ತು. ಅದನ್ನು ಬಿಜೆಪಿ ಆಡಳಿತ ನೀಗಿಸಿದೆ.... ಎಂದೆಲ್ಲಾ ಬೊಬ್ಬೆ ಇಡಲಾಯಿತು. 2009ರ ಪಾರ್ಲಿಮೆಂಟ್ ಚುನಾವಣೆ ವೇಳೆ ಬೆಂಗಳೂರು ಅಭಿವೃದ್ಧಿಗೆ ಎಂಬಂತೆ ಬಿಜೆಪಿ ಅಭ್ಯರ್ಥಿಗಳು ಮತ್ತು ಶಾಸಕರಿಂದ ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ, 2010 ಬಿಬಿಎಂಪಿ ಚುನಾವಣೆ ವೇಳೆ ಪ್ರತಿ ಬಿಜೆಪಿ ಶಾಸಕರಿಂದ ಅವರ ಕ್ಷೇತ್ರಕ್ಕೊಂದು ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಎಂಬೆಲ್ಲಾ ಸದ್ದುಗದ್ದಲ ಎಲ್ಲಾ ನಡೆಯಿತು. ಅಂತೆಯೇ ವಿಶ್ವಬ್ಯಾಂಕ್ ನಿರ್ದೇಶಿತ ಕಾರ್ಯಕ್ರಮಗಳನ್ನೇ 'ಬೆಂಗಳೂರು ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಸೂಚಿ" (abide) ಎಂದು ಬಿಡುಗಡೆ ಮಾಡಿ ಎಂದಿಲ್ಲದ ಅಬ್ಬರವನ್ನು ಮಾಡಿ ಸಂಸತ್ತಿನ 3 ಕ್ಷೇತ್ರಗಳಲ್ಲೂ ಗೆಲ್ಲುವಲ್ಲಿ ಹಾಗೂ ಬಿ.ಬಿ.ಎಂ.ಪಿ. ಯಲ್ಲಿ ಬಹುಮತ ಪಡೆಯುವಲ್ಲಿ ಬಿಜೆಪಿ ಯಶಸ್ವಿಯಾಯಿತು.





ಅಕ್ರಮವಾಗಿ ಮೊತ್ತ ಹೆಚ್ಚಳ

ದಾಸರಹಳ್ಳಿ ವಲಯದ ರಾಜಗೋಪಾಲ ನಗರ ಹಾಗೂ ಚೊಕ್ಕಸಂದ್ರ ಉಪವಿಭಾಗಗಳಲ್ಲಿ 23 ತುರ್ತು ಕಾಮಗಾರಿಗಳಿಗೆ 1.10 ಕೋಟಿ ರೂಪಾಯಿಗೆ ಅನುಮೋದನೆ ನೀಡಿದ್ದರೆ ಇದೇ ಕಾಮಗಾರಿಗಳಿಗೆ ವರ್ಕ್ ಕೋಡ್ ನೀಡುವಾಗ ಮೊತ್ತವನ್ನು 11.42 ಕೋಟಿ ರೂಪಾಯಿಗೆ ಏರಿಕೆ ಮಾಡಲಾಗಿದೆ. ಅಂದರೆ 10.32 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲಾಗಿದೆ.

ಆಪರೇಷನ್ ಬಿಬಿಎಂಪಿ ಬಜೆಟ್

ಆದರೆ ಇದೀಗ ಹೊರಬಿದ್ದಿರುವ 2009-10 ರ ಈ ಹಿಂದಿನ 2008-09 ರ ಲೆಕ್ಕಪರಿಶೋಧಕರ ವರದಿ ಬೆಚ್ಚಿಬೀಳಿಸುವ ಅಂಶಗಳನ್ನು ಹೊರಹಾಕಿವೆ. ವರದಿಯ ಪ್ರಕಾರ 2008-09 ರಲ್ಲಿ ಬಿಬಿಎಂಪಿ ಬಜೆಟ್ ನಿಗದಿಪಡಿಸಿದ್ದ ಅನುದಾನಕ್ಕಿಂತ ರೂ.1500 ಕೋಟಿ 2009-10 ರಲ್ಲಿ ರೂ.2000 ಕೋಟಿ ಹೆಚ್ಚುವರಿ ಮೊತ್ತದ ಕಾಮಗಾರಿಗಳಿಗೆ ವರ್ಕ್‌ಕೋಡ್ ನೀಡಲಾಗಿದೆ. ಆದರೆ ಕಾನೂನಿನಂತೆ ಕರ್ನಾಟಕ ಮುನ್ಸಿಪಾಲ್ ಕಾಯ್ದೆ 1976 ರ ಕಲಂ 170 ರಡಿಯ ಬಿಬಿಎಂಪಿ ನಿಯಮಾವಳಿಗಳ ನಿಯಮ 172 ರ ಪ್ರಕಾರ ಸರ್ಕಾರದಿಂದ ಮಂಜೂರಾದ ಆಯವ್ಯಯದ ಮೊತ್ತವನ್ನು ಯಾವುದೇ ಕಾರಣಕ್ಕೂ ಮೀರುವಂತಿಲ್ಲ. ಈ ನಿಯಮವನ್ನು ಮೀರಿ/ಉಲ್ಲಂಘಿಸಿ ವರ್ಕ್‌ಕೋಡ್ ನೀಡಲಾಗಿದೆ. ಇಲ್ಲದ ಹಣಕ್ಕೆ ವರ್ಕ್ ಕೋಡ್ ನೀಡಿ, ಹಣದ ಕೊರತೆಯಿಲ್ಲ ಅಭಿವೃದ್ಧಿಗೆ ಎಂಬ ಮುಖ್ಯಮಂತ್ರಿಗಳ ಮಾತಿಗೆ ಪುಷ್ಠಿ ನೀಡಲೆಂಬಂತೆ ವರ್ಕ್ ಕೋಡ್ ನೀಡಿ, ನೋಡಿ ಬಿಜೆಪಿ ಆಡಳಿತದಲ್ಲಿ ಎಂದಿಲ್ಲದ ಅಭಿವೃದ್ಧಿ ನಡೆದಿದೆ ಎಂದು ಬಿಂಬಿಸಿ, ಬಿಬಿಎಂಪಿ ಚುನಾವಣೆ ಗೆಲ್ಲಲು ಬಿಬಿಎಂಪಿ ಆಯುವ್ಯಯಕ್ಕೇನೆ ಕಾನೂನು ಬಾಹಿರವಾಗಿ "ಆಪರೇಷನ್ ಬಿಬಿಎಂಪಿ" ನಡೆಸಿದೆ ಬಿಜೆಪಿ ಸರ್ಕಾರ. ಇಲ್ಲದ ಬಹುಮತ ಪಡೆಯಲು 'ಆಪರೇಷನ್ ಕಮಲ' ನಡೆಸಿದಂತೆ ಹಣವಿಲ್ಲದಿದ್ದರೂ ಅಭಿವೃದ್ಧಿಯ ತೋರಿಕೆಗಾಗಿ ಕಾನೂನು ಮೀರಿ, ಇಲ್ಲದ ಹಣಕ್ಕೆ ವರ್ಕ್ ಕೋಡ್ ನೀಡಿದೆ. ಬಿಬಿಎಂಪಿ ಆಡಳಿತ, ರಾಜ್ಯ ಸರ್ಕಾರದ ಅಣತಿಯಡಿ.

ವರ್ಕ್ ಕೋಡ್ ಹಗರಣ

ಆಪರೇಷನ್ ಬಿಬಿಎಂಪಿ ಫಲ :

ಕಾನೂನು ಹಾಗೂ ನಿಯಮಗಳನ್ನು ಮೀರಿ ಅನುಮತಿಸಲ್ಪಟ್ಟ ಬಜೆಟ್‌ಗಿಂತ ಹೆಚ್ಚು ಹಣಕ್ಕೆ (ಕೋಟ್ಯಾಂತರ ರೂಪಾಯಿಗಳಿಗೆ) ವರ್ಕ್ ಕೋಡ್ ಕೊಡುವುದನ್ನು ಸರ್ಕಾರ ತಡೆಯದಿದ್ದಾಗ ಒಂದೇ ಕಾಮಗಾರಿಗೆ ಎರಡೆರಡು, ಕಛೇರಿಯ ಗಮನಕ್ಕೆ ತಾರದೆ ಎಲ್ಲೆಂದರಲ್ಲೇ ಕುಳಿತು, ಕಛೇರಿಯ ದಾಖಲಾತಿಗಳ ಇನ್‌ವರ್ಡ್ ಔಟ್‌ವರ್ಡ್‌ಗಳಲ್ಲೂ ನಮೂದಿಸದೆ ಕಡತಗಳನ್ನು ತಯಾರಿಸಿ ವರ್ಕ್ ಕೋಡ್ ನೀಡಲು ಕಿರಿಯ ಅಧಿಕಾರಿಗಳು ಶುರುಮಾಡಿಕೊಂಡರು. ಅದಕ್ಕೆ ಆಯುಕ್ತರು ಅನುಮೋದನೆಯನ್ನು ನೀಡಿದ್ದಾರೆ. ಉಪ ನಿಯಂತ್ರಕರೇ 935 ಕಾಮಗಾರಿಗಳಿಗೆ ರೂ.200 ಕೋಟಿ ಮೊತ್ತದ ಕಾಮಗಾರಿಗಳಿಗೆ ವರ್ಕ್ ಕೋಡ್ ನೀಡಿ ಅಕ್ರಮ ಎಸಗಿದ್ದಾರೆ. ಸರ್ವ ಯೋಜನೆಯನ್ನು ಬಿಡದೆ ಅವ್ಯವಹಾರ ನಡೆಸಿದ್ದಾರೆ ಎನ್ನುತ್ತದೆ ಲೆಕ್ಕಪರಿಶೋಧಕರ ವರದಿ. ಬಿಜೆಪಿ ಶಾಸಕರು ಸರ್ವ ಯೋಜನೆಯಡಿ ಕಾಮಗಾರಿಗಳಲ್ಲಿ ಶೇ.30 ರಷ್ಟು ಕಮಿಷನ್ ಪಡೆಯುತ್ತಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ. ಕೆಲವೊಮ್ಮೆ ಆಯುಕ್ತರ ಗಮನಕ್ಕೆ ತಾರದೆ ವರ್ಕ್‌ಕೋಡ್ ನೀಡಲಾಗಿದೆ ಎಂಬುದನ್ನು ವರದಿ ಬಹಿರಂಗಪಡಿಸಿದೆ. ಒಟ್ಟಾರೆ ಆಪರೇಷನ್ ಬಿಬಿಎಂಪಿ (ಬಿಬಿಎಂಪಿ ಹಿಡಿಯಲು ಬಿಜೆಪಿ ನಡೆಸಿದ ಅಕ್ರಮ ದಾರಿ ತೋರಿಕೆಗೆ ಕಾಮಗಾರಿ) ಫಲವಾಗಿ ವರ್ಕ್ ಕೋಡ್ ಹಗರಣ, ಬೃಹತ್ ಭ್ರಷ್ಟಾಚಾರ ಬಿಬಿಎಂಪಿಯಲ್ಲಿ ನಡೆದಿದೆ!

ಅನಧಿಕೃತ ದಾಖಲೆಗಳಿಗೆ ಆಯುಕ್ತರ ಅನುಮೋದನೆ, ಅಕ್ರಮ ವರ್ಕ್ ಕೋಡ್ ನೀಡಿಕೆ ನಡೆದಿರುವಾಗ ಆಯುಕ್ತರ ಗಮನಕ್ಕೆ ತಾರದೆ 200 ಕೋಟಿ ಕಾಮಗಾರಿಗಳಿಗೆ ವರ್ಕ್ ಕೋಡ್ ನೀಡಲಾಗಿದೆ ಎಂದಿದೆ ವರದಿ. ಬಹುಷಃ ಯಡಿಯೂರಪ್ಪ ಮತ್ತು ಮಕ್ಕಳು ಅವರ ಮನೆಯಲ್ಲೇ, ಅಶೋಕ್ ಹಾಗೂ ಕಟ್ಟಾ ಮನೆಯಲ್ಲೋ ಅಥವಾ ದೇಶಪ್ರೇಮದ ಸ್ವಯಂಘೋಷಿತ ದತ್ತು ಪಡೆದಿರುವ ಆರ್.ಎಸ್.ಎಸ್. ನ ಕೇಶವ ಕೃಪಾದಲ್ಲೋ ತಯಾರಾದ ದಾಖಲೆಗಳಿಗೂ ಆಯುಕ್ತರು ಅನುಮೋದನೆ ನೀಡಿದ್ದಾರೆ. ಏಕೆಂದರೆ ಕೆಲವು ವರ್ಕ್‌ಕೋಡ್ ಕಡತಗಳು ಪ್ರಾರಂಭದ ಕಛೇರಿಯಿಂದ ಆಯುಕ್ತರ ಕಛೇರಿಯವರೆಗೆ ಯಾವುದೇ ಕಛೇರಿಗಳ ಪರಿಶೀಲನೆಗೆ (ಇನ್‌ವರ್ಡ್ /ಔಟ್‌ವರ್ಡ್) ಒಳಗಾಗಿಲ್ಲ ಮಾತ್ರವಲ್ಲದೆ ಯಾವುದೇ ಕಛೇರಿಯ ಅಧಿಕೃತ ಮೊಹರನ್ನು ಬಂದಿಲ್ಲ ಎಂದಿದೆ ವರದಿ.

ವರ್ಕ್ ಕೋಡ್ ಎಂದರೇನು?

ನಡೆಯದ ಕಾಮಗಾರಿಕೆ ಸುಳ್ಳು ದಾಖಲೆ ನೀಡಿ ಹಣ ಪಡೆಯುವ ಗುತ್ತಿಗೆದಾರರು, ಪೌರರು, ಅಧಿಕಾರಿಗಳ ಭ್ರಷ್ಟಾಚಾರ ತಡೆಯಲು, ಪ್ರತಿಯೊಂದು ಕಾಮಗಾರಿಗೂ ಒಂದು ನಿರ್ದಿಷ್ಟ ಕಾಮಗಾರಿ ಸಂಕೇತ ನೀಡುವುದಕ್ಕಾಗಿ ಪಾಲಿಕೆ ವ್ಯಾಪ್ತಿಯ ಕಾಮಗಾರಿಗಳು ಪುನರಾವರ್ತನೆಯಾಗುವುದನ್ನು ತಡೆಯಲಿಕ್ಕಾಗಿ ಈ ವರ್ಕ್ ಕೋಡ್ ಪದ್ಧತಿ ಜಾರಿಗೆ ತರಲಾಯಿತು. ನೋಡಿ ಹೇಗಿದೆ ಅದರಲ್ಲೇ ಅಕ್ರಮ ಎಸಗಿ, ಒಂದೇ ಕಾಮಗಾರಿಕೆ ಎರಡೆರಡು ವರ್ಕ್ ಕೋಡ್ ನೀಡಿ, ವರ್ಕ್ ಕೋಡ್ ಹಗರಣವನ್ನೇ ಸೃಷ್ಟಿಸಿದೆ ಬಿಜೆಪಿ ಸರ್ಕಾರ.

ನಿಮಗಿದು ಗೊತ್ತೇ....!

ಪಾರ್ಕ್‌ಗಳಲ್ಲಿನ	
ಒಂದು ಕೊಳವೆ ಬಾವಿಗೆ	*ರೂ.3.20 ಲಕ್ಷ*
ಒಂದು ಬೆಂಚ್‌ಗೆ	*ರೂ.8,500*
ಒಂದು ಕಸದ ಬುಟ್ಟಿಗೆ	*ರೂ.4800*
ಒಂದು ಆಶ್ರಯ ತಾಣಕ್ಕೆ	*ರೂ.2.20 ಲಕ್ಷ*
	ಒಟ್ಟು 223
ಕೊಳವೆ ಬಾವಿಗೆ ಒಟ್ಟು	*ರೂ.7.46 ಕೋಟಿ*
ಒಟ್ಟು 145 ಕಾವಲುಗಾರರ	
ಶೆಡ್ ನಿರ್ಮಾಣಕ್ಕೆ	*ರೂ.4.12 ಕೋಟಿ*
ಒಟ್ಟು 5209 ಬೆಂಚ್‌ಗಳಿಗೆ	*ರೂ.4.41 ಕೋಟಿ*
ಒಟ್ಟು 2030 ಕಸದ ಬುಟ್ಟಿಗೆ	*1,00,00,000*

ಹೌದು ಇದು ನಿಜ. ಇದು ಬಿಬಿಎಂಪಿ ಮಾಡಿರುವ ಖರ್ಚು. ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಸದಸ್ಯರು ತೋರಿರುವ ಅಂಶಗಳಿವೆ.

ಮಹಿಳಾ ಕೃಷಿ ಕೂಲಿಕಾರರು....

ಪುಟ 8 ರಿಂದ

ಮಹಿಳೆಯರಿಗೆ ಪುರುಷರೊಂದಿಗೆ ಸಮಾನ ಕೂಲಿ ನೀಡಲಾಗುತ್ತಿಲ್ಲ.

ಅಷ್ಟು ಮಾತ್ರವಲ್ಲ, ಮಹಿಳಾ ಕೃಷಿ ಕೂಲಿಕಾರರನ್ನು ಬೆದರಿಸಿ ಅವರಿಂದ ಹೆಚ್ಚು ಕೆಲಸ ಮಾಡಿಸಿಕೊಳ್ಳುವದು ರಾಜ್ಯದ ಹಲವಾರು ಕಡೆ ಕಂಡು ಬರುತ್ತದೆ. ಮುಕ್ಕಟೆಯಾಗಿ ಕೆಲಸ ಮಾಡಲು ಸಹ ಅವರನ್ನು ಒತ್ತಾಯಿಸಲಾಗುತ್ತದೆ. ಒಪ್ಪದಿದ್ದರೆ ಮಹಿಳೆಯರ ಮೇಲೆ ಹಲ್ಲೆ ಸಹ ಮಾಡಲಾಗುತ್ತದೆ. ಗಂಗಾವತಿ ತಾಲ್ಲೂಕಿನ ಹೇರೂರು ಗ್ರಾಮದ ಮಹಿಳಾ ಕೃಷಿ ಕೂಲಿಕಾರರು ಒಮ್ಮೆ ಭೂಮಾಲಕರ ಗದ್ದೆಗಳಲ್ಲಿ ಮುಕ್ಕಟ್ಟೆ ಭತ್ತನಾಟಿ ಮಾಡಲು ನಿರಾಕರಿಸಿದಾಗ, ಭೂಮಾಲಕರು ಮಹಿಳೆಯರನ್ನು ಅವಾಚ್ಯ ಶಬ್ದಗಳಿಂದ ಬೈದು, ದಲಿತ ಮಹಿಳೆಯರೊಬ್ಬಳ ಮೇಲೆ ಹಲ್ಲೆ ಮಾಡಿದ್ದರು. ಹಲ್ಲೆಗೊಳಗಾದ ಮಹಿಳೆಯೊಂದಿಗೆ ಕೇರಿಯ ಇತರ ಕೂಲಿಕಾರ ಮಹಿಳೆಯರು ಹೋಗಿ ಪೋಲಿಸರಿಗೆ ದೂರು ಸಲ್ಲಿಸಿದ್ದರು. ಇದರಿಂದ ಕುಪಿತರಾದ ಭೂಮಾಲಕರು ಅದೇ ರಾತ್ರಿ ದಲಿತರ ಮನೆಗಳಿಗೆ ನುಗ್ಗಿ, ಮಹಿಳಾ ಕೂಲಿಕಾರರನ್ನು ಹೊರಗೆಳೆದು ಥಳಿಸಿದ್ದರು. ಇದರ ವಿರುದ್ಧ ನಮ್ಮ ಕೃಷಿಕೂಲಿಕಾರರ ಸಂಘದ ನೇತ್ರತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗಿತ್ತು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಿಂದಾಗಿ ಕೂಲಿಯ ವಿಷಯದಲ್ಲಿ ಪುರುಷರ ಮತ್ತು ಮಹಿಳೆಯರ ನಡುವಿನ ಅಸಮಾನತೆಯನ್ನು ಹೋಗಲಾಡಿಸಲು ಹೊಸ ಅವಕಾಶವೊಂದು ತೆರೆದು ಕೊಂಡಿದ್ದರೂ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸದೆ ಇರುವುದರಿಂದ ಸಮಾನ ಕೂಲಿಯ ಸದುದ್ದೇಶ ಈಡೇರುತ್ತಿಲ್ಲ. ಮಹಿಳಾ ಕೃಷಿ ಕೂಲಿಕಾರರು ಕೆಲಸಕ್ಕೆ ಬರುವುದುನ್ನು ತಡೆಗಟ್ಟಲು ಅವರಿಗೆ ಉದ್ದೇಶ ಪೂರ್ವಕವಾಗಿ ಕಠಿಣವಾದ ಕೆಲಸವನ್ನು ವಹಿಸಿಕೊಡುವುದು, ಕಮ್ಮಿ ದರಗಳ ಕೆಲಸವನ್ನು ನೀಡುವುದು, ಮಾಡಿದ ಕೆಲಸವನ್ನು ಸರಿಯಾಗಿ ಅಳತೆ ಮಾಡದಿರುವುದು, ಸಕಾಲಕ್ಕೆ ಕೂಲಿ ಪಾವತಿ ಮಾಡದಿರುವುದು ಮೊದಲಾದ ರೀತಿಯಲ್ಲಿ ಕಿರುಕುಳ ಕೊಡುವುದು ವ್ಯಾಪಕವಾಗಿ ನಡೆಯುತ್ತದೆ.

ಕೆಲಸ ಮಾಡುವ ಸ್ಥಳದಲ್ಲಿ ಕಿರುಕುಳ :

ಮಹಿಳಾ ಕೃಷಿ ಕೂಲಿಕಾರರಿಗೆ ಕಮ್ಮಿ ಕೂಲಿ ನೀಡಿ ದುಡಿಸಲಾಗುತ್ತದೆ ಮಾತ್ರವಲ್ಲ ಅವರ ಅಸಹಾಯಕತೆಯನ್ನು ವ್ಯವಸ್ಥಿತವಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತದೆ. ಕಾಫಿ ತೋಟಗಳಲ್ಲಿ ಕೆಲಸಕ್ಕೆಂದು ಹೋಗುವ ಕೃಷಿ ಕೂಲಿಕಾರ ಯುವತಿಯರು ಹಾಗೂ ಮಹಿಳೆಯರು ತೋಟದ ಮಾಲೀಕರಿಂದ, ಅವರ ಕುಟುಂಬದ ಸದಸ್ಯರಿಂದ ಅಥವಾ ಅವರ ಸಿಬ್ಬಂದಿಯವರಿಂದ ಲೈಂಗಿಕ ಕಿರುಕುಳ ಹಾಗೂ ಅತ್ಯಾಚಾರಗಳಿಗೆ ಒಳಗಾಗುತ್ತಿರುತ್ತಾರೆ. ಬಹಳಷ್ಟು ಜಮೀನನ್ನು ಹೊಂದಿರುವ ದೊಡ್ಡ ದೊಡ್ಡ ಜಮೀನ್ದಾರ ಹೊಲಗದ್ದೆಗಳಲ್ಲಿ, ಅವರ ಮನೆಗಳಲ್ಲಿ ಕೆಲಸ ಮಾಡುವ ಮಹಿಳಾ ಕೃಷಿ ಕೂಲಿಕಾರರ ಮೇಲೆ ಇದೇ ರೀತಿ ಅತ್ಯಾಚಾರಗಳು ನಡೆಯುತ್ತವೆ. ಪ್ರತಿಭಟಿಸಿದರೆ ಕೊಲೆಗಳೂ ಆಗುತ್ತವೆ.

ಹಿಂದೊಮ್ಮೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಒಬ್ಬ ಮಹಿಳಾ ಕೃಷಿ ಕೂಲಿಕಾರಳ ಮೇಲೆ ಭೂಮಾಲೀಕನ ಮಗ ಮತ್ತು ಇತರರು ಸೇರಿ ಸಾಮೂಹಿಕವಾಗಿ ಅತ್ಯಾಚಾರ ಮಾಡಲು ಪ್ರಯತ್ನ ಪಟ್ಟಾಗ ಅದನ್ನು ವಿರೋಧಿಸಿದ ಅವಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ಘಟನೆ ನಡೆದಿತ್ತು. ಈ ಘಟನೆಯಲ್ಲಿ ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಒತ್ತಾಯಿಸಿ ಕೃಷಿಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಜಂಟಿಯಾಗಿ ಹೋರಾಟ ಮಾಡಿದ್ದನ್ನು ಹಾಗೂ ಗಾಯಗೊಂಡ ಮಹಿಳೆಗೆ ಚಿಕಿತ್ಸೆ ಹಾಗೂ ಪರಿಹಾರ ಒದಗಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಇಂತಹ ಘಟನೆಗಳು ಹೆಚ್ಚುತ್ತಲೆ ಇದ್ದರೂ ಬೆಳಕಿಗೆ ಬರುವುದಿಲ್ಲ.

ಹೊಟ್ಟೆ ಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವ ಮಹಿಳಾ ಕೃಷಿ ಕೂಲಿಕಾರರ ಪಾಡು ಶೋಚನೀಯವಾಗಿದೆ. ನಗರಗಳಿಗೆ ಬರುವ ಕೂಲಿಕಾರರು ಸಹಜವಾಗಿ ಕೊಳಚಿ ಪ್ರದೇಶಗಳಲ್ಲಿ ವಾಸ ಮಾಡಲು ತೊಡಗುತ್ತಾರೆ. ಅಲ್ಲಿ ಮಹಿಳೆಯರು ವಿವಿಧ ರೀತಿಯ ದೈಹಿಕ ಹಾಗೂ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿರುತ್ತಾರೆ.

ಆರೋಗ್ಯದ ಮೇಲೆ ದುಷ್ಪರಿಣಾಮಗಳು

ಮಹಿಳಾ ಕೃಷಿ ಕೂಲಿಕಾರರು ಮಾಡಬೇಕಾದ ಕೆಲಸಗಳಿಂದಾಗಿ ಅವರ ಆರೋಗ್ಯದ ಮೇಲೆ ಅನೇಕ ರೀತಿಯ ದುಷ್ಪರಿಣಾಮಗಳು ಆಗುತ್ತಿರುತ್ತವೆ. ಉದಾಹರಣೆಗೆ, ನಾಟಿ ಮಾಡುವ ಹಾಗೂ ಕಳೆ ಕೀಳುವ ಸಂದರ್ಭದಲ್ಲಿ ಅವರು ತಮ್ಮ ಕೈಗಳಿಂದ ಇಡೀ ದಿನ ಕೆಸರಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದು ಅವರ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ. ಅದೇ ರೀತಿಯಲ್ಲಿ ವಿಷಕಾರಿ ಕ್ರಿಮಿನಾಶಕಗಳನ್ನು ಸಿಂಪಡಿಸುವಾಗ, ಕ್ರಿಮಿನಾಶಕಗಳನ್ನು ಸಿಂಪಡಿಸಿದ ಪೈರನ್ನು ಕೊಯ್ಯುವಾಗ ಅದರ ಪರಿಣಾಮ ಅವರ ದೇಹದ ಮೇಲೆ ಆಗುತ್ತಿರುತ್ತದೆ. ಇಡೀ ದಿನ ಬಿಸಿಲಲ್ಲಿ ಕೆಲಸ ಮಾಡುವುದು ಸಹ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಅವರು ಗರ್ಭಿಣಿಯರಾಗಿದ್ದರೆ ಇನ್ನೂ ಹೆಚ್ಚು ಅಪಾಯಕ್ಕೆ ಒಳಗಾಗುತ್ತಾರೆ. ಅಕಾಲಿಕ ಹೆರಿಗೆ ಅಥವಾ ಮೃತ ಶಿಶು ಜನನಕ್ಕೆ ಕಾರಣವಾಗುತ್ತದೆ.

ಮಹಿಳೆಯಾಗಿ ಅನುಭವಿಸುವ ಸಮಸ್ಯೆಗಳು :

ಮಹಿಳಾ ಕೃಷಿ ಕೂಲಿಕಾರರು ಸಾಮಾನ್ಯ ಮಹಿಳೆಯರು ಅನುಭವಿಸುವ ಇತರ ಎಲ್ಲಾ ಸಮಸ್ಯೆಗಳನ್ನು ಅನುಭವಿಸುತ್ತಿರುತ್ತಾರೆ.

ವರದಕ್ಷಿಣೆಯ ಪಿಡುಗು :

ಈ ಪಿಡುಗು ಇಂದು ಸಾಮಾನ್ಯ ಬಡ, ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಕುಟುಂಬಗಳಿಗೂ ವಿಸ್ತರಿಸಿದೆ. ಕೇಳಿದಷ್ಟು ವರದಕ್ಷಿಣೆ ತಂದು ಕೊಡದಿದ್ದಾಗ, ಮತ್ತೆ ಮತ್ತೆ ಹಣ ತರಲು ಒತ್ತಡ ಹೇರಲಾದಾಗ ಅಸಹಾಯಕ ಮಹಿಳೆ ಹಿಂಸೆಯನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಅಥವಾ ವರದಕ್ಷಿಣೆ ಹಣಕ್ಕಾಗಿ ಒತ್ತಾಯಿಸುವ ಅವಳ ಗಂಡನ ಕಡೆಯವರಿಂದ ಕೊಲೆಯಾಗುತ್ತಾಳೆ.

ಕೌಟುಂಬಿಕ ಹಿಂಸೆ :

ಇತರ ಮಹಿಳೆಯರಂತೆ ಕೃಷಿ ಕೂಲಿಕಾರ ಮಹಿಳೆಯೂ ಕೌಟುಂಬಿಕ ಹಿಂಸೆಗೆ ಗುರಿಯಾಗುತ್ತಿರುತ್ತಾಳೆ. ಕುಡುಕ ಗಂಡ ದುಡಿದು ಸಂಪಾದನೆ ಮಾಡಿದ್ದನ್ನೆಲ್ಲಾ ಕುಡಿದು ಹಾಳು ಮಾಡುವುದು, ಮನೆಗೆ ಬಂದು ಹೆಂಡತಿ ಕೂಲಿ ಮಾಡಿ ಸಂಪಾದಿಸಿದ ಹಣಕ್ಕಾಗಿ ಜಗಳ ಮಾಡುವುದು, ಹೆಂಡತಿಯನ್ನು ಹೊಡೆಯುವುದು, ಮನೆಯಲ್ಲಿ ಅತ್ತೆ ಮಾವಂದಿರ ಕಿರುಕುಳ ಇತ್ಯಾದಿ ಹಿಂಸೆಯನ್ನು ಕೃಷಿ ಕೂಲಿಕಾರ ಮಹಿಳೆ ಅನುಭವಿಸುತ್ತಿರುತ್ತಾಳೆ.

ಅಪೌಷ್ಟಿಕತೆ :

ಭಾರತದಲ್ಲಿ ಬಹು ಸಂಖ್ಯಾತ ಮಹಿಳೆಯರು ರಕ್ತ ಹೀನತೆ, ಅಪೌಷ್ಟಿಕತೆಯಂತಹ ದೈಹಿಕ ಕೊರತೆಗಳಿಂದ ನರಳುತ್ತಿರುತ್ತಾರೆ. ಹೆಣ್ಣು ಮಗು ಚಿಕ್ಕ ವಯಸ್ಸಿನಿಂದಲೇ ಈ ತಾರತಮ್ಯವನ್ನು ಅನುಭವಿಸುತ್ತಿರುತ್ತಾಳೆ. ಗಂಡು ಮಗುವಿಗಾದರೆ ಉತ್ತಮವಾದ ಆರೈಕೆ ದೊರೆಯುತ್ತದೆ. ಹೆಣ್ಣು ಮಗು ಒಳ್ಳೆಯ ಆಹಾರ, ವಿದ್ಯಾಭ್ಯಾಸ ಮತ್ತಿತ್ತರ ಹಕ್ಕುಗಳಿಂದ ವಂಚಿತಳಾಗಿರುತ್ತಾಳೆ. ಹೀಗೆ ತಾರತಮ್ಯಕ್ಕೆ ಒಳಗಾಗಿ ಬೆಳೆಯುವ ಹೆಣ್ಣು ಮಗು, ಮುಂದೆ ಮದುವೆಯಾಗಿ, ಗರ್ಭಧರಿಸುವ ಕಾಲಘಟ್ಟದಲ್ಲಿಯೂ, ಚಿಕ್ಕ ಮಗುವಿನ ತಾಯಿ ಆಗಿರುವಾಗಲೂ ಪೌಷ್ಟಿಕ ಆಹಾರದ ಕೊರತೆಯಿಂದ ನರಳುತ್ತಾಳೆ ಮಾತ್ರವಲ್ಲ ಆರೋಗ್ಯವಂತ ಮಗುವಿಗೆ ಜನ್ಮ ಕೊಡಲಾಗದ ಸ್ಥಿತಿಗೆ ತಲುಪುತ್ತಾಳೆ. ಕೃಷಿ ಕೂಲಿಕಾರ ಕುಟುಂಬಗಳಲ್ಲಿ ಇಂತಹ ಪರಿಸ್ಥಿತಿ ಸರ್ವಸಾಮಾನ್ಯವಾಗಿರುತ್ತದೆ.

ಸಾರ್ವಜನಿಕ ಶೌಚಾಲಯಗಳ ಕೊರತೆ :

ಕರ್ನಾಟಕದಲ್ಲಿ ಮಹಿಳೆಯರಿಗೆ ಶೌಚಾಲಯದ ಸೌಲಭ್ಯ ಇನ್ನೂ ಮರೀಚಿಕೆಯಾಗಿದೆ. ಶೌಚಕ್ಕಾಗಿ ಕತ್ತಲಾಗುವುದನ್ನೇ ಕಾಯುವ ಸ್ಥಿತಿ, ಮುಳ್ಳುಕಂಟಿ-ಪೊದೆಗಳನ್ನು ಹುಡುಕುವ ಆತಂಕ, ರಸ್ತೆ ಬದಿಗಳಲ್ಲಿ ಕುಳಿತುಕೊಂಡವರು ವಾಹನಗಳ ಬೆಳಕು ಬಿದ್ದಾಗ ಎದ್ದು ನಿಲ್ಲಬೇಕಾದ ಅವಮಾನ ಇವೆಲ್ಲವನ್ನು ನಮ್ಮ ಗ್ರಾಮೀಣ ಮಹಿಳೆಯರು ನಿತವೂ ಅನುಭವಿಸುತ್ತಿರುತ್ತಾರೆ. ಕರ್ನಾಟಕ ಸರ್ಕಾರವು 'ನಿರ್ಮಲ ಯೋಜನೆ'ಯ ಹೆಸರಿನಲ್ಲಿ ಶೌಚಾಲಯಗಳನ್ನು ಕಲ್ಪಿಸುವ ಪ್ರಚಾರವೇನೋ ಮಾಡಿತು. ಆದರೆ ಮನೆಗೊಂದು ಶೌಚಾಲಯವಾಗಲೀ ಅಥವಾ ಸಾರ್ವಜನಿಕ ಶೌಚಾಲಯವಾಗಲಿ ನಿರ್ಮಾಣವಾಗಲೇ ಇಲ್ಲ. ಒಂದು ಸಣ್ಣ ಮನೆ ಅಥವಾ ಗುಡಿಸಲು ಹೊಂದಿರುವ ಬಡವರಿಗೆ ಶೌಚಾಲಯ ಕಟ್ಟಿಸಲು ಜಾಗ ಎಲ್ಲಿದೆ ? ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಲು ಸರ್ಕಾರ ಹಣವನ್ನು ಒದಗಿಸುವ ಬದಲು ಸಾರ್ವಜನಿಕರು ವಂತಿಗಿ ನೀಡಬೇಕು ಎಂದು ಷರತ್ತು ಹೇರುವ ಮೂಲಕ ಶೌಚಾಲಯಗಳ ನಿರ್ಮಾಣಕ್ಕೆ ಅಡೆ ತಡೆ ನಿರ್ಮಿಸಿದೆ.

ಮಹಿಳಾ ನೇತೃತ್ವದ ಕುಟುಂಬಗಳು :

ಬೇರೆ ಬೇರೆ ಕಾರಣಗಳಿಗಾಗಿ ಮಹಿಳೆಯರೇ ಕುಟುಂಬದ ನಿರ್ವಹಣೆಯ ಜವಾಬ್ದಾರಿಯನ್ನು ಹೊರಬೇಕಾಗುವ ಸಂದರ್ಭಗಳು ಇರುತ್ತವೆ. ಗಂಡ ಸತ್ತು ಮಹಿಳೆ ವಿಧವೆಯಾದಾಗ, ಅಥವ ಗಂಡನಿಂದ ತ್ಯಜಿಸಲ್ಪಟ್ಟು ಒಂಟಿಯಾದಾಗ ಮಕ್ಕಳನ್ನು ಬೆಳೆಸುವ, ಮನೆಯನ್ನು ನಡೆಸುವ ಜವಾಬ್ದಾರಿ ಮಹಿಳೆಯ ಮೇಲೆ ಬೀಳುತ್ತದೆ. ಪುರುಷರು ಕೆಲಸವನ್ನು ಹುಡುಕಿಕೊಂಡು, ದೂರದ ಪ್ರದೇಶಗಳಿಗೆ ವಲಸೆ ಹೋದಾಗಲೂ ಮಹಿಳೆಯೇ ಕುಟುಂಬ ನಿರ್ವಹಣೆಯ ಹೊರೆಯನ್ನು ಹೊರಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಇಂತಹ ಅಸಂಖ್ಯಾತ ಉದಾಹರಣೆಗಳಿವೆ. ನಮ್ಮ ಸಮಾಜ, ನಮ್ಮ ಸರ್ಕಾರಗಳು ಇವರ ನೆರವಿಗೆ ಬರುತ್ತಿರುವುದಿಲ್ಲ.

ದೇವದಾಸಿ ಮಹಿಳೆಯರು :

ಮಹಿಳಾ ಕೃಷಿ ಕೂಲಿಕಾರರಲ್ಲಿ ದಲಿತ ಮಹಿಳೆಯರೇ ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಜಾತಿ ಅಸ್ಪೃಶ್ಯತೆ, ಜಾತಿ ದಮನ,ಜಾತಿ ತಾರತಮ್ಯದ ಹಿಂಸೆ, ಅವಮಾನವನ್ನು ಅವರು ಅನುಭವಿಸುತ್ತಿರುತ್ತಾರೆ.

ದಲಿತ ಸಮುದಾಯಗಳಲ್ಲಿ ಪ್ರಚಲಿತವಾಗಿರುವ ದೇವದಾಸಿ ಪದ್ಧತಿಯಿಂದ ಅತಿ ಹೆಚ್ಚು ಶೋಷಣೆಯನ್ನು ಅನುಭವಿಸುತ್ತಿರುತ್ತಾರೆ. ಮೇಲ್ಜಾತಿಯರು ತಮ್ಮ ಅಕ್ರಮ ಸುಖಭೋಗಕ್ಕಾಗಿ ಹುಟ್ಟು ಹಾಕಿದ ಈ ಅನಿಷ್ಟ ಪದ್ಧತಿಯನ್ನು ಮೂಢನಂಬಿಕೆಗಳಲ್ಲಿ ಮುಳುಗಿರುವ ದಲಿತ ಸಮುದಾಯ ಅನುಸರಿಸುತ್ತಲೇ ಬಂದಿದೆ. ಇದರ ವಿರುದ್ಧ ವ್ಯಾಪಕ ಜನ ಜಾಗೃತಿಯನ್ನು ಉಂಟು ಮಾಡಬೇಕಾಗಿದೆ. ಮಾತ್ರವಲ್ಲ ಈಗಾಗಲೇ ಈ ಪದ್ಧತಿಯೊಳಗೆ ಸಿಕ್ಕಿಹಾಕಿಕೊಂಡಿರುವ ಎಲ್ಲಾ ಮಹಿಳೆಯರನ್ನು ಗುರುತಿಸಿ ಅವರ ಪುನರ್ವಸತಿಗಾಗಿ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ವಿವಾಹದ ಸಮಸ್ಯೆಗಳು :

ಮಹಿಳೆಯರಾಗಿ ಅನುಭವಿಸುವ ಸಮಸ್ಯೆಗಳಲ್ಲಿ ವಿವಾಹದ ಸಮಸ್ಯೆಯೂ ಒಂದು. ಚಿಕ್ಕ ವಯಸ್ಸಿನಲ್ಲಿ ವಿಧವೆಯಾದ ಮಹಿಳೆ ಪುನರ್ ವಿವಾಹವಾಗುವುದು ಅನಿವಾರ್ಯವಾಗುತ್ತದೆ. ಆದರೆ ಸಮಾಜದಲ್ಲಿ ಅದಕ್ಕೆ ಪೂರಕವಾದ ವಾತಾವರಣ ಇರುವುದಿಲ್ಲ. ಅದೇ ರೀತಿಯಲ್ಲಿ ಬೇರೆ ಬೇರೆ ಜಾತಿಗಳಿಗೆ /ಕೋಮುಗಳಿಗೆ ಸೇರಿದ ಯುವಕ ಯುವತಿಯರು ಪರಸ್ಪರ ಇಷ್ಟಪಟ್ಟು ವಿವಾಹವಾಗಲು ಬಯಸುತ್ತಿರುತ್ತಾರೆ. ಆದರೆ ಪಾಲಕರ ಅನುಮತಿ ದೊರೆಯದೆ ಕಂಗೆಡುತ್ತಾರೆ. ಅನೇಕ ಸಲ ಯಾರಿಂದಲೂ ಬೆಂಬಲ ದೊರಕದೆ ಆತ್ಮಹತ್ಯೆಗೆ ಶರಣಾಗುತ್ತಾರೆ. ಜಾತಿರಹಿತ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸುವ ನಮ್ಮ ಕೃಷಿ ಕೂಲಿಕಾರರ ಸಂಘಟನೆ ಈ ಸಮಾಜಿಕ ಪ್ರಶ್ನೆಯನ್ನು ಎತ್ತಿಕೊಳ್ಳಬೇಕಾಗುತ್ತದೆ.

ಮೂಢನಂಬಿಕೆಗಳಿಂದ ಮುಕ್ತಿ :

ಮಹಿಳೆಯರು, ವಿಶೇಷವಾಗಿ ಗ್ರಾಮೀಣ ಮಹಿಳೆಯರು ಅನೇಕ ವಿಧದ ಮೂಢನಂಬಿಕೆಗಳಿಗೆ ಒಳಗಾಗಿ ತಮ್ಮ ಬದುಕಿನ ಬದಲಾವಣೆಯ ದಾರಿಯನ್ನು ಕಾಣದವರಾಗಿದ್ದಾರೆ. ಶಿಕ್ಷಣದಿಂದ ಬಹುತೇಕವಾಗಿ ವಂಚಿತರಾಗಿರುವ ಇವರು ಸಹಜವಾಗಿ ಮೂಢನಂಬಿಕೆಗಳಿಗೆ ಶರಣಾಗುತ್ತಾರೆ. ಧಾರ್ಮಿಕ ಆಚರಣೆಗಳಿಗೆ ಅನಗತ್ಯ ಆದ್ಯತೆ ನೀಡುತ್ತಾರೆ. ಹಣೆಬರಹ ಎಂದು ಕೊರಗುತ್ತಾರೆ. ಮಾಟ, ಮಂತ್ರಗಳಲ್ಲಿ ವಿಶ್ವಾಸವಿಟ್ಟು ಮೋಸ ಹೋಗುತ್ತಾರೆ. ಗ್ರಾಮೀಣ ಮಹಿಳೆಯರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ನಮ್ಮ ಕೂಲಿಕಾರರ ಸಂಘ ವಿಶೇಷ ಗಮನ ನೀಡಬೇಕಾಗಿದೆ.

ಕೊನೆಯದಾಗಿ : ಗ್ರಾಮೀಣ ಮಹಿಳೆಯರು ಕೃಷಿ ಕೂಲಿಕಾರ ಮಹಿಳೆಯರಾಗಿ ಹಾಗೂ ಮಹಿಳಾ ಕೃಷಿಕೂಲಿಕಾರರು ಸಾಮಾನ್ಯ ಮಹಿಳೆಯರಾಗಿ ಅನುಭವಿಸುತ್ತಿರುವ ಸಮಸ್ಯೆಗಳು ಇನ್ನೂ ಸಾಕಷ್ಟು ಇರಬಹುದು. ಮಹಿಳಾ ಕೃಷಿ ಕೂಲಿಕಾರರನ್ನು ಆಗಾಗ ಪ್ರತ್ಯೇಕವಾಗಿ ಸಭೆ ಸೇರಿಸಿ, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಅವುಗಳ ಪರಿಹಾರಕ್ಕಾಗಿ ವಿಶೇಷ ಹೋರಾಟಗಳನ್ನು ನಡೆಸಬೇಕೆಂದು ನಮ್ಮ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಒತ್ತಾಯಿಸುತ್ತಾ ಬಂದಿದೆ. ಅದಕ್ಕಾಗಿ ಉಪಸಮಿತಿಯೊಂದನ್ನು ರಚಿಸಿದೆ. (ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯು ನಡೆಸುತ್ತಿರುವ ಮಹಿಳಾ ಕೃಷಿ ಕೂಲಿಕಾರರ ಪ್ರಥಮ ಸಮಾವೇಶದಲ್ಲಿ ಮಂಡಿಸಲಾಗುತ್ತಿರುವ ಬರಹ)

○

ಸರಕಾರಿ ಸೀರೆ

ಇದೀಗ ಹಂಚಿದ್ದು ಸರಕಾರಿ ಸೀರೆ
ಚುನಾವಣೆ ಕಾಲಕ್ಕೆ ಬರಲಿಹವು ಬೇರೆ
ಇವು ಎಲ್ಲ ನಮ್ಮದೇ ತೆರಿಗೆ ಹಣದ್ದಣ್ಣ
ಆ ಮೇಲೆ ಬೊಕ್ಕಸಕೆ ಹಾಕಿದ್ದು ಕನ್ನ

-ವಿಡಂಬಾರಿ

ತೃಣಮೂಲ ಮಾವೋವಾದಿ ಕೂಟದ ಹೂರಣ ಬಯಲು

— ಹಿಂದುತ್ವ ಭಯೋತ್ಪಾದನೆ ಆತಂಕಕಾರಿ —

2011 ಜನವರಿ 15-16 ರಂದು ಕೋಲ್ಕತ್ತಾದಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಹೇಳಿಕೆ

2ಜಿ ತರಂಗಾಂತರ ಹಗರಣದ ಸಂಬಂಧ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಲು ನಿರಾಕರಿಸಿರುವ ಯುಪಿಎ ಸರ್ಕಾರದ ನಿಲುವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಕಟುವಾಗಿ ಖಂಡಿಸಿದೆ. ಹಗರಣದ ಬಗೆಗಿನ ಸಿ.ಎ.ಜಿ. ವರದಿಯ ಹಿನ್ನೆಲೆಯಲ್ಲಿ ಸಂಪರ್ಕ ಖಾತೆ ಸಚಿವ ಎ.ರಾಜಾ ರಾಜೀನಾಮೆ ಸಲ್ಲಿಸಿದರಾದರೂ ತನಿಖೆಗೆ ಅಡ್ಡಿಯಾಗುವಂತೆ ಹಾಗೂ ಅಪರಾಧಿಗಳನ್ನು ಶಿಕ್ಷಿಸಲು ಅಡ್ಡಿಯಾಗುವ ರೀತಿಯ ಧೋರಣೆಯನ್ನು ಯುಪಿಎ ಸರ್ಕಾರ ಮುಂದುವರೆಸಿದೆ. ಸಂಪರ್ಕ ಖಾತೆಯ ಹೆಚ್ಚುವರಿ ಹೊಣೆ ಹೊತ್ತಿರುವ ಸಚಿವ ಕಪಿಲ್‌ಸಿಬಲ್ ಸಿಎಜಿ ವರದಿಯ ಅಂಶಗಳನ್ನು ನಿರಾಕರಿಸುವಂತೆ ಧಾಷ್ಟ್ಯವಾದ ಹೇಳಿಕೆ ನೀಡಿರುವುದು ಹಾಗೂ ಬೊಕ್ಕಸಕ್ಕೆ ಆದಾಯ ನಷ್ಟವಾಗಿಲ್ಲ ಎಂದು ಹೇಳಿರುವುದು, ಇಡೀ ಹಗರಣವನ್ನು ಮುಚ್ಚಿಹಾಕಲು ಯುಪಿಎ ಸರ್ಕಾರ ಪ್ರಯತ್ನಿಸುತ್ತಿರುವುದರ ಸಂಕೇತವಾಗಿದೆ. ಸಂಸತ್ತಿನ ಮುಂಬರುವ ಬಜೆಟ್ ಅಧಿವೇಶನದಲ್ಲಿ ಈ ಸಂಬಂಧ ಒಂದು ಸಾಮಾನ್ಯ ಧೋರಣೆಯನ್ನು ರೂಪಿಸುವ ಸಲುವಾಗಿ ಸಿಪಿಐ(ಎಂ) ಎನ್‌ಡಿಎಯೇತರ ಪ್ರತಿಪಕ್ಷಗಳ ಜೊತೆ ಸಮಾಲೋಚನೆ ನಡೆಸಲಿದೆ.

2 ಜಿ ತರಂಗಾಂತರ ಪ್ರಕರಣವೇ ಇರಬಹುದು, ಕಾಮನ್‌ವೆಲ್ತ್ ಕ್ರೀಡಾಕೂಟದ ಭ್ರಷ್ಟಾಚಾರ ಅಥವಾ ಆದರ್ಶ ಹೌಸಿಂಗ್ ಸೊಸೈಟಿ ಕರ್ಮಕಾಂಡವೇ ಇರಬಹುದು ಮತ್ತು ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ನಡೆಸುತ್ತಿರುವ ನಗ್ನ ಭ್ರಷ್ಟಾಚಾರ ಹಾಗೂ ಭೂ ಹಗರಣಗಳೇ ಇರಬಹುದು. ಒಟ್ಟಾರೆಯಾಗಿ ಇತ್ತೀಚಿನ ವರ್ಷಗಳ ಸರಣಿ ಸರಣಿ ಭ್ರಷ್ಟ ಕಾಂಡಗಳು,ಯಾವ ರೀತಿಯಲ್ಲಿ ಭ್ರಷ್ಟಾಚಾರ ಮತ್ತು ಚುನಾವಣಾ ಬಂಡವಾಳವು ನವ ಉದಾರವಾದಿ ಆಡಳಿತ ಯುಗದ ಸಾಂಸ್ಥಿಕ ಸ್ವರೂಪವನ್ನು ಪಡೆದಿದೆ ಎಂಬುದಕ್ಕೆ ಸ್ಪಷ್ಟ ಸೂಚನೆಗಳಾಗಿವೆ. ಬೋಫೋರ್ಸ್ ಪ್ರಕರಣದಲ್ಲಿ ಆದಾಯ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ ಇತ್ತೀಚಿಗೆ ನೀಡಿದ ತೀರ್ಪಿನ ವಿಚಾರವಾಗಿ ಮುಂದಿನ ಕ್ರಮ ಕೈಗೊಳ್ಳಲು ಕಾಂಗ್ರೆಸ್ ನೇತೃತ್ವದ ಸರ್ಕಾರ ವಿಫಲವಾಗಿದ್ದು ಅದರ ಬಣ್ಣಬಯಲಾಗಿದೆ. ಉನ್ನತ ಮಟ್ಟದ ಭ್ರಷ್ಟಾಚಾರದ ಮೂಲವಾದ ದೊಡ್ಡ ಕಂಪನಿಗಳು ಆಳುವ ರಾಜಕಾರಣಿಗಳು ಆಡಳಿತಶಾಹಿಯ ಮೈತ್ರಿಕೂಟದ ಬಣ್ಣ ಬಯಲು ಮಾಡುವುದನ್ನು ಸಿಪಿಐ(ಎಂ) ಮುಂದುವರಿಸುತ್ತದೆ.

ಅಸಹನೀಯ ಬೆಲೆಯೇರಿಕೆ

ಆಹಾರ ಧಾನ್ಯಗಳ ಬೆಲೆಗಳು ಜನರ ಸಹನೆಯ ಮಿತಿಯನ್ನು ಮೀರಿ ಏರಿಕೆಯಾಗಿವೆ. ಈರುಳ್ಳಿ ಮತ್ತಿತರ ತರಕಾರಿ ಬೆಲೆಗಳ ಏರಿಕೆ ಮೀರಿದೆಯೆಂದರೆ ಜನರು ಅವುಗಳನ್ನು ಕೊಳ್ಳುವುದೇ ದುಸ್ತರವಾಗಿದೆ. 2010ರ ಡಿಸೆಂಬರ್ ಕೊನೆವಾರದಲ್ಲಿ ಆಹಾರ ವಸ್ತುಗಳ ಹಣದುಬ್ಬರ 18.32 ಶೇಕಡ ಆಗಿತ್ತು.

ಬಹುತೇಕವಾಗಿ ಈ ಬೆಲೆಯೇರಿಕೆಗೆ ಯುಪಿಎ ಸರ್ಕಾರವೇ ಹೊಣೆಯಾಗಿದೆ. ಉದಾಹರಣೆಗೆ, ಅಗತ್ಯ ಸಾಮಗ್ರಿಗಳ ಆಮದು ಮತ್ತು ರಫ್ತು ನೀತಿಗಳಲ್ಲಿನ ವಂಚನೆಯೇ ಬೆಲೆಯೇರಿಕೆಯ ಬೆಂಕಿಗೆ ಪೆಟ್ರೋಲ್ ಸುರಿದಿದೆ. ಮೊದಲು ನಾವು ಸಕ್ಕರೆ ಹಾಗೂ ಗೋಧಿ ವಿಚಾರದಲ್ಲಿ ಈ ಅಂಶವನ್ನು ಗಮನಿಸಿದ್ದೆವು. ಈಗ ಇಂಥ ವಂಚನೆಗಳೇ ಈರುಳ್ಳಿ ಬೆಲೆ ಗಗನಕ್ಕೇರಲು ಕಾರಣವಾಗಿದೆ. ಪ್ರತಿಕೂಲ ಹವೆ ಈರುಳ್ಳಿ ಬೆಳೆ ಉತ್ಪಾದನೆ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಗೊತ್ತಿದ್ದರೂ ಈರುಳ್ಳಿ ಕನಿಷ್ಠ ರಫ್ತು ಬೆಲೆಯ ಜೂಜುಕೋರತನವನ್ನು ಕ್ವಿಂಟಾಲ್ ಒಂದಕ್ಕೆ ಸುಮಾರು 200 ಡಾಲರ್‌ಗಳಷ್ಟನ್ನು ಕಡಿಮೆ ಮಾಡುವ ಮೂಲಕ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡಿದ್ದೇಕೆ?

ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಈರುಳ್ಳಿ ಕೊರತೆ ಹೆಚ್ಚಿತು; ದೊಡ್ಡ ವಾಣಿಜ್ಯ ಕಂಪನಿಗಳಿಗೆ ಭರ್ಜರಿ ಲಾಭ ತಂದು ಕೊಟ್ಟಿತು. ನಂತರ, ಸರ್ಕಾರ ಆಮದು ಸುಂಕವನ್ನು ಶೂನ್ಯಕ್ಕೆ ಇಳಿಸಿತು. ಮತ್ತು ಸರಕಾರಿ ಸಂಸ್ಥೆಗಳು ಈರುಳ್ಳಿ ಆಮದು ಮಾಡುವುದನ್ನು ನಿರ್ಬಂಧಿಸಿತು. ಇದರಿಂದಲೂ ಭಾರಿ ಲಾಭ ಗಿಟ್ಟಿಸಿದ್ದು ಖಾಸಗಿ ವರ್ತಕರೇ.

ಪೆಟ್ರೋಲ್ ಬೆಲೆಯೇರಿಕೆ

ಅನಿಯಂತ್ರಿತ ವ್ಯವಸ್ಥೆ ಮಾಡಿ, ಕೇವಲ ಒಂದು ತಿಂಗಳ ಅಂತರದಲ್ಲಿ ಪೆಟ್ರೋಲ್, ಬೆಲೆಯನ್ನು ಎರಡು ಬಾರಿ ಏರಿಸಲಾಗಿದೆ. ಮೊದಲು ಲೀಟರ್‌ಗೆ 2.96 ರೂ. ಹಾಗೂ ಎರಡನೇ ಸಲ 2.52 ರೂಪಾಯಿಗಳನ್ನು ಏರಿಸಲಾಗಿದೆ.

ಆಹಾರ ವಸ್ತುಗಳ ಕ್ಷೇತ್ರದಲ್ಲಿ ಮುಂಗಡ ವ್ಯಾಪಾರ (ಫಾರ್ವರ್ಡ್ ಟ್ರೇಡಿಂಗ್) [illegible] ಜೂಜುಕೋರತನವನ್ನು ಮಟ್ಟಹಾಕಲು ಸರ್ಕಾರ ಹಿಂದೇಟು ಹಾಕುತ್ತಿದೆ. [illegible] ನಲುಗುತ್ತಿದ್ದರೂ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು (ರೇಷನ್ ವ್ಯವಸ್ಥೆ) ಸಾರ್ವತ್ರಿಕಗೊಳಿಸಲು ಹಾಗೂ ಅವಶ್ಯ ಸಾಮಗ್ರಿಗಳನ್ನು ಕೈಗೆಟುಕುವ ದರದಲ್ಲಿ ಪಡಿತರದ ಮೂಲಕ ವಿತರಿಸಲು ಸರ್ಕಾರದ ಮುಂದೆ ಬರುತ್ತಿಲ್ಲ.

ಬೆಲೆಯೇರಿಕೆ ವಿರುದ್ಧ ಒಂದು ವ್ಯಾಪಕ ಹೋರಾಟವನ್ನು ನಡೆಸಲು ಪಿ.ಬಿ.ನಿರ್ಧರಿಸಿದೆ. ಬೆಲೆಯೇರಿಕೆ ವಿರುದ್ಧ ಒಂದು ರಾಷ್ಟ್ರವ್ಯಾಪಿ ಆಂದೋಲನಕ್ಕೆ ಕರೆ ಕೊಡುವ ಸಲುವಾಗಿ ಎಡ ಮತ್ತು ಜಾತ್ಯಾತೀತ ಪ್ರತಿಪಕ್ಷಗಳೊಂದಿಗೆ ಸಿಪಿಐ(ಎಂ) ಸಮಾಲೋಚನೆ ನಡೆಸಲಿದೆ.

ಮಾವೋವಾದಿ ಹಿಂಸೆ ನಿಲ್ಲಲಿ

ಪಶ್ಚಿಮಬಂಗಾಳದಲ್ಲಿನ ಪರಿಸ್ಥಿತಿಯನ್ನು ಸಿಪಿಐ(ಎಂ) ಚರ್ಚಿಸಿತು. ಟಿಎಂಸಿ ಕೂಟವು ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಹಿಂಸಾಚಾರವನ್ನು ಅವ್ಯಾಹತವಾಗಿ ಮುಂದುವರಿಸಿರುವುದಕ್ಕೆ ಅದು ತೀವ್ರ ವಿಷಾದ ವ್ಯಕ್ತಪಡಿಸಿತು. 2009 ರಲ್ಲಿ ನಡೆದ ಲೋಕಸಭೆ ಚುನಾವಣೆಯ ಕಾಲದಿಂದ ಹಿಡಿದು ಈ ವರ್ಷದ ಜನವರಿ ಒಂಭತ್ತನೆಯವರೆಗೆ 365 ಮಂದಿ ಸಿಪಿಐ(ಎಂ) ಹಾಗೂ ಎಡರಂಗ ಬೆಂಬಲಿಗರು ಟಿಎಂಸಿ ಮಾವೋವಾದಿ ಕೂಟದಿಂದ ಹತರಾಗಿದ್ದಾರೆ. ಹತರಲ್ಲಿ ಜಂಗಲ್ ಮಹಲ್ ಪ್ರದೇಶದ 125 ಮಂದಿ ಆದಿವಾಸಿಗಳು ಹಾಗೂ 23 ಶಿಕ್ಷಕರು ಇದ್ದಾರೆ.

ತನ್ನ ನಿಯಂತ್ರಣದಲ್ಲಿರುವ ಜಿಲ್ಲಾ ಪರಿಷತ್ ಮತ್ತು ಇತರ ಪಂಚಾಯತ್ ಸಂಸ್ಥೆಗಳನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹೇಗೆ ನಡೆಸುತ್ತಿದೆ ಎಂಬುದನ್ನು ಜನರು ಅನುಭವಿಸಿದ್ದಾರೆ. ವ್ಯಾಪಕ ಭ್ರಷ್ಟಾಚಾರ ಮತ್ತು ಹಣದ ದುರ್ಬಳಕೆ ಹಾಗೂ ಅಭಿವೃದ್ಧಿ ಕಾರ್ಯಗಳು ನಡೆಯದೇ ಇರುವುದರಿಂದ ಜನರು ಭ್ರಮನಿರಸನಗೊಂಡಿದ್ದಾರೆ; ಅತೃಪ್ತಿಯಿಂದ ಕುದಿಯುತ್ತಿದ್ದಾರೆ. ಈ ಎಲ್ಲಾ ವೈಫಲ್ಯಗಳನ್ನು ಮುಚ್ಚಿಹಾಕುವ ಉದ್ದೇಶದಿಂದ ಟಿಎಂಸಿ ವಿಚ್ಛಿದ್ರಕಾರಿ ಧೋರಣೆಯನ್ನು ತಳೆದಿದೆ. ತಾನು ಹಾಗೂ ಮಾವೋವಾದಿಗಳು ನಡೆಸುವ ರಾಜಕೀಯ ಹಿಂಸಾಕೃತ್ಯಗಳನ್ನು ಎಡರಂಗ ಸರ್ಕಾರವನ್ನು ಖಂಡಿಸಲು ಬಳಸಿಕೊಳ್ಳಲು ಯತ್ನಿಸುತ್ತಿದೆ.

ಭೂ ಸುಧಾರಣೆಗಳಲ್ಲಿ ಇರಬಹುದು, ಪಂಚಾಯತ್ ರಾಜ್ ವ್ಯವಸ್ಥೆ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯೇ ಇರಬಹುದು, ಅಥವಾ ರಾಜ್ಯದಲ್ಲಿ ಒಂದು ಸುಸ್ಥಿರ ಜಾತ್ಯಾತೀತ ವಾತಾವರಣ ಸೃಷ್ಟಿಯೇ ಇರಬಹುದು ಎಡರಂಗದ ಆಡಳಿತದಡಿಯಲ್ಲಿ ಜನತೆ ಗಳಿಸಿರುವ ಈ ಎಲ್ಲಾ ಸಾಧನೆಗಳನ್ನು ತಿರುವು-ಮುರುವು ಮಾಡಲು ಟಿಎಂಸಿ ಮಾವೋವಾದಿ ಕೂಟ ಯತ್ನಿಸುತ್ತಿದೆ.

ಮಾವೋವಾದಿಗಳು ಹಾಗೂ ತೃಣಮೂಲ ಕಾಂಗ್ರೆಸ್ ಪರಸ್ಪರ ಕೈ ಜೋಡಿಸುವುದಕ್ಕೆ ಹಲವಾರು ಮೂಲಗಳಿಂದ ಸಾಕ್ಷ್ಯಗಳು ಲಭ್ಯವಾಗಿವೆ. ಟಿಎಂಸಿ ಸಂಸತ್ ಸದಸ್ಯರೊಬ್ಬರು [illegible] ಈ ಬಗ್ಗೆ ಸಾಕಷ್ಟು ಉದಾಹರಣೆ [illegible]

ಉಗ್ರ ಹಿಂದುತ್ವ ಭಯೋತ್ಪಾದನೆ

ಬಾಂಬ್ ಸ್ಫೋಟಗಳ ಮೂಲಕ ಭಯೋತ್ಪಾದನೆ ಹಿಂಸಾಚಾರದಲ್ಲಿ ತೊಡಗಿಸಿಕೊಂಡ ಜಾಲದ ಪ್ರಮುಖ ಸಂಘಟಕರಲ್ಲಿ ಒಬ್ಬರಾದ ಅಸೀಮಾನಂದ ಹೊರಗೆಡಹಿದ ಅಂಶಗಳ ಬಗ್ಗೆ ಪಾಲಿಟ್‌ಬ್ಯೂರೋ ಗಂಭೀರ ಕಳವಳ ವ್ಯಕ್ತಪಡಿಸಿದೆ. ಮ್ಯಾಜಿಸ್ಟ್ರೇಟ್‌ನ ಮುಂದೆ ಅಸೀಮಾನಂದ ನೀಡಿರುವ ತಪ್ಪೊಪ್ಪಿಗೆ ಹೇಳಿಕೆಗಳು ಮಲೆಗಾಂವ್, ಅಜ್ಮೀರ್ ಮತ್ತು ಮೆಕ್ಕಾ ಮಸೀದಿ ಸ್ಫೋಟ ಪ್ರಕರಣಗಳಲ್ಲಿ ಹಿಂದುತ್ವ ಉಗ್ರಗಾಮಿ ಗುಂಪುಗಳ ಪಾತ್ರವಿರುವುದನ್ನು ದೃಢಪಡಿಸಿವೆ.

ಇಡೀ ಜನ ಸಂಜೋತಾ ಎಕ್ಸ್‌ಪ್ರೆಸ್ ರೈಲು ಸ್ಫೋಟದಲ್ಲಿ ಭಾಗಿಯಾಗಿದ್ದು, ಕೂಡ ಮಹತ್ವದ ಸಂಗತಿಯಾಗಿದೆ. ಆ ಸ್ಫೋಟದಲ್ಲಿ ಮುಖ್ಯವಾಗಿ ಪಾಕಿಸ್ತಾನಿ ಪ್ರಜೆಗಳನ್ನು ಒಳಗೊಂಡಂತೆ 68 ಮಂದಿ ಮೃತಪಟ್ಟಿದ್ದರು. ಮೊದಮೊದಲು 'ಹಿಂದೂ ಧಾರ್ಮಿಕ ವ್ಯಕ್ತಿಗಳನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲಾಗುತ್ತಿದೆ ಎಂದು ಪ್ರತಿಭಟನೆಗಿಳಿದ ಆರ್.ಎಸ್.ಎಸ್. ಇಂಥ ಶಕ್ತಿಗಳು ಸಂಘದಲ್ಲಿ ಇದ್ದದ್ದು ನಿಜ ಎಂದು ಈಗ ಒಪ್ಪಿಕೊಂಡಿದೆ. ಸಂಘವನ್ನು ತೊರೆಯುವಂತೆ ಕೆಲವು ಉಗ್ರಗಾಮಿ ಶಕ್ತಿಗಳಿಗೆ ಸೂಚಿಸಲಾಗಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಇತ್ತೀಚೆಗೆ ಒಂದು ಭಾಷಣದಲ್ಲಿ ತಿಳಿಸಿದ್ದಾರೆ.

ಭಯೋತ್ಪಾದನೆಯೊಂದಿಗೆ ಇಂಥ ಗುಂಪುಗಳು ಹೊಂದಿರಬಹುದಾದ ಸಂಪರ್ಕವನ್ನು ಹೊರಗೆಳೆಯಲು ಒಂದು ಸಮಗ್ರ ತನಿಖೆಯನ್ನು ನಡೆಸಬೇಕು ಹಾಗೂ ಇಂಥ ಜಾಲಗಳನ್ನು ನಿಷ್ಕ್ರಿಯಗೊಳಿಸಲು ಅಗತ್ಯ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಪಿ.ಬಿ. ಒತ್ತಾಯಿಸಿದೆ.



ಸಿಕ್ಕಿಬಿದ್ದಿರುವ ಭಯೋತ್ಪಾದಕ ಸ್ವಾಮಿ ಅಸೀಮಾನಂದ

ಡೀ ನೋಟಿಫಿಕೇಷನ್ ದಂಧೆಯ ಒಳಗುಟ್ಟು



ಬಿಜೆಪಿ ದರ್ಬಾರ್

ಕರ್ನಾಟಕದ ರಾಜ್ಯ ಸರ್ಕಾರ ಭೂಗಳ್ಳರ ಸರ್ಕಾರ, ಇದು ಭೂದಂಧೆಕೋರರ ಸರ್ಕಾರ ಅಂತ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಭಾರಿ ವಾದ ವಿವಾದಕ್ಕೆ ಕಾರಣವಾಗಿರುವ ಡೀ ನೋಟಿಫಿಕೇಷನ್ ವ್ಯವಹಾರಗಳ ಬಗ್ಗೆ ಕೇಳಿದರೆ ನಮ್ಮ ಮುಖ್ಯಮಂತ್ರಿಗಳು, ಸಚಿವ ಮಹಾಶಯರು ಏನನ್ನುತ್ತಾರೆ. ಸಾರ್ವಜನಿಕ ಹಿತಾಸಕ್ತಿಯು ಕಾರಣಕ್ಕಾಗಿ ಅಗತ್ಯ ಬಂದಾಗ ಸರ್ಕಾರ ಬಿಡಿಎ ಅಥವಾ ಕೆಐಎಡಿಬಿನಂತಹ ಸಂಸ್ಥೆಗಳು ರೈತರಿಂದ ವಶಕ್ಕೆ ತೆಗೆದುಕೊಂಡಿದ್ದ ಅಥವಾ ವಶಕ್ಕೆ ತೆಗೆದುಕೊಳ್ಳಲು ಉದ್ದೇಶಿಸಿದ್ದ ಭೂಮಿಯನ್ನು ಅಧಿಸೂಚನೆಯಿಂದ ಕೈ ಬಿಡಲಾಗಿದೆ ಅಂದರೆ ಡೀ ನೋಟಿಫೈ ಮಾಡಲಾಗಿದೆ ಎನ್ನುತ್ತಾರೆ.

ಆದರೆ ಈ ಡೀ ನೋಟಿಫಿಕೇಷನ್‌ಗಳ ಹಿಂದಿನ ಮರ್ಮ ಏನೆಂದು ಬಲ್ಲವರೇ ಬಲ್ಲರು. ರಾಜ್ಯ ಹೈಕೋರ್ಟಿನಲ್ಲಿ ದಾಖಲಾಗಿರುವ ಈ ಪ್ರಕರಣದ ವಿವರಗಳನ್ನು ನೋಡಿದರೆ ಈ ಮರ್ಮಗಳ ಲಕ್ಷಣ ಕೊಂಚವಾದರೂ ಅರ್ಥವಾಗಬಹುದು. ಅದಕ್ಕಾಗಿ ಈ ಕುರಿತ ಒಂದಷ್ಟು ಮಾಹಿತಿ.

ಬಾಲಚಂದ್ರ ಜಾರಕಿ ಹೋಳಿ ಎಂಬುವವರು ರಾಜ್ಯ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದರು. ಬೆಂಗಳೂರು ನಗರದ ಕೆ.ಆರ್.ಪುರ ಹೋಬಳಿಯ ಥಣಿಸಂದ್ರದಲ್ಲಿ ಅರ್ಕಾವತಿ ಬಡಾವಣೆಗೆಂದು ವಶಪಡಿಸಿಕೊಳ್ಳಲಾಗಿದ್ದ ಜಮೀನಿನಲ್ಲಿ ಜಾರಕಿ ಹೋಳಿಯವರ ಶಿಫಾರಸ್ಸಿನ ಮೇರೆಗೆ ನಾಲ್ಕು ಎಕರೆ ಜಮೀನನ್ನು ಎ.ವಿ.ರವಿ ಪ್ರಕಾಶ್, ಹಾಗೂ ಎ.ವಿ.ಶ್ರೀರಾಮ್ ಎಂಬುವರಿಗೆ ಡೀ ನೋಟಿಫೈ ಮಾಡಿ ಕೊಡಲಾಗಿತ್ತಂತೆ. ಡೀ ನೋಟಿಫೈ ಮಾಡಿದ್ದು ಸೆಪ್ಟೆಂಬರ್ 25 ನೇ ತಾರೀಖು 2010 ರಂದು. ಮತ್ತು ಡೀ ನೋಟಿಫೈ ಮಾಡಲು ಕಾರಣ ತಮ್ಮ ತಂದೆಯವರ ಹೆಸರಿನಲ್ಲಿ ಅಲ್ಲಿ ಆಸ್ಪತ್ರೆಯೊಂದನ್ನು ನಿರ್ಮಿಸಲು ಜಮೀನು ಬೇಕಿದೆ ಎಂಬ ಅರ್ಜಿದಾರರ ಮನವಿ.

ಇದರ ಬೆನ್ನ ಹಿಂದೆಯೇ ರಾಜ್ಯದ ರಾಜಕೀಯದಲ್ಲಿ ಹಲವು ಬದಲಾವಣೆಗಳಾಗಿ ಹೋದವು. ಈ ಬದಲಾವಣೆಯಲ್ಲಿ ಮೊದಲು ಸರ್ಕಾರದೊಂದಿಗೆ ಇದ್ದ ಜಾರಕಿ ಹೋಳಿ ಅಕ್ಟೋಬರ್ 10ರಂದು ಸರ್ಕಾರಕ್ಕೆ ತಮ್ಮ ಬೆಂಬಲ ವಾಪಸ್ ತೆಗೆದುಕೊಂಡರು.

ಆಹಾ ! ಈಗ ನೋಡಿ. ಆಸ್ಪತ್ರೆಯ ಉದ್ದೇಶಕ್ಕೆಂದು ಜಮೀನು ಡೀ ನೋಟಿಫೈ ಮಾಡಿಕೊಟ್ಟ ಆದೇಶವನ್ನೇ ಅಕ್ಟೋಬರ್ 19 ರಂದು ರದ್ದು ಮಾಡಿಬಿಟ್ಟರು ನಮ್ಮ ಯಡಿಯೂರಪ್ಪವರು. ಸರ್ಕಾರಕ್ಕೆ ಬೆಂಬಲ ಕೊಟ್ಟರೆ ನಿಮಗೆ ಭೂಮಿ ಡೀ ನೋಟಿಫೈ ಮಾಡಿಕೊಡಲಾಗುತ್ತದೆ. ಬೆಂಬಲ ವಾಪಸ್ ತೆಗೆದಿರೋ ಕೊಟ್ಟಿರುವ ಭೂಮಿಯನ್ನು ವಾಪಸ್ ಕಿತ್ತುಕೊಳ್ಳಲಾಗುತ್ತದೆ. ಇದಕ್ಕೆಲ್ಲಾ ಯಾರೂ ಬೇಸರ ಮಾಡಿಕೊಳ್ಳಬಾರದು. ಇವೆಲ್ಲವನ್ನೂ "ಸಾರ್ವಜನಿಕ ಹಿತಾಸಕ್ತಿ"ಯ ಉದ್ದೇಶದಿಂದಲೇ ಮಾಡಲಾಗಿದೆ.

ಆದರೆ ಪಾಪ ನಮ್ಮ ಕೋರ್ಟಿಗೆ ಈ ಡೀ ನೋಟಿಫಿಕೇಷನ್‌ಗಳ ಹಿಂದಿನ "ಸಾರ್ವಜನಿಕ ಹಿತಾಸಕ್ತಿ"ಯೇ ಅರ್ಥವಾಗಿಲ್ಲ. ಹಾಗಾಗಿ ಅದು ಯಡಿಯೂರಪ್ಪನವರ ಡೀ ನೋಟಿಫಿಕೇಷನ್ ರದ್ದು ಆದೇಶಕ್ಕೆ ತಡೆ ನೀಡಿದೆ.

ಮತ್ತೊಂದು .....ಇನ್ನೊಂದು......

ಬೆಂಗಳೂರಿನ ನಾಗಶೆಟ್ಟಿಹಳ್ಳಿಯ ಬಳಿ ಯಡಿಯೂರಪ್ಪನವರು 15 ಸಾವಿರ ಚದರ ಅಡಿ



ವಿಸ್ತೀರ್ಣ ಜಮಿನನ್ನು 'ಯಾರೋ ಒಬ್ಬ' ರಿಗೆ ಡೀ ನೋಟಿಫೈ ಮಾಡಿ ಕೊಟ್ಟು ಬಿಟ್ಟರು. ಅದೇ ಸಾರ್ವಜನಿಕ ಹಿತಾಸಕ್ತಿಗಾಗಿಯೇ. ಬೇರೇನಕ್ಕೂ ಅಲ್ಲ. ಯಾವುದೋ ಕೆಲಸವಿಲ್ಲದ 'ನಾಗರೀಕ ಸಂಘ' ಎಂಬುದೊಂದು ಕೋರ್ಟಿನಲ್ಲಿ ಮೊಕದ್ದಮೆ ಹೂಡಿತು. ಯಾರೋ ಬಿಲ್ಡರ್ ಒಬ್ಬರಿಗೆ ಅನುಕೂಲ ಮಾಡಿಕೊಡಲು ಯಡಿಯೂರಪ್ಪ ಈ ಡಿ ನೋಟಿಫೈ ಮಾಡಿದ್ದಾರೆ ಅಂತ.

ಛೇ ಛೇ ಎಲ್ಲಾದರೂ ಉಂಟೆ ! ಯಡಿಯೂರಪ್ಪ ತಮ್ಮ ಜೀವನದಲ್ಲಿ ಇಂಥದ್ದನ್ನು ಎಂದಾದರೂ ಮಾಡಿದ್ದಾರೆಯೇ ? ಇಲ್ಲ ಸಲ್ಲದ ಆಪಾದನೆ. ನೋಡುತ್ತಿರಿ ಯಡಿಯೂರಪ್ಪ ದಾಖಲೆ ಆಧಾರಗಳ ಸಮೇತ ತಮ್ಮ ಕೆಲಸವನ್ನು ಕೋರ್ಟಿನಲ್ಲಿ ಹೇಗೆ ಸಮಥಿಸಿಕೊಳ್ಳುತ್ತಾರೆ ಅಂತ.

ಛೇ ಛೇ ಯಡಿಯೂರಪ್ಪ ಪ್ರಕರಣ ಕೋರ್ಟಿಗೆ ಬಂದ ಮೇಲೆ ಯಾಕೋ ನೊಂದುಕೊಂಡು ಡೀ ನೋಟಿಫಿಕೇಶನ್ ಆದೇಶವನ್ನೇ ರದ್ದು ಮಾಡಿ ಬಿಟ್ಟರಲ್ಲ !? ಆಹಾ ಏನು ಸಜ್ಜನಿಕೆ !! ಏನು ನೈತಿಕ ಸ್ಥೈರ್ಯ ಅಂತೀರಿ ನಮ್ಮ ಯಡಿಯೂರಪ್ಪನವರದು. ಇಂಥಾ ಮುಖ್ಯಮಂತ್ರಿ ದೇಶದಲ್ಲಿ ಮತ್ತೊಬ್ಬರು ಕಂಡರೆ ದಯವಿಟ್ಟು ನಮಗೆ ತಿಳಿಸಿ, ಪ್ಲೀಸ್.

ಅಂದ ಹಾಗೆ ಸೆಲ್ವಕುಮಾರ್ ಅಂತ ಇಲ್ಲಿ 'ಯಾರೋ ಒಬ್ಬ' ಬಿಲ್ಡರ್ ಇದ್ದಾರೆ. ಯಡಿಯೂರಪ್ಪ ಎಂತಹ ಸಜ್ಜನರು ಅಂತಾ ನೀವು ಅವರನ್ನು ಭೇಟಿ ಮಾಡಿ ಕೂಡ ತಿಳಕೋ ಬಹುದು, ಗುಟ್ಟಾಗಿ.

ಅನೈತಿಕ ಎಂದರು ಗಡ್ಕರಿ

ಯಡಿಯೂರಪ್ಪನವರ ವಿರುದ್ದದ ಭೂ ಹಂಚಿಕೆ ಅಕ್ರಮಗಳು ಹಾಗೂ ಡೀ ನೋಟಿಫಿಕೇಷನ್ ಹಗರಣಗಳ ಕುರಿತು ರಾಜ್ಯಪಾಲರು ಮಾಹಿತಿ ಕೇಳಿದರೆ ಅಂತದ್ದೇನು ನಡೆದಿಲ್ಲ ಅಂತ ನಮ್ಮ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದರು. ಈಗ ರಾಜ್ಯಪಾಲರು ಮುಖ್ಯಮಂತ್ರಿಗಳ ವಿರುದ್ಧ ಮೊಕದ್ದಮೆ ಹೂಡಲು ವಕೀಲರಿಗೆ ಅನುಮತಿ ನೀಡಿದ್ದಾರೆ.

ಇದನ್ನು ಖಂಡಿಸಿ ರಾಜ್ಯ ಬಿಜೆಪಿಯು ಜನವರಿ 22 ರಂದು ದೀಢೀರ್ ಬಂದ್‌ಗೆ ಕರೆ ನೀಡಿ ಸರ್ಕಾರಿ ಯಂತ್ರ ಹಾಗೂ ಅಧಿಕಾರ ಬಲವನ್ನು ಹಾಗೂ ಹಿಂಸೆಯನ್ನು ಬಳಸಿ ಬಂದ್ ಯಶಸ್ವಿಗೊಳಿದೆ. ಇದೆಲ್ಲದರ ನಡುವೆ ಒಂದು ಸುದ್ದಿ ಬಂದಿದೆ.

ಪುಟ 15 ಕ್ಕೆ

ಸ್ವಯಂ ಪ್ರೇರಿತ ಬಂದ್‌ನ ಸೊಗಸೇ ಸೊಗಸು

ವಿಶೇಷ ವಾರ್ತೆಗಳು

ಬಸ್ಸಿಗೆ ಯಾರೂ ಬೆಂಕಿ ಹಚ್ಚಲಿಲ್ಲ......
ಯಾರೂ ಮೊಬೈಲ್ ಶಾಪ್‌ನಿಂದ ಮೊಬೈಲ್ ಹೊತ್ತೊಯ್ಯಲಿಲ್ಲ.

ನಮಸ್ಕಾರ, ಮುಖ್ಯಾಂಶಗಳು.....

ನಮ್ಮ ಕರ್ನಾಟಕವು ಭಾರಿ ಪ್ರಗತಿಯ ಹಾದಿಯಲ್ಲಿದೆ. ರಾಜ್ಯ ಸುಭಿಕ್ಷವಾಗಿದೆ. ಜನ ಮತ್ತು ರೈತರು ನೆಮ್ಮದಿಯಾಗಿದ್ದಾರೆ. ರಾಜ್ಯದಲ್ಲಿ ಯಾವುದೇ ಅಶಾಂತಿಯಿಲ್ಲ. ಅತೃಪ್ತಿ ಇಲ್ಲ. ರಾಜ್ಯದಲ್ಲಿ ಯಾವುದೇ ಭೂ ಹಗರಣ ನಡೆದಿಲ್ಲ. ಕರ್ನಾಟಕ ರಾಜ್ಯವನ್ನು ಭ್ರಷ್ಟಾಚಾರ ಮುಕ್ತಗೊಳಿಸುವ ತನ್ನ ಶಪಥವನ್ನು ಬಿಜೆಪಿ ಸರ್ಕಾರವು ಈಗಾಗಲೇ ಈಡೇರಿಸಿದೆ. ಕರ್ನಾಟಕದಿಂದ ಹೊರಹೋಗುವ ಗಾಳಿಯನ್ನು ಸಹ ಸೋಸಿ ಹೊರಬಿಡಲಾಗುತ್ತಿದೆ. ಹೀಗಾಗಿ ಯಾವುದೇ ಬಗೆಯ ಧೂಳು ಕೂಡ ಕರ್ನಾಟಕದಿಂದ ಹೊರಗೆ ಹೋಗುತ್ತಿಲ್ಲ. ಆದ್ದರಿಂದ ಗಣಿ ಅದಿರಿನ ಸಮಾಚಾರವಾಗಿ ಏನನ್ನೂ ಹೇಳಬೇಕಾದ ಅಗತ್ಯವಿಲ್ಲ.

ದುರದೃಷ್ಟವಶಾತ್ ಕರ್ನಾಟಕ ರಾಜ್ಯದ ರಾಜ್ಯಪಾಲರು· ರಾಜ್ಯದ ಪ್ರಗತಿಗೆ ತಡೆಗೋಡೆ ಯಾಗಿದ್ದಾರೆ.ವಿರೋಧ ಪಕ್ಷಗಳು ಜನರ ನೆಮ್ಮದಿ ಹಾಳು ಮಾಡುತ್ತಿವೆ. ರಾಜ್ಯದ ಮುಖ್ಯಮಂತ್ರಿಗಳ ವಿರುದ್ದ ಇಲ್ಲದ ಹಗರಣಗಳ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿದ್ದರಿಂದ ಜನರ ನೆಮ್ಮದಿ ಸಂಪೂರ್ಣವಾಗಿ ಹಾಳಾಗಿದೆ. ಜನರು ಆಕ್ರೋಶಿತರಾಗಿದ್ದಾರೆ. ಅವರು ಈ ಬೆಳವಣಿಗೆಯನ್ನು ಸಹಿಸಿಕೊಳ್ಳಲಾಗದೇ ಜನವರಿ 22 ರಂದು ರಾಜ್ಯವ್ಯಾಪಿಯಾಗಿ ಸ್ವಯಂಪ್ರೇರಿತ ಬಂದ್ ಆಚರಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರು ಬಂದ್ ಆಚರಿಸುತ್ತಾ ತಮ್ಮ ತಮ್ಮ ಮನೆಗಳ ಬಾಗಿಲುಗಳನ್ನು ಸಹ ಬಂದ್ ಮಾಡಿಕೊಡು ಮನೆಯೊಳಗೇ ಉಳಿದು ಬಿಟ್ಟಿದ್ದರಿಂದ ಯಾರೂ ಕೂಡ ಬಾವುಟ ಹಿಡಿದು ಬೀದಿಗೆ ಬಂದಿಲ್ಲ. ಯಾರೂ ಕೂಡ ರಸ್ತೆ ಮಧ್ಯೆ ಟೈರುಗಳಿಗೆ ಬೆಂಕಿ ಹಚ್ಚಿಲ್ಲ. ಎಲ್ಲಿಯೂ ಕೂಡ ಬಸ್ಸುಗಳಿಗೆ ಕಲ್ಲು ಹೊಡೆದಿಲ್ಲ, ಪೆಟ್ರೋಲ್ ಸುರಿದು ಕಡ್ಡಿ ಗೀರಿಲ್ಲ. ದೊಣ್ಣೆಯನ್ನು ಎತ್ತಿ ಯಾವ ವಾಹನದ ಗಾಜನ್ನು ಪುಡಿ ಮಾಡಿಲ್ಲ. ಅಂಗಡಿ ಮುಂಗಟ್ಟುಗಳ ಬಳಿಯಲ್ಲಂತೂ ಬಿಜೆಪಿ ಕಾರ್ಯಕರ್ತರು ಸುಳಿದೇ ಇಲ್ಲ. ಯಾವ ಅಂಗಡಿ ಬಾಗಿಲುಗಳನ್ನು ಯಾವ ಬಿಜೆಪಿ ಕಾರ್ಯಕರ್ತರು ಎಳೆದಿಲ್ಲ. ಯಾವುದೇ ಮೊಬೈಲ್ ಶೋ ರೂಮುಗಳಿಗೆ ನುಗ್ಗಿ ಮೊಬೈಲ್ ಗಳಿದ್ದ ಬಾಕ್ಸು ಬಾಕ್ಸುಗಳನ್ನು ಹೊತ್ತೊಯ್ದಿಲ್ಲ. ಯಾರ ಮೇಲೂ ಹಲ್ಲೆ ಮಾಡಿಲ್ಲ.

ಸರ್ಕಾರ ಶಾಲಾ ಕಾಲೇಜುಗಳಿಗೆ ರಜೆ ನೀಡಲಿಲ್ಲ. ಯಾವ ಸಾರಿಗೆ ಬಸ್ಸುಗಳ ಸೇವೆಯನ್ನು ಸರ್ಕಾರ ಸ್ಥಗಿತಗೊಳಿಸಲಿಲ್ಲ.... ಸ್ವಯಂ ಪ್ರೇರಿತ ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಮುಖ್ಯಮುಂತ್ರಿಗಳ ಮೇಲೆ ಮೊಕದ್ದಮೆ ಹೂಡಲು ರಾಜ್ಯಪಾಲರು ನೀಡಿರುವ ಅನುಮತಿಗೆ ಜನರ ಒಪ್ಪಿಗೆ ಇಲ್ಲ. ಸ್ವಯಂಪ್ರೇರಿತ ಬಂದ್ ಮೂಲಕ ಜನತೆ ಅನುಮತಿ ರದ್ದು ಮಾಡಲು ಆಗ್ರಹಿಸಿದ್ದಾರೆ. ...

ಇಲ್ಲಿಗೆ ವಾರ್ತೆಗಳು ಮುಕ್ತಾಯವಾಯಿತು. ನಮಸ್ಕಾರಗಳು,

ವಾರ್ತೆಗಳನ್ನು ಓದಿದವರು-
ಕೆ.ಎಸ್. ಈಶ್ವರಪ್ಪ. ರಾಜ್ಯ ಅಧ್ಯಕ್ಷರು,


ಬಿ.ಜೆ.ಪಿ. ವಾರ್ತೆಗಳನ್ನು ಸಂಗ್ರಹಿಸಿ ಸಿದ್ದಪಡಿಸಿದವರು-
ಡಾ|| ಬಿ.ಎಸ್. ಯಡಿಯೂರಪ್ಪ.
ಕರ್ನಾಟಕದ ಹಾಲಿ ಮುಖ್ಯಮಂತ್ರಿಗಳು ಹಾಗೂ ಮುಂದಿನ 20 ವರ್ಷಗಳಿಗೂ ಮುಖ್ಯಮಂತ್ರಿಗಳು.

ತಾಂತ್ರಿಕ ಸಹಾಯ- ಸಹಕಾರ
ಅಶೋಕ್, ಸನ್ಮಾನ್ಯ ಗೃಹ ಸಚಿವರು.

'ಕಪ್ಪು ಹಣವೆಂದರೆ ತೆರಿಗೆ ಕಳ್ಳತನವಷ್ಟೇ ಅಲ್ಲ' ಸರಕಾರಕ್ಕೆ ಸುಪ್ರೀಂಕೋರ್ಟ್ ತರಾಟೆ

"ಕಪ್ಪು ಹಣವನ್ನು ವಿದೇಶಿ ಬ್ಯಾಂಕುಗಳಲ್ಲಿ ಇಟ್ಟಿರುವವರ ಹೆಸರುಗಳನ್ನು ತಿಳಿಸಲು ನಿಮಗೆ ಹಿಂಜರಿಕೆಯೇಕೆ? ಹೆಸರು ತಿಳಿಸಲು ಇರುವ ಕಷ್ಟವಾದರೂ ಏನು? ಯಾವ ವಿಶೇಷಾಧಿಕಾರದ ಪ್ರಕಾರ ಹೆಸರು ಹೇಳಲು ನಿರಾಕರಿಸುತ್ತಿದ್ದೀರಿ?" ಇದು ದೇಶದ ಸರ್ವೋಚ್ಚ ನ್ಯಾಯಾಲಯ ಯುಪಿಎ-2 ಸರಕಾರವನ್ನು ಕೇಳಿರುವ ಪ್ರಶ್ನೆ. 'ವಿದೇಶಗಳಲ್ಲಿರುವ ಕಪ್ಪು ಹಣ ಸುಮಾರು ಒಂದು ಟ್ರಿಲಿಯ ಡಾಲರ್ ಎಂಬುದು ಒಂದು ಅಂದಾಜು.

ಇದರಲ್ಲಿ ಸೊನ್ನೆಗಳೆಷ್ಟು? ಇದು ಅಗಾಧ ಮೊತ್ತ, ದೇಶದ ಕೊಳ್ಳೆಯೇ, ಅಪಾರ ಪರಿಣಾಮಗಳನ್ನು ಬೀರುವಂತದ್ದು. ಆದರೂ ಇದು ವಿದೇಶಿ ಬ್ಯಾಂಕುಗಳಲ್ಲಿ ಇಟ್ಟಿರುವ ಹಣದ ಮೇಲೆ ವಂಚಿಸಿದ ತೆರಿಗೆ ವಸೂಲಿಯ ಪ್ರಯತ್ನ ಎಂಬುದು ಸರಕಾರದ ಸಾರಾಂಶ. ಇದೇ ಆತಂಕದ ಸಂಗತಿ'-ಇದು ಸುಪ್ರಿಂ ಕೋರ್ಟ್ ಕೂಡ ವ್ಯಕ್ತಪಡಿಸಿರುವ ಕಾಳಜಿ.



ಕೃಪೆ : ದಿ ಹಿಂದೂ

ಈ ರೀತಿ ನೇರ ಮುಜುಗರ ಅನುಭವಿಸಿದರೂ ಯುಪಿಎ-2 ಸರಕಾರ ವಿದೇಶಗಳಲ್ಲಿ ಪೇರಿಸಿಟ್ಟಿರುವ ಕಪ್ಪು ಹಣವನ್ನು ಹೊರಗೆಳೆಯುವಲ್ಲಿ ತನ್ನ ಅಲಕ್ಷ್ಯವನ್ನು ಸಮರ್ಥಿಸಿಕೊಳ್ಳುತ್ತಲೇ ಇದೆ. ಈ ಕಪ್ಪು ಹಣವನ್ನು ಭಾರತಕ್ಕೆ ವಾಪಾಸು ತರಲು ಸರಕಾರ ಪ್ರಯತ್ನ ನಡೆಸಿದೆ, ಇದನ್ನು ಕೇವಲ ತೆರಿಗೆ ವಂಚನೆಯಾಗಿ ಕಾಣುವುದಿಲ್ಲ ಎಂದು ಸುಪ್ರಿಂ ಕೋರ್ಟಿಗೆ ಸರಕಾರದ ಪರವಾಗಿ ಹೇಳಲಾಯಿತು. ನಂತರ ಪ್ರಧಾನಿಗಳ ಆಶಯದಂತೆ ಹಣಕಾಸು ಮಂತ್ರಿಗಳು ಗಣತಂತ್ರ ದಿನದ ಮುನ್ನಾದಿನ ಒಂದು ವಿಶೇಷ ಪತ್ರಿಕಾ ಸಮ್ಮೇಳನವನ್ನೇ ನಡೆಸಿದರು. ಆದರೆ ಅದು ಸುಪ್ರಿಂ ಕೋರ್ಟ್ ಹೇಳಿದಂತೆ ಕಪ್ಪು ಹಣ ಪೇರಿಸಿಟ್ಟವರ ಹೆಸರು ತಿಳಿಸಲೂ ಅಲ್ಲ, ದೇಶದಿಂದ ಕೊಳ್ಳೆ ಹೊಡೆದಿರುವ ಸಂಪತ್ತನ್ನು ಮುಟ್ಟುಗೋಲು ಹಾಕುವ ಕ್ರಮಗಳ ಬಗ್ಗೆ ತಿಳಿಸಲು ಕೂಡ ಅಲ್ಲ. ಹಾಗೇನೂ ಮಾಡಲು ಸಾಧ್ಯವಿಲ್ಲ ಎಂದು ಮತ್ತೊಮ್ಮೆ ಹೇಳಲು ಅಷ್ಟೇ. ಒಂದು ಕಾನೂನು ಚೌಕಟ್ಟು ಇಲ್ಲದೆ ವಿದೇಶಿ ಸರಕಾರಗಳಿಂದ ದೊರೆತ ಮಾಹಿತಿಯನ್ನು ಹೊರಗೆಡಹಲು ಸಾಧ್ಯವಿಲ್ಲ, ಹಾಗೆ ಹೊರಗೆಡಹಿದರೆ, ಇನ್ನು ಮುಂದೆ ಯಾವ ಸಾರ್ವಭೌಮ ಸರಕಾರವೂ ಇಂತಹ ಮಾಹಿತಿ ಕೊಡಲಾರದು ಎಂಬುದು ಸರಕಾರದ ಹಿಂಜರಿಕೆಗೆ ಅವರು ಕೊಟ್ಟ ಸಮರ್ಥನೆ.

'ಆದರೆ ಒಂದು ದಾರಿಯಿದೆ. ಆದಾಯ ತೆರಿಗೆ ಅಧಿಕಾರಿಗಳು ತೆರಿಗೆ ವಂಚಕರ ವಿರುದ್ಧ ಕೇಸು ನಡೆಸಲು ಸಾಧ್ಯವಾದಾಗ ನಿಮಗೆ ಹೆಸರುಗಳು ತಿಳಿಯುತ್ತವೆ. ನನಗೂ ಈ ಹೆಸರುಗಳನ್ನು ತಿಳಿಯುವ ಆಶಯ ಅಥವ ಅಧಿಕಾರ ಇಲ್ಲ. ಆದಾಯ ತೆರಿಗೆ ಅಧಿಕಾರಿಗಳಿಗೆ ಶಾಸನಬದ್ಧ ಅಧಿಕಾರವಿದ್ದು ಅದರ ಪ್ರಕಾರ ಅವರು ತಮ್ಮ ಕರ್ತವ್ಯ ನೇರವೇರಿಸುತ್ತಾರೆ. ಅವರು ಈ ಇಲಾಖೆಯ ಆಡಳಿತ ವ್ಯಾಪ್ತಿಯ ಹೊರಗಿದ್ದಾರೆ.' ಅಂದರೆ ಸರಕಾರ ಈಗಲೂ, ಸುಪ್ರಿಂ ಕೋರ್ಟ್ ಟಿಪ್ಪಣಿ ಮಾಡಿದಂತೆ, ಇದನ್ನು ಕೇವಲ ತೆರಿಗೆ ವಂಚನೆಯ ಪ್ರಶ್ನೆಯಾಗಿಯಷ್ಟೇ ನೋಡುತ್ತಿದೆಯೇ?

ಯುಪಿಎ-2 ಸರಕಾರ ಕಪ್ಪು ಹಣವನ್ನು 'ಎದುರಿಸಲು' ಐದಂಶಗಳ 'ಕಾರ್ಯತಂತ್ರ'ವನ್ನು ರೂಪಿಸಿದೆಯಂತೆ. ಆದರೆ ಇವು ಯಾವವೂ ಸುಪ್ರಿಂ ಕೋರ್ಟ್ ಮತ್ತು ದೇಶದ ಪ್ರಜಾಪ್ರಭುತ್ವವಾದಿಗಳು ವ್ಯಕ್ತಪಡಿಸುತ್ತಿರುವ ಆತಂಕವನ್ನು ಶಮನ ಮಾಡುವಂತವುಗಳಲ್ಲ.

★

ಕಾಮನ್ವೆಲ್ತ್ ಕ್ರೀಡಾಕೂಟ ಹಗರಣ: ಸಂಘಟನಾ ಸಮಿತಿಯ ಮುಖ್ಯಸ್ಥರು ಬರ್ಖಾಸ್ತ್

ನಗರಾಭಿವೃದ್ಧಿ ಕುರಿತ ಸಂಸದೀಯ ಸಮಿತಿ ಕಾಮನ್ವೆಲ್ತ್ ಕ್ರೀಡಾಕೂಟ ಹಗರಣ ಕುರಿತು ವಿಚಾರಣೆ ನಡೆಸುತ್ತಿದ್ದಂತೆ ಕ್ರೀಡಾ ಕೂಟದ ಸಂಘಟನಾ ಸಮಿತಿಯ ಅಧ್ಯಕ್ಷ ಸುರೇಶ ಕಲ್ಮಾಡಿ ಮತ್ತು ಮಹಾ ಕಾರ್ಯದರ್ಶಿ ಲಲಿತ್ ಬಾನೋಟ್‌ರನ್ನು ವಜಾ ಮಾಡಲಾಗಿದೆ. ಅವರು ಸಿಬಿಐ ತನಿಖೆಗೆ ಅಡ್ಡಿಯುಂಟು ಮಾಡುತ್ತಿದ್ದಾರೆ ಎಂಬ ಆಪಾದನೆಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ 'ನಿಷ್ಪಕ್ಷಪಾತಿ ಮತ್ತು ಅಡೆ-ತಡೆಯಿಲ್ಲದ ತನಿಖೆಗಾಗಿ' ಇವರಿಬ್ಬರನ್ನು ವಜಾ ಮಾಡಲಾಗಿದೆ ಎಂದು ಕೇಂದ್ರ ಕ್ರೀಡಾ ಮಂತ್ರಾಲಯ ಹೇಳಿದೆ. ಈ ಇಲಾಖೆಯಲ್ಲಿ ಇತ್ತೀಚಿನ ಸಂಪುಟ ಪುನರ್ರಚನೆಯಲ್ಲಿ ಕ್ರೀಡಾ ಮಂತ್ರಿಗಳ ಬದಲಾವಣೆಯೂ ಆಗಿದ್ದು ಹೊಸ ಕ್ರೀಡಾ ಮಂತ್ರಿಗಳು ಅಧಿಕಾರ ವಹಿಸಿಕೊಂಡ ಐದೇ ದಿನಗಳಲ್ಲಿ ಈ ಕ್ರಮ ಬಂದಿದೆ.

ಈ ವಜಾ ಕಾನೂನುಬಾಹಿರ ಎಂದು ಪ್ರತಿಭಟಿಸಿ ಕಲ್ಮಾಡಿ ಕ್ರೀಡಾ ಮಂತ್ರಿಗಳಿಗೆ ಪತ್ರ ಬರೆದಿದ್ದಾರಂತೆ ಮತ್ತು ಪ್ರತಿಭಟನೆ ದಾಖಲು ಪಡಿಸಿ ಅಧಿಕಾರ ಬಿಟ್ಟುಕೊಟ್ಟಿದ್ದಾರಂತೆ. ಆದರೆ ಭಾರತೀಯ ಒಲಿಂಪಿಕ್ ಸಂಘದ ಅಧ್ಯಕ್ಷ ಸ್ಥಾನವನ್ನು ಮಾತ್ರ ಬಿಟ್ಟು ಕೊಡುವುದಿಲ್ಲ ಎಂದು ಅವರು ಹೇಳಿದ್ದಾರೆ.

ಈ ನಡುವೆ ಸಂಸದೀಯ ಸಮಿತಿ ಕ್ರೀಡಾ ಇಲಾಖೆ, ದಿಲ್ಲಿ ಅಭಿವೃದ್ಧಿ ಪ್ರಾಧಿಕಾರ(ಡಿಡಿಎ) ಹಾಗೂ ಕೇಂದ್ರೀಯ ಸಾರ್ವಜನಿಕ ಕಾಮಗಾರಿ ಇಲಾಖೆ(ಸಿಪಿಡಬ್ಲ್ಯುಡಿ)ಯ ಹಿರಿಯ ಅಧಿಕಾರಿಗಳ ವಿಚಾರಣೆ ನಡೆಸಿ ಮುಂದಿನ 20 ದಿನಗಳೊಳಗೆ ತಾವು ಕೇಳಿರುವ ವರದಿಗಳನ್ನು ಸಲ್ಲಿಸುವಂತೆ ಅವರಿಗೆ ಹೇಳಿದೆ.



★

'ಜವಾಬ್ದಾರಿಯುತವಾಗಿ ವರ್ತಿಸಿ'-ಸಿಬಾಲ್ ಗೆ ಸುಪ್ರಿಂ ಕೋರ್ಟ್ ತಾಕೀತು

2ಜಿ ತರಂಗಾಂತರ ಹಂಚಿಕೆಯಲ್ಲಿ ಬೊಕ್ಕಸಕ್ಕೆ ನಷ್ಟವೇನೂ ಆಗಿಲ್ಲ ಎನ್ನುತ್ತ ಸಿಎಜಿ ವರದಿಯನ್ನು ಟೀಕಿಸಿದ ಯುಪಿಎ-2 ಸರಕಾರದ ದೂರಸಂಪರ್ಕ ಮಂತ್ರಿಗಳ ಹೇಳಿಕೆ ದುರದೃಷ್ಟಕರ, ಅವರು ಸ್ವಲ್ಪ ಜವಾಬ್ದಾರಿಕೆಯ ಭಾವನೆಯಿಂದ ವರ್ತಿಸಬೇಕಾಗಿದೆ ಎಂದು ಸುಪ್ರಿಂ ಕೋರ್ಟ್ ಹೇಳಿದೆ. 'ಸಿಬಿಐ ಯಾರ ಪ್ರಭಾವಕ್ಕೂ ಒಳಗಾಗಬಾರದು ಎಂಬುದು ಸರಿ. ತನಿಖೆಗಳು ಈ ನ್ಯಾಯಾಲಯದ ಉಸ್ತುವಾರಿಯಲ್ಲಿ ನಡೆಯುತ್ತಿವೆ. ಮಂತ್ರಿಯೂ ಸೇರಿದಂತೆ ಯಾರಿಂದಲೂ ಯಾವುದೇ ಟಿಪ್ಪಣಿ ತನಿಖೆಯ ಮಾರ್ಗದ ಮೇಲೆ ಪ್ರಭಾವ ಬೀರಬಾರದು' ಎಂದು ನ್ಯಾಯಾಧೀಶರು ಹೇಳಿದರು.

ಮಾವೋವಾದಿಗಳು ಮತ್ತು ಹಣಕಾಸು ಮಂತ್ರಿಗಳು

ಈ ನಡುವೆ ಯುಪಿಎ-2 ಹಣಕಾಸು ಮಂತ್ರಿಗಳು ಪ್ರತಿಪಕ್ಷಗಳಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದಿದ್ದರೆ ಮಾವೋವಾದಿಗಳ ಜತೆ ಸೇರಿಕೊಳ್ಳಿ ಎಂದು ಹೇಳಿದ್ದಾರಂತೆ. 2ಜಿ ತರಂಗಾಂತರದ ತನಿಖೆಗೆ ಜೆಪಿಸಿ ಆಗ್ರಹಿಸುತ್ತಿರುವ ಹಿನ್ನೆಲೆಯಲ್ಲಿ ಕಳೆದ ಸಂಸತ್ ಅಧಿವೇಶನ ವ್ಯರ್ಥವಾಗಲು ಪ್ರತಿಪಕ್ಷಗಳು ಕಾರಣ ಎಂಬ ಅರ್ಥದಲ್ಲಿ ಅವರು ಈ ಹೇಳಿಕೆ ನೀಡಿದ್ದಾರಂತೆ. ಹಾಗಿದ್ದರೆ ಅವರ ಸಂಪುಟ ಸಹಯೋಗಿ, ರೈಲು ಮಂತ್ರಿಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದೆ ಮಾವೋವಾದಿಗಳ ಜತೆ ಸೇರಿದ್ದಾರೆಯೋ ಎಂದೇನೂ ಅವರು ಹೇಳಿಲ್ಲ.

ರೈಲು ಇಲಾಖೆ ಹಳಿ ತಪ್ಪಿದೆಯೇ? 2200 ಕೋಟಿ ರೂ. ಕೊರತೆಯೇಕೆ?

ರೈಲು ಇಲಾಖೆ ಭಾರಿ ಹಣಕಾಸು ಕೊರತೆ ಅನುಭವಿಸುತ್ತಿದೆ, ಆದರಿಂದಾಗಿ ಖರ್ಚುಗಳಲ್ಲಿ ಬಹಳ ಕಡಿತ ಮಾಡಬೇಕಾಗಿದೆ ಎಂದು ಸ್ವತಃ ರೈಲ್ವೆ ಮಂಡಳಿ ಅಧ್ಯಕ್ಷರು ಹೇಳಿದ್ದಾರೆ. ಕಳೆದ ಬಜೆಟ್ ನಂತರ ಅಕ್ಟೋಬರ್ ವರೆಗೆ ರೈಲ್ವೆ ಇಲಾಖೆಯ ಆದಾಯದ ಗುರಿಯಲ್ಲಿ 1192 ಕೋಟಿ ರೂ.ಗಳ ಕೊರತೆಯಾಗಿದೆ. ಖರ್ಚಿನಲ್ಲಿ ಮಾತ್ರ 2400ಕೋಟಿ ರೂ. ಹೆಚ್ಚಳವಾಗಿದೆ. ಅಂದರೆ ಒಟ್ಟು ಕೊರತೆ ರೂ.3600 ಕೋಟಿ. ಬಜೆಟ್ ಅನುದಾನವನ್ನು ಪರಿಗಣಿಸಿದರೂ ಕೊರತೆ ಕನಿಷ್ಟ 2200 ಕೋಟಿ ರೂ. ದಾಟುತ್ತದೆ. ಇದು ಅವರು ಕೊಟ್ಟಿರುವ ಲೆಕ್ಕಾಚಾರ. ಸರಕು ಸಾಗಾಣಿಕೆಯಲ್ಲಿ 1ಕೋಟಿ ಟನ್ ಇಳಿಕೆಯಾಗಿದೆ.

ಇದು ಕೇವಲ ಅಕ್ಟೋಬರ್‌ನ ವರೆಗಿನ ಸ್ಥಿತಿ. ಈ ಹಣಕಾಸು ವರ್ಷ ಮುಗಿಯುವಷ್ಟರಲ್ಲಿ ಪರಿಸ್ಥಿತಿ ಇನ್ನೂ ಹದಗೆಡಬಹುದು ಎಂದು ಹೇಳಲಾಗಿದೆ. ಅಧಿಕೃತ ಪ್ರವಾಸಗಳು, ಓವರ್‌ಟೈಂ ಮತ್ತು ರಾತ್ರಿ ಪಾಳಿ ಕೆಲಸಗಳಿಗೆ ಪಾವತಿಗಳು ಬಹಳಷ್ಟು ಹೆಚ್ಚಿವೆಯಂತೆ. ಆದ್ದರಿಂದ ಈ ಬಾಬ್ತುಗಳಲ್ಲಿ ಈಗ ಕಡಿತ ಮಾಡಬೇಕಾಗಿದೆಯಂತೆ. ರೈಲ್ವೆ ಕೆಲಸ ಮಾಡಿಕೊಡುವ ಕಾಂಟ್ರಾಕ್ಟರುಗಳಿಗೆ ಪಾವತಿಗಳನ್ನು ನಿಲ್ಲಿಸುವಂತೆ ಹೇಳಲಾಗಿದೆಯಂತೆ. ಇದರಿಂದಾಗಿ ರೈಲ್ವೆ ಇಲಾಖೆಯ ಹಲವು ದೊಡ್ಡ ಯೋಜನೆಗಳು ನೆನೆಗುದಿಗೆ ಬಿದ್ದಿವೆ.

ಆದರೆ ರೈಲು ಮಂತ್ರಿಗಳ ಪೂರ್ವವಲಯದಲ್ಲಿ ಮಾತ್ರ ಹೀಗೆ ಕಾಂಟ್ರಾಕ್ಟರುಗಳಿಗೆ ಪಾವತಿಯನ್ನು ನಿಲ್ಲಿಸಬಾರದು ಎಂದು ರೈಲು ಮಂತ್ರಿಗಳು ತಾಕೀತು ಮಾಡಿದ್ದಾರಂತೆ. ಒಂದು ರೀತಿಯಲ್ಲಿ ಭಾರತೀಯ ರೈಲ್ವೆ ತೃಣಮೂಲ ಕಾಂಗ್ರೆಸಿನ ಆಸ್ತಿಯಾಗಿ ಬಿಟ್ಟಿದೆ ಎಂದು ಹೇಳಲಾಗುತ್ತಿದೆ. 2200 ಕೋಟಿ ರೂ. ಕೊರತೆ ಒಂದೆಡೆ, ಆದರೂ ಪಶ್ಚಿಮ ಬಂಗಾಳದಲ್ಲಿ ಬಜೆಟ್ ಹಣ ನೀಡಿರದಿದ್ದರೂ, ಯೋಜನಾ ಆಯೋಗದ ಮಂಜೂರಾತಿ ಇಲ್ಲದಿದ್ದರೂ ಹೊಸ ರೈಲುಗಳನ್ನು ಆರಂಭಿಸುವ ಸ್ಟಂಟ್‌ಗಳು. ಇದರಿಂದಾಗಿ ರೈಲ್ವೆ ಸುರಕ್ಷತೆಗೆ ಅಪಾಯ ಉಂಟಾಗುತ್ತಿದೆ. ರೈಲ್ವೆ ಸುರಕ್ಷತೆಯ ಸಿಬ್ಬಂದಿಯೂ ಸೇರಿದಂತೆ ಖಾಲಿ ಇರುವ 2 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಯೋಚನೆಯೂ ಈಗ ಇದ್ದಂತಿಲ್ಲ.

ಶರತ್‌ಚಂದ್ರ

ಟುನಿಶಿಯಾ ದಂಗೆಗಳು - ಓಡಿ ಹೋದ ಸರ್ವಾಧಿಕಾರಿ

ಟುನಿಶಿಯಾ ಜನ ದಂಗೆಯೆದ್ದು ಬೀದಿಗಿಳಿದರು. 29 ದಿನಗಳ ಬೀದಿ ದಂಗೆಗಳ ನಂತರ 23 ವರ್ಷಗಳ ಕಾಲ ಸರ್ವಾಧಿಕಾರ ಮಾಡಿದ್ದ ಅಧ್ಯಕ್ಷ ಬೆನ್ ಅಲಿ ದೇಶ ಬಿಟ್ಟು ಓಡಿ ಹೋಗುವ ಪರಿಸ್ಥಿತಿ ಉಂಟಾಗಿದೆ. ಕೆಲವು ದಶಕಗಳಲ್ಲೇ ಉತ್ತರ ಆಫ್ರಿಕಾದ ಅರಬ್ ದೇಶಗಳಲ್ಲಿ ಜನರು ದಂಗೆ ಎದ್ದು ಸರ್ಕಾರ ಬದಲಾಯಿಸಿದ ಉದಾಹರಣೆ ಇರಲಿಲ್ಲ. ಇದು ನೆರೆಯ ಇತರ ಅರಬ್ ದೇಶಗಳ ಜನತೆಯಲ್ಲೂ ಉತ್ಸಾಹ ತುಂಬಿದ್ದು, ಜನರ ದಂಗೆ ಇತರ ದೇಶಗಳಿಗೆ ಹಬ್ಬಿದೆ. ಅಲ್ಲಿನ ಸರ್ಕಾರಗಳಲ್ಲಿ ಸರ್ವಾಧಿಕಾರಿಗಳಲ್ಲಿ ನಡುಕ ತಂದಿದೆ.

ಆತ್ಮಾಹುತಿಯ ಕಿಡಿ

ರಾಜಧಾನಿಯ ಹತ್ತಿರದ ಪಟ್ಟಣವೊಂದರಲ್ಲಿ ಡಿಸೆಂಬರ್ 17 ರಂದು ನಿರುದ್ಯೋಗಿ ಪದವೀಧರನೊಬ್ಬ ಆತ್ಮಾಹುತಿ ಈ ದಂಗೆಯ ಕಿಡಿ ಆಗಿತ್ತು. ಆತ ಉದ್ಯೋಗ ಸಿಗದೆ ಹತಾಶನಾಗಿ ಬೀದಿಯಲ್ಲಿ ಹಣ್ಣು-ತರಕಾರಿ ಮಾರಾಟದಲ್ಲಿ ತೊಡಗಿದ್ದ. ಲೈಸೆನ್ಸ್ ಇಲ್ಲದೆ ವ್ಯಾಪಾರ ಮಾಡುತ್ತಿದ್ದಿ ಅಂತ ಪೋಲಿಸರು ಆತನ ಹಣ್ಣು-ತರಕಾರಿಗಳನ್ನು ಕಿತ್ತುಕೊಂಡಿದ್ದರು. ರೊಚ್ಚಿಗೆದ್ದ ಯುವಕರು ವಿದ್ಯಾರ್ಥಿಗಳು ಪೋಲೀಸರ ಮೇಲೆ ದಾಳಿ ಮಾಡಿದರು. ನೋಡ ನೋಡುತ್ತಿದ್ದಂತೆ ದಂಗೆ ದೇಶದ ರಾಜಧಾನಿ ಮತ್ತು ಎಲ್ಲಾ ಪಟ್ಟಣಗಳಿಗೆ ಹಬ್ಬಿತು. ಪೋಲೀಸರು ಗೋಲೀಬಾರು, ಅಶ್ರುವಾಯು, ಬಡಿತದ ದಮನ ಚಕ್ರ ಹರಿಯಬಿಟ್ಟರು. ರೊಚ್ಚಿಗೆದ್ದ ಜನ ಸರ್ವಾಧಿಕಾರಿಯ ಕುಟುಂಬದ ಹಾಗೂ ಆತನ ಚಮಚಾಗಳ ಆಸ್ತಿ ಪಾಸ್ತಿ ಮತ್ತು ಆಳುವ ಪಕ್ಷದ ಕಚೇರಿಗಳ ಮೇಲೆ ದಾಳಿ ಆರಂಭಿಸಿದರು. ಪೋಲಿಸು ಸ್ಟೇಶನುಗಳನ್ನು ಸುಟ್ಟು ಹಾಕಿದರು. ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಹಲವು ದಿನಗಳ ಪೋಲೀಸರ ದಮನದ ನಂತರವೂ ದಂಗೆ ನಿಲ್ಲದಾಗ ಅಧ್ಯಕ್ಷ ಮಿಲಿಟರಿ ಕರೆಸಿದ. ಮಿಲಿಟರಿ ಜನರ ಮೇಲೆ ಗೋಳಿಬಾರು ಮಾಡಲು ನಿರಾಕರಿಸಿತು. ಮಿಲಿಟರಿ ಮುಖ್ಯಸ್ಥನನ್ನು ಅಮಾನತು ಮಾಡಿದ. ಜನರ ಕೋಪ ತಣ್ಣಗೆ ಮಾಡಲು ಕುಪ್ರಸಿದ್ಧ ಗೃಹ ಮಂತ್ರಿಯನ್ನು ಬರ್ಖಾಸ್ತು ಮಾಡಿದ. ಆದರೆ ದಂಗೆ ನಿಲ್ಲಲಿಲ್ಲ.



ಪೊಲೀಸರಿಂದ ಹಲ್ಲೆಗೊಳಗಾದ ಹಣ್ಣಿನ ವ್ಯಾಪಾರಿಯನ್ನು ಭೇಟಿ ಮಾಡಿದ ಅಧ್ಯಕ್ಷ ಬೆನ್ ಅಲಿ

29 ದಿನಗಳ ಸತತ ದಂಗೆಯ ನಂತರ ಅಧ್ಯಕ್ಷ ಬೆನ್ ಅಲಿ ತನ್ನ ಹತ್ತಿರದ ಕುಟುಂಬದವರ ಜತೆ ವಿಮಾನದಲ್ಲಿ ಓಡಿ ಹೋದ. ಆತನ ಪ್ರಮುಖ ಬೆಂಬಲಿಗರಾಗಿದ್ದ ಫ್ರಾನ್ಸ್ ಸೇರಿದಂತೆ ಯುರೋಪಿನ ಹಲವು ಸರ್ಕಾರಗಳು ಆತನ ವಿಮಾನ ಇಳಿಯಲು ಅನುಮತಿ ಕೊಡಲಿಲ್ಲವಂತೆ. ಕೊನೆಗೂ ಸೌದಿ ಅರೇಬಿಯಾ ಆತನಿಗೆ ಆಶ್ರಯಕೊಟ್ಟಿತು. ದೇಶದ ಅರ್ಧಕ್ಕೂ ಹೆಚ್ಚು ಆಸ್ತಿ ಕಬಳಿಸಿದ ಬೆನ್ ಅಲಿ, ಆತನ ಕುಟುಂಬ ಮತ್ತು ಚಮಚಾಗಳ ಆಸ್ತಿ ಪಾಸ್ತಿ ಜನರ ಆಕ್ರೋಶಕ್ಕೆ ಗುರಿಯಾಯಿತು. 23 ವರ್ಷಗಳ ಕಾಲ ದಮನ ಚಕ್ರದ ಮೂಲಕ ಜನರನ್ನು ಗೋಳು ಹುಯಿದುಕೊಂಡಿದ್ದ ಬೆನ್ ಅಲಿಯನ್ನು, 29 ದಿನಗಳ ಸತತ ಬೀದಿ ದಂಗೆಯಿಂದ ಜನ ಅಧಿಕಾರದಿಂದ ಇಳಿಸಿದ್ದರು.

ಜನರ ದಂಗೆಯ ಆಶಯ ಸಫಲವಾದೀತೆ ?

ಬೆನ್ ಅಲಿ ಓಡಿ ಹೋದರೂ ಆತನ ಚಮಚಾಗಳು ಹೊಸ ತಾತ್ಕಾಲಿಕ ಸರ್ಕಾರದಲ್ಲಿ ಅಧ್ಯಕ್ಷ, ಪ್ರಧಾನಿ, ಪ್ರಮುಖ (ಗೃಹ, ರಕ್ಷಣೆ, ವಿದೇಶ, ಅರ್ಥ) ಮಂತ್ರಿ ಪದವಿ ಹಿಡಿದದ್ದರಿಂದ ರೊಚ್ಚಿಗೆದ್ದ ಜನ ಅವರು ಆ ಪದವಿ ಬಿಡುವ ವರೆಗೆ ಸರ್ಕಾರಿ ಭವನಗಳ ಮುತ್ತಿಗೆ ಹಾಕಿದ್ದರು. ಬೆನ್ ಅಲಿ ಕಡೆಯವರು ಹೊಸ ಸರ್ಕಾರದಲ್ಲಿ ಯಾವುದೇ ಪಾತ್ರವಿಲ್ಲದಂತೆ ಜನ ಒತ್ತಡ ಮುಂದುವರೆಸಿದ್ದಾರೆ. ವಿದ್ಯಾರ್ಥಿ, ಯುವಜನ, ವಕೀಲರು, ಪತ್ರಕರ್ತರು, ಅಧ್ಯಾಪಕರು ಮತ್ತಿತರ ಉದ್ಯೋಗಿಗಳ ಯೂನಿಯನುಗಳ ಪ್ರಬಲ ನೆಲೆ ಚಳುವಳಿಯ ಬಲ. ಒಂದು ಕೇಂದ್ರೀಯ ಸಂಘಟನೆ, ನಾಯಕರು ಇಲ್ಲದಿರುವುದು ಕೊರತೆ. ಜನ ಚಳುವಳಿಯ ಪರವಾಗಿರುವ (ಅಥವಾ ಕನಿಷ್ಠ ತಟಸ್ಥವಾಗಿರುವ) ಮಿಲಿಟರಿ ಬಲ ಪೋಲಿಸ್ ದಮನಕ್ಕೆ ಪ್ರತಿಯಾಗಿ ಕೆಲಸ ಮಾಡುವ ಸಾಧ್ಯತೆ ಹೆಚ್ಚು. ಟುನಿಶಿಯಾದ ಜನರ ದಂಗೆ ಸಫಲವಾಗುವ ಸಾಧ್ಯತೆ ಹೆಚ್ಚಿದೆ.



ಟುನಿಶಿಯಾದಲ್ಲಿ ನಿರುದ್ಯೋಗ ಮತ್ತು ಆಹಾರ ವಸ್ತುಗಳ ಬೆಲೆ ಗಗನಕ್ಕೇರಿದ್ದು ಈ ದಂಗೆಯ ಪ್ರಮುಖ ಹಿನ್ನೆಲೆಯಾಗಿತ್ತು. ಯುವಕರ ನಿರುದ್ಯೋಗ ದರ ಶೇ. 50 ದಾಟಿದ್ದು ಯುವಜನ ಕುದಿಯುತ್ತಿದ್ದರು. ಸ್ವಲ್ಪ ಉದ್ಯೋಗ ಒದಗಿಸುತ್ತಿದ್ದ ಯುರೋ-ಪ್ರವಾಸಿ ಮತ್ತು "ಮುಕ್ತ ವ್ಯಾಪಾರ ಪ್ರದೇಶ" ಗಳಲ್ಲಿ ಕೂಲಿ ಬಹಳ ಕಡಿಮೆ ಇದೆ. ಐಎಂಎಫ್-ವಿಶ್ವ ಬ್ಯಾಂಕ್ ಒತ್ತಡದಿಂದ ಆಹಾರ ಮತ್ತು ತೈಲ ಸಬ್ಸಿಡಿ ಕಡಿತ ಮಾಡಿದ್ದು ಆಹಾರ-ತೈಲ ಮತ್ತು ಎಲ್ಲಾ ಅವಶ್ಯಕ ವಸ್ತುಗಳ ಬೆಲೆಗಳು ಇತ್ತೀಚೆಗೆ ವಿಪರೀತವಾಗಿ ಏರಿದ್ದವು. ಸಾಲದೆಂಬಂತೆ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಅಧ್ಯಕ್ಷ ಬೆನ್ ಅಲಿ ಕುಟುಂಬ ಮತ್ತು ಚಮಚಾಗಳು ದೇಶದ ಆಸ್ತಿಯ ದೊಡ್ಡ ಭಾಗವನ್ನು ಲಪಟಾಯಿಸಿದ್ದರು. ಬೆನ್ ಅಲಿ ಎಲ್ಲಾ ರೀತಿಯ ರಾಜಕೀಯ ಪಕ್ಷಗಳು ಮತ್ತು ಚಟುವಟಿಕೆಗಳನ್ನು ಎಂದೋ ದಮನ ಮಾಡಿದ್ದ. ಯೂನಿಯನ್‌ಗಳು ಮತ್ತು ಇತರ ಜನಸಂಘಟನೆಗಳನ್ನು ಹೊಸಕಿ ಹಾಕಿದ್ದ. ಸರ್ಕಾರದ ವಿರುದ್ಧ ಮಾತನಾಡಿದವರನ್ನು ಮುಗಿಸಿ ಬಿಡುವ ಕ್ರೂರ 1.8 ಲಕ್ಷ ಬಲದ ವಿಶೇಷ ಪೋಲಿಸ್ ಪಡೆ ಹರಿಯ ಬಿಟ್ಟಿದ್ದ. ಎಲ್ಲಾ ಚುನಾವಣೆಗಳಲ್ಲಿ ತೀವ್ರ ಅಕ್ರಮ ನಡೆಸಿ ಶೇ. 90 ಕ್ಕಿಂತ ಹೆಚ್ಚಿನ 'ಮತಗಳಿಸಿ' ಆಳುವ ಪಕ್ಷ ಜಯ ಪಡೆಯುತ್ತಿತ್ತು.

ಅರಬ್ ಜನತೆಯಲ್ಲಿ ವಿದ್ಯುತ್ ಸಂಚಾರ

ಉತ್ತರ ಆಫ್ರಿಕಾದ ಅರಬ್ ದೇಶಗಳಲ್ಲೇ ಒಂದು ಕೋಟಿ ಜನಸಂಖ್ಯೆಯ ಪುಟ್ಟ ದೇಶ ಟುನಿಶಿಯಾ. ಮೆಡಿಟರೇನಿಯನ್ ಸಮುದ್ರ ತಟದಲ್ಲಿದ್ದು, ಇಟಲಿಯಿಂದ ಕೆಲವೇ ಹತ್ತಾರು ಮೈಲಿಗಳ ದೂರದಲ್ಲಿರುವ ದೇಶ. ಇಟಲಿ ಮತ್ತು ಇತರ ಯುರೋಪಿಯನರಿಗೆ ಅಗ್ಗದ ಪ್ರವಾಸಿ ತಾಣ. 1950 ರ ದಶಕದಲ್ಲಿ ಫ್ರೆಂಚರಿಂದ ಸ್ವಾತಂತ್ರ್ಯ ಪಡೆಯಿತು. ಈಜಿಪ್ಟ್, ಲಿಬ್ಯಾ, ಇರಾಕ್, ಯೆಮೆನ್ ಮುಂತಾದ ಅರಬ್ ದೇಶಗಳಂತೆ ಯುವ ಮಿಲಿಟರಿ ಅಧಿಕಾರಿಗಳ ಕ್ಷಿಪ್ರ ಕ್ರಾಂತಿಯಿಂದ ಆಧುನಿಕ ರಾಷ್ಟ್ರೀಯತೆಯತ್ತ ಹೊರಳಿತು. ಆದರೆ 1987 ರಿಂದ ಹಿಂದಿನ ಅಧ್ಯಕ್ಷರ ಅನಾರೋಗ್ಯ ಬಳಸಿ ಕ್ಷಿಪ್ರಕ್ರಾಂತಿಯ ಮೂಲಕ ಅಧಿಕಾರಕ್ಕೆ ಬಂದ ಬೆನ್ ಅಲಿ ಆಳ್ವಿಕೆಯಲ್ಲಿ ಟುನಿಶಿಯಾ ಕಂಗೆಟ್ಟಿದೆ. 1990 ರ ದಶಕದಿಂದ ಆಫ್ರಿಕಾದಲ್ಲೇ ಅತ್ಯಂತ ಸರಾಸರಿ ಹೆಚ್ಚು ಅಭಿವೃದ್ಧಿ ದರ (ಶೇ. 5) ಸಾಧಿಸಿದ ಹೊಗಳಿಕೆಗೆ ಐಎಂಎಫ್-ವಿಶ್ವ ಬ್ಯಾಂಕ್ ಗಳಿಂದ ಪಾತ್ರವಾದ ಟುನಿಸಿಯಾದ ಅಭಿವೃದ್ಧಿ ಎಷ್ಟು ಟೊಳ್ಳಾಗಿತ್ತು ಎಂಬುದು ಈ ದಂಗೆಗಳಿಂದ ಜಗಜ್ಜಾಹೀರಾಗಿದೆ.

ಸರ್ಕಾರ ಬದಲಿಸಲು ಸಮರ್ಥವಾದ ಟುನಿಶಿಯಾ ದಂಗೆ ಅರಬ್ ಜನತೆಯಲ್ಲಿ ವಿದ್ಯುತ್ ಸಂಚಾರ ಮಾಡಿದೆ. ಈಜಿಪ್ಟ್ ಸೇರಿದಂತೆ ಹಲವು ಅರಬ್ ದೇಶಗಳಲ್ಲಿ ಯುವಜನರ ಆತ್ಮಾಹುತಿಗಳು, ಬೀದಿ ಪ್ರತಿಭಟನೆಗಳೂ ನಡೆದಿರುವ ಘಟನೆಗಳು ವರದಿಯಾಗಿವೆ. ಈಜಿಪ್ಟ್ ನಲ್ಲಿ ದಿನೇ ದಿನೇ ಪ್ರತಿಭಟನೆ ಬಿರುಸಾಗುತ್ತಿದೆ. ಅರಬ್ ಸರ್ಕಾರಗಳು ನಡುಗುತ್ತಿವೆ. ಅರಬ್ ಲೀಗಿನ ತುರ್ತು ಸಭೆ ನಡೆಸಲಾಯಿತು. ಲಿಬ್ಯಾ ನಾಯಕ ಗದ್ದಾಫಿ ಟುನಿಶಿಯಾ ಜನತೆಯನ್ನು ಖಂಡಿಸುವ ವರೆಗೆ ಹೋದ. ಟುನಿಶಿಯಾ ದ ದಂಗೆಗೆ ವಿಕಿಲೀಕ್ಸ್ ಕಾರಣ ಎಂದು ದೂಷಿಸಿದನಂತೆ. ಜೋರ್ಡಾನ್, ಸಿರಿಯಾ ಸರ್ಕಾರಗಳು ಬಡವರ ಸಬ್ಸಿಡಿ ಹೆಚ್ಚು ಮಾಡುವ ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸುವ ತುರ್ತು ಕ್ರಮಗಳನ್ನು ಘೋಷಿಸಿವೆ. ಪ್ರತಿ ಅರಬ್ ದೇಶದ ಪರಿಸ್ಥಿತಿ ಟುನಿಸಿಯಾಗಿಂತ ಬಹಳ ಭಿನ್ನವಾಗಿದೆ. ಆದರೆ ಅರಬ್ ಜನತೆ ಕುದಿಯುತ್ತಿದ್ದು ಕೆಲವು ದಶಕಗಳಿಂದ ಆಳುತ್ತಿರುವ ದಮನಕಾರಿ ಸರ್ವಾಧಿಕಾರಗಳಿಗೆ ತೀವ್ರ ಆತಂಕದ ಪರಿಸ್ಥಿತಿ ಮುಂದುವರೆಯಲಿದೆ. ಅಮೆರಿಕ ಮತ್ತು ಯುರೋಪಿಯನ್ ಕೂಟದ ಸರ್ಕಾರಗಳೂ ತೀವ್ರ ಆತಂಕದಿಂದ ಪರಿಸ್ಥಿತಿ ಗಮನಿಸುತ್ತಿವೆ.

ಬಡತನ

ಇನ್ನೊಂದು ಶತಮಾನ ಅಂತ್ಯಕ್ಕೆ ಪೂರಾ
ಬಡತನದ ಅಂತ್ಯವೂ ಆಗುವುದೋ ಬೋರ
ಬಡಜನರು ಕೂಳಿರದೆ ಹೋದಾಗ ಸತ್ತು
ಉಳಿಯುವುದು ಯಾರಯ್ಯ ಉಳ್ಳವರೆ ಒಟ್ಟು

- ವಿಡಂಬಾರಿ

ಬಿಜೆಪಿ ದರ್ಬಾರ್

ಪುಟ 12 ರಿಂದ

ಈ ಸುದ್ದಿ ಬಂದಿರುವುದು ಚೀನಾ ದೇಶದಿಂದ. ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಯವರು ಇದೀಗ ಚೀನಾ ಪ್ರವಾಸದಲ್ಲಿದ್ದಾರೆ. ಅಲ್ಲಿ ಅವರಿಗೆ ಕೇಳಲಾದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು ಯಡಿಯೂರಪ್ಪನವರು ಭೂಮಿಯನ್ನು ಡೀ ನೋಟಿಫೈ ಮಾಡಿ ಅದನ್ನು ತಮ್ಮ ಮಕ್ಕಳು ಹಾಗೂ ಬಂಧುಗಳಿಗಾಗಿ ಹಂಚಲು ಡೀ ನೋಟಿಫೈ ಮಾಡಿರುವುದು 'ಅನೈತಿಕ' ಎಂದಿದ್ದಾರೆ.

ಯಡಿಯೂರಪ್ಪನವರ ಈ ಹೊಲಸು ವ್ಯವಹಾರಗಳನ್ನು ಬಹಿರಂಗವಾಗಿ ನಿರ್ಲಜ್ಜವಾಗಿ ಸಮರ್ಥಿಸುವುದು ಅವರಿಗೂ ಕಷ್ಟವೇ ಅಲ್ಲವೇ. ಆದರೆ ತಮ್ಮ ಬಿಜೆಪಿ ಬುದ್ಧಿಯನ್ನು ಮಾತ್ರ ಗಡ್ಕರಿ ಬಿಟ್ಟು ಕೊಟ್ಟಿಲ್ಲ.

ಯಡಿಯೂರಪ್ಪನವರ ಕೃತ್ಯಗಳು ಅನೈತಿಕವಾದರೂ ಕೂಡ, ಕಾನೂನುಬಾಹಿರ ಏನಲ್ಲ. ಹಾಗಾಗಿ ಅವರ ಮೇಲೆ ಮೊಕದ್ದಮೆ ಹೂಡಲು ಅವಕಾಶ ನೀಡಿರುವುದು ಸರಿಯಲ್ಲ ಎಂದಿದ್ದಾರೆ ಅವರು.

ತಮ್ಮ ಕೃತ್ಯಗಳು ಅನೈತಿಕ ಅಂತ ಯಡಿಯೂರಪ್ಪನವರು ಒಪ್ಪುತ್ತಾರೆಯೇ ? ನೈತಿಕತೆ,ಅನೈತಿಕತೆಯ ಕಿಂಚಿತ್ ಪ್ರಜ್ಞೆ ಯಡಿಯೂರಪ್ಪನವರಿಗೆ ಇದ್ದಿದ್ದರೆ ಅವರು ಇಲ್ಲಿಯವರೆಗೆ ಹೀಗೆ ಕುರ್ಚಿಯನ್ನು ಎರಡೂ ಕೈಗಳಿಂದ ಬಾಚಿ ತಬ್ಬಿಹಿಡಿದುಕೊಂಡು ಎಲ್ಲಿ ಕೂಡಲು ಸಾಧ್ಯವಾಗುತ್ತಿತ್ತು ಅಲ್ಲವೇ?

....ಭೂಮಿ ಕಬಳಿಸಲು ವ್ಯವಸ್ಥಿತ ಸಂಚು

ಪುಟ 4 ರಿಂದ

ವಶಪಡಿಸಿಕೊಂಡು ಆ ಭೂಮಿಯಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲು ಇರುವ ತೊಡಕಾದರೂ ಏನು? ಹಿಂದಿನ ಸರ್ಕಾರದ ಅವಧಿಯಲ್ಲಿ ಚುರುಕಾಗಿ ನಡೆದ ಈ ಕಾರ್ಯ ಬಿಜೆಪಿ ಸರ್ಕಾರ ಬಂದ ಮೇಲೆ ನಿಂತೇ ಹೋಗಿದೆ. ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನ್ಯಾಯಮೂರ್ತಿಗಳಾದರೂ ಈ ತೀರ್ಮಾನವನ್ನು ತಿರಸ್ಕರಿಸಿ ಮೇಲ್ಪಂಕ್ತಿ ಹಾಕಬಾರದೇಕೆ ?

ಬಿಜೆಪಿ ಸರ್ಕಾರದ ಗೋಸುಂಬೆತನ

ಗೋಸಂರಕ್ಷಣೆಯ ಬಗ್ಗೆ ವೀರಾವೇಶದಿಂದ ಮಾತನಾಡುವ ಬಿಜೆಪಿ ಪಶು ಸಂರಕ್ಷಣೆಗೆ ಹಲವು ವರ್ಷಗಳಿಂದ ತನ್ನದೇ ಕೊಡುಗೆ ನೀಡುತ್ತಾ ಬಂದಿರುವ ವಿಶ್ವವಿದ್ಯಾನಿಲಯವನ್ನೇ ನುಂಗಿಹಾಕಲು ನಿಂತಿರುವುದು ಅದರ ವ್ಯಾಘ್ರತ್ವವನ್ನು ಬಟಾಬಯಲು ಮಾಡಿದೆ. ಸಾವಯುವ ಕೃಷಿ, ಗೋಸಂರಕ್ಷಣೆಗೆ ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡುತ್ತಿರುವ ಸರ್ಕಾರ, ಇದೇ ಉದ್ದೇಶಕ್ಕೆ ಬಳಕೆಯಾಗುತ್ತಿರುವ ವಿ.ವಿ.ಯನ್ನೇ ಕಡೆಗಣಿಸುತ್ತಿರುವುದು ಆಶ್ಚರ್ಯದ ಸಂಗತಿ. ಇದರಿಂದ ಬಿಜೆಪಿ ಗೋಸುಂಬೆತನ ಬಯಲಾಗಿದೆ.

ಆಧುನಿಕ ಸಮಾಜದಲ್ಲಿ ಒಂದು ವಿಶ್ವವಿದ್ಯಾನಿಲಯದ ಮಹತ್ವ ಏಷ್ಟೆಂಬುದು ಗೊತ್ತಿದ್ದರೂ ಈ ರೀತಿ ಬೇಕಾಬಿಟ್ಟಿ ತೀರ್ಮಾನಗಳನ್ನು ಮಾಡುವುದು ಒಂದು ಜವಾಬ್ದಾರಿಯುತ ಸರ್ಕಾರದ ಲಕ್ಷಣವಲ್ಲ. ಅಭಿವೃದ್ಧಿಪರ ಎಂದು ಬಡಾಯಿ ಕೊಚ್ಚಿಕೊಳ್ಳುವ ಬದಲು ನೈಜ ಪ್ರಗತಿಯತ್ತ ಗಮನಹರಿಸಿ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಉಳಿಸಲು ಸರ್ಕಾರ ಮುಂದಾಗಬೇಕು.

ಹಿಂದುತ್ವ ಭಯೋತ್ಪಾದನೆ ಆತಂಕಕಾರಿ...

ಪುಟ 11 ರಿಂದ

ಒಬ್ಬರು ಗಾಯಾಳು ಮಾವೋವಾದಿಗಳನ್ನು ಚಿಕಿತ್ಸೆಗಾಗಿ ಪಶ್ಚಿಮ ಮಿಡ್ನಾಪುರದಿಂದ ಕಟಕ್ ಆಸ್ಪತ್ರೆಯೊಂದಕ್ಕೆ ಕರೆದೊಯ್ದು ಟಿಎಂಸಿ ಸಂಸತ್ ಸದಸ್ಯರೊಬ್ಬರನ್ನು ಇತ್ತೀಚೆಗೆ ಕಟಕ್‌ನಲ್ಲಿ ಬಂಧಿಸಲಾಗಿದೆ. ಮಾವೋವಾದಿ ದಳಗಳ ವಿರುದ್ಧ ಭದ್ರತಾ ಪಡೆಗಳು ನಡೆಸುತ್ತಿರುವ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವಂತೆ ಟಿಎಂಸಿ ಒತ್ತಾಯಿಸುತ್ತಿದೆ.

ಹೀಗಿದ್ದಾಗ್ಯೂ ಸರ್ಕಾರದಲ್ಲಿ ಭಾಗಿದಾರರಾಗಿರುವ ಕೇಂದ್ರ ಸಚಿವರೊಬ್ಬರು ಮಾವೋವಾದಿಗಳೊಂದಿಗೆ ಹೊಂದಿರುವ ಸಖ್ಯತೆ ಬಗ್ಗೆ ಕೇಂದ್ರ ಸರ್ಕಾರ ಕುರುಡಾಗಿ ಕುಳಿತಿದೆ. ಟಿಎಂಸಿ ಒತ್ತಡಕ್ಕೆ ಮಣಿದು ಕೇಂದ್ರ ಗೃಹ ಸಚಿವರು ಪಶ್ಚಿಮಬಂಗಾಳ ಮುಖ್ಯಮಂತ್ರಿಗೆ ಪತ್ರವೊಂದನ್ನು ಬರೆದಿದ್ದಾರೆ. ಸಿಪಿಐ(ಎಂ) ಸಶಸ್ತ್ರ ಕಾರ್ಯಕರ್ತರನ್ನು ಹೊಂದಿದ್ದು, ಹಿಂಸೆಯನ್ನು ಪ್ರಚೋದಿಸುತ್ತಾರೆ ಎಂದು ಈ ಪತ್ರದಲ್ಲಿ ಕೇಂದ್ರ ಸಚಿವರು ಆಪಾದಿಸಿದ್ದಾರೆ. ಎಡರಂಗವನ್ನು ಬೆಂಬಲಿಗರಾಗಿದ್ದಕ್ಕಾಗಿ ಜಂಗಲ್‌ಮಹಲ್ ಪ್ರದೇಶದಲ್ಲಿ 249 ಮಂದಿಯ ಹತ್ಯೆ ನಡೆದಿದ್ದಕ್ಕೆ ಸಂಬಂಧಿಸಿ ಮಾತ್ರ ಚಕಾರವೆತ್ತಿಲ್ಲ!

ರಾಜ್ಯದಲ್ಲಿ ಎಲ್ಲಾ ರೀತಿಯ ರಾಜಕೀಯ ಹಿಂಸಾವಾದ ಕೊನೆಯಾಗಬೇಕೆಂದು ಸಿಪಿಐ(ಎಂ) ಬಯಸುತ್ತದೆ. ಶಾಂತ ವಾತಾವರಣ ಉಳಿಸಿಕೊಳ್ಳಲು ಹಾಗೂ ಹಿಂಸೆಯನ್ನು ಮಟ್ಟಹಾಕಲು ರಾಜ್ಯ ಸರ್ಕಾರ ಮತ್ತು ಆಡಳಿತ ನಡೆಸುವ ಎಲ್ಲಾ ಪ್ರಯತ್ನಗಳಿಗೆ ಸಿಪಿಐ(ಎಂ) ಹಾಗೂ ಎಡರಂಗ ಸಂಪೂರ್ಣ ಬೆಂಬಲ ನೀಡುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಪ್ರದೇಶಗಳಲ್ಲಿನ ಪರಿಸ್ಥಿತಿಯನ್ನು ಅಂದಾಜು ಮಾಡಲು ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಹಾಗೂ ಹೊರ ರಾಜ್ಯದ ಐವರು ಪೋಲೀಸ್ ಅಧಿಕಾರಿಗಳನ್ನು ಒಳಗೊಂಡ ತಂಡವನ್ನು ಪಶ್ಚಿಮಬಂಗಾಳಕ್ಕೆ ಕಳಿಸಲು ಭಾರತದ ಚುನಾವಣೆ ಆಯೋಗ ನಿರ್ಧರಿಸಿರುವುದು ಈ ಹಿಂದೆಂದೂ ನಡೆಯದಂತಹ ಕ್ರಮವಾಗಿದೆ. ಇಂಥ ಒಂದು ಅಸಹಜ ಕ್ರಮವು ರಾಜ್ಯದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ಸಂಘಟಿಸುವಲ್ಲಿ ರಾಜ್ಯದ ಆಡಳಿತದ ಸಾಮರ್ಥ್ಯಕ್ಕೆ ಯಾವುದೇ ರೀತಿಯ ಕೊಡುಗೆಯನ್ನು ನೀಡಲಾರದು.

ಶ್ರೀಕೃಷ್ಣ ಸಮಿತಿ ವರದಿ

ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಕ್ಕೆ ಸಂಬಂಧಿಸಿ ಶ್ರೀ ಕೃಷ್ಣ ಸಮಿತಿ ಸಲ್ಲಿಸಿರುವ ವರದಿಯನ್ನು ಪಿ.ಬಿ. ಚರ್ಚಿಸಿತು. ಭಾಷಾವಾರು ನೆಲೆಯಲ್ಲಿ ರಚಿಸಿರುವ ರಾಜ್ಯಗಳನ್ನು ವಿಭಜಿಸಬಾರದು ಎಂಬ ನಿಲುವನ್ನು ಸಿಪಿಐ(ಎಂ) ಸದಾ ತಳೆಯುತ್ತಾ ಬಂದಿದೆ. ತೆಲಂಗಾಣ ಪ್ರದೇಶದ ಸಬಲೀಕರಣಕ್ಕೆ ಸಂವಿಧಾನಕ/ಶಾಸನಾತ್ಮಕ ಕ್ರಮಗಳನ್ನು ಅನುಸರಿಸುವುದರೊಂದಿಗೆ ಸಂಯುಕ್ತ ಆಂಧ್ರಪ್ರದೇಶ ಅಸ್ತಿತ್ವದಲ್ಲಿರುವುದೇ ಅತ್ಯುತ್ತಮ ಪರಿಹಾರ ಎಂದು ಶ್ರೀಕೃಷ್ಣ ಸಮಿತಿ ಹೇಳಿದೆ. ಶ್ರೀ ಕೃಷ್ಣ ಸಮಿತಿಯ ಶಿಫಾರಸ್ಸು ಬಹುತೇಕ ಸಿಪಿಐ(ಎಂ)ನ ಪ್ರತಿಪಾದನೆಗಳಿಗೆ ತೀರಾ ಹತ್ತಿರವಾಗಿದೆ. ಶ್ರೀ ಕೃಷ್ಣ ಸಮಿತಿ ವರದಿ ಬಗ್ಗೆ ಕೇಂದ್ರ ಸರ್ಕಾರ ಬೇಗನೆ ತನ್ನ ನಿಲುವನ್ನು ಪ್ರಕಟಿಸಬೇಕು.

ಮುಂಬರುವ ವಿಧಾನಸಭೆ ಚುನಾವಣೆಗಳು

ಪಶ್ಚಿಮಬಂಗಾಳ, ಕೇರಳ, ತಮಿಳುನಾಡು ಮತ್ತು ಅಸ್ಸಾಂ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗಳ ತಯಾರಿ ಕುರಿತ ವರದಿಗಳನ್ನು ಪಿಬಿ ಚರ್ಚಿಸಿತು. ಚುನಾವಣೆ ಹೋರಾಟವನ್ನು ನಡೆಸಲು ಬೇಕಾದ ಸಿದ್ಧತೆಗಳನ್ನು ಅಂತಿಮಗೊಳಿಸಲು ಆಯಾ ರಾಜ್ಯಗಳ ಪಕ್ಷದ ರಾಜ್ಯ ಸಮಿತಿಗಳು ಶೀಘ್ರವೇ ಸಭೆಗಳನ್ನು ನಡೆಸಲಿವೆ. ಪಕ್ಷದ ಕೇಂದ್ರ ಸಮಿತಿಯ ಮುಂದಿನ ಸಭೆಯನ್ನು 2011 ಮಾರ್ಚ್ 4 ರಿಂದ 6ರವರೆಗೆ ನವದೆಹಲಿಯಲ್ಲಿ ನಡೆಸಲು ಪಿ.ಬಿ.ತೀರ್ಮಾನಿಸಿತು.

ಕಳ್ಳನೇ ಪೊಲೀಸನನ್ನು ದಬಾಯಿಸಿದ ಪ್ರಸಂಗ

ಪುಟ 3 ರಿಂದ

ಕೃತ್ಯವನ್ನು ವಿಧವಿಧವಾಗಿ ವರ್ಣಿಸಿ ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿ ಎಂತಹ ಅಧಃಪತನಕ್ಕೆ ತಲುಪಿದೆ ಎಂಬುದು ಜಗಜ್ಜಾಹೀರಾಗಿದೆ.

ಮಾಧ್ಯಮಗಳು

ಈ ಬಂದ್ ಭಾಗಶಃವಾಗಿತ್ತು. ಬಹು ಜನರ ಬೆಂಬಲವಿರಲಿಲ್ಲ. ಸಾರ್ವಜನಿಕ ಹಿತವೂ ಇರಲಿಲ್ಲ. ಆದರೆ ಹಿಂದೆ ಬೆಲೆ ಏರಿಕೆ ವಿರುದ್ಧ, ಕಾರ್ಮಿಕರ ಜೀವನ್ಮರಣದ ಪ್ರಶ್ನೆಗಳನ್ನೆತ್ತಿ ಎಡಪಕ್ಷಗಳು, ಸಾಮೂಹಿಕ ಸಂಘಟನೆಗಳು ನಡೆಸಿದ ಬಂದ್ ಸ್ವರೂಪದ ಯಶಸ್ವಿ ಸಾರ್ವತ್ರಿಕ ಮುಷ್ಕರಗಳನ್ನು ಪ್ರತಿಬಾರಿಯೂ ನಮ್ಮ ಮಾಧ್ಯಮಗಳು ಬಿಂಬಿಸಿದ ರೀತಿಯಾದರೂ ಎಂತಹದ್ದು? ಜನರ ಪ್ರತಿಕ್ರಿಯೆ ಅಭೂತಪೂರ್ವವಾಗಿದ್ದರೂ, ಕರೆ ಪೂರ್ಣ ಯಶಸ್ವಿಯಾದರೂ ಪತ್ರಿಕೆ, ಟಿ.ವಿ. ಮಾಧ್ಯಮಗಳು ಸಾವಿರಾರು ಕೋಟಿ ಹಾನಿ ತಂದಿತೆಂದೂ, ಬಹಳ 'ರಿಯಾಯಿತಿ' ನೀಡಿ ಭಾಗಶಃ ಬಂದ್ ಎಂದು ವರ್ಣಿಸಿ, ವಿಫಲ ಎಂದು ಮೂದಲಿಸಿ ಕೈ ತೊಳೆದು ಕೊಂಡಿದ್ದವು. ಆದರೆ ಬಿಜೆಪಿಯ ಈ ಬಂದ್‌ನ್ನು ಅವು ಬಹುತೇಕ ಟೀಕಿಸಲಿಲ್ಲ. ವೈಫಲ್ಯಗಳನ್ನು ಪ್ರಸ್ತಾಪಿಸಲಿಲ್ಲ. 'ಎಲ್ಲೆಡೆಗಳಲ್ಲಿಯೂ ಭುಗಿಲೆದ್ದ ಆಕ್ರೋಶವೇ'! ಕೆಲವು ಪತ್ರಿಕೆಗಳು ಸಂಪಾದಕೀಯದಲ್ಲಿ, ಓದುಗರ ಪತ್ರಗಳಲ್ಲಿ ಟೀಕಿಸಿದ್ದರೂ ಪ್ರಧಾನ ಸುದ್ದಿ , ಯಶಸ್ವಿಯೇ! ಟಿ.ವಿ.ಗಳಿಗಂತೂ ಇದು ರೋಚಕ ವರದಿ.

ಒಂದರ್ಥದಲ್ಲಿ ಟಿ.ವಿ. ಮಾಧ್ಯಮಗಳ ಗಮನಾರ್ಹ 'ಕೊಡುಗೆ' ಈ ಬಂದ್‌ಗೆ ಇದೆ. ಸಂಜೆ ಬಿಜೆಪಿ ಅಧ್ಯಕ್ಷ ಈಶ್ವರಪ್ಪನವರು ನಾಳೆಯ ಬಂದ್ ಕರೆ ಕೊಡುತ್ತಲೇ ಮಿಂಚಿನಂತೆ ಸುದ್ದಿ ಪ್ರವಹಿಸಿದ್ದು ಈ ಮಾಧ್ಯಮಗಳ ಮೂಲಕವೇ. ಕ್ಷಣ ಕ್ಷಣದ ಸುದ್ದಿ ಬಿತ್ತರಿಸಿದ್ದ ಅವರೇ ಹೀಗೆ ಬಿಜೆಪಿ ರಾಜ್ಯ ಸರ್ಕಾರವು ಮಾಧ್ಯಮಗಳನ್ನು ಪೂರ್ಣ ಬಳಸಿಕೊಂಡಿತು. ಅರ್ಥಾತ್ ಮಾಧ್ಯಮಗಳೇ ತಮ್ಮ ಪಾಲಿನ ಪವಿತ್ರ 'ಕರ್ತವ್ಯ'ವನ್ನು ನೆರವೇರಿಸಿದವು. ಆದ್ದರಿಂದಲೇ ಎಡಪಕ್ಷಗಳ ಮೇಲೆ ಗದಾಪ್ರಹಾರ ಮಾಡಿದಂತೆ ಇವರ್‍ಯಾರು ಸಾವಿರಾರು ಕೋಟಿ ಹಾನಿ, ಅಸ್ತವ್ಯಸ್ತ, ಕ್ರಮಕ್ಕೆ ಆಗ್ರಹ ಎಂದೆಲ್ಲಾ ಬರೆಯಲಿಲ್ಲ!

ಮನಸ್ಸು ಹುಳ್ಳಗೆ

ಇಂದು ಭ್ರಷ್ಟ, ಅನೈತಿಕ ಸರ್ಕಾರದ ವಿರುದ್ಧ ಜನತೆ ಬೀದಿಗಿಳಿದು ಹೋರಾಡಬೇಕಿದೆ. ರಾಜ್ಯ ಸರ್ಕಾರವನ್ನು ತೊಲಗಿಸಲು ಅನಿವಾರ್ಯವಾದರೆ ಬಂದ್ ಸ್ವರೂಪದ ಮುಷ್ಕರ ನಡೆಸಲು ಮುಂದಾಗಬೇಕಿದೆ. ಆದರೆ ತೊಲಗಬೇಕಿರುವ ಸರ್ಕಾರವೇ, ಅಪರಾಧಿಯೇ ಆಗಿದ್ದರೂ ಸತ್ಯ, ನ್ಯಾಯವಂತನಂತೆ ಕೂಗುತ್ತಿದೆ.ಇದನ್ನು ನೋಡಿಯೇ ರಾಜ್ಯಪಾಲರು ಹೇಳಿರಬೇಕು. "**ಕಳ್ಳನೇ ಪೋಲೀಸರನ್ನು ದಬಾಯಿಸಿದನಂತೆ**" ಎಂಬ ಗಾದೆ ಹಿಂದಿ ಮಾತು.

ಈ ಮಾತಿಗೆ ಯಡಿಯೂರಪ್ಪ ಮತ್ತು ಬಿಜೆಪಿ ನಾಯಕರು ಮತ್ತೆ ಮತ್ತೆ ಹೆಗಲು ಮುಟ್ಟಿ ನೋಡಿಕೊಂಡದ್ದು, ಆ ಗಾದೆ ಮಾತಿನ ನಿಜ ಅರ್ಥ ತಿರುಚಿದ್ದು ಸರಿದು ಹೋದ ಒಂದು ಪ್ರಸಂಗ !

ಕಳ್ಳನ ಮನಸ್ಸು ಹುಳ್ಳಗೆ ಅಲ್ಲವೇ?

ಮೂರನೇ ಕೇರಳ ಪಡನ ಕಾಂಗ್ರೆಸ್

ಪುಟ 5 ರಿಂದ

ಸಂಕ್ರಮಣದ ಭಾಗವಾಗಿ ಎಡ-ಪ್ರಜಾಸತ್ತಾತ್ಮಕ ರಂಗದ ಹಂತದತ್ತ (ಉದಾ. ಭಾರತದ ಕೇರಳ, ಪಶ್ಚಿಮ ಬಂಗಾಳ) ಮತ್ತು ಬಂಡವಾಳಶಾಹಿ ಮೀರಿ ನಿಲ್ಲುವ (ಉದಾ. ವೆನೆಜುವೆಲಾ) - ಆ ನಾಲ್ಕು ತರಹದ ಸಂಕ್ರಮಣಗಳು. ಆ ನಂತರ ಈ ಪ್ರತಿಯೊಂದು ತರಹದ ಸಂಕ್ರಮಣ ಸರ್ಕಾರಗಳ ಬಗ್ಗೆ - ಹವಾನಾ ವಿವಿಯ ಪ್ರೊಫೆಸರ್ ಕ್ಯೂಬಾದ ಬಗ್ಗೆ, ವೆನೆಜುವೆಲಾದ ರಾಯಭಾರಿ ಚವೇಜ ಸರ್ಕಾರದ ಬಗ್ಗೆ, ಜೋಹಾನ್ಸ್ ಬರ್ಗ ವಿವಿಯ ಪ್ರೊಫೆಸರ್ ಎ ಎನ್ ಸಿ ಸರ್ಕಾರದ ಬಗ್ಗೆ, ಪ್ರೊ. ಪ್ರಭಾತ್ ಪಟ್ನಾಯಕ್ ಭಾರತದ ಎಲ್ ಡಿ ಎಫ್ ಸರ್ಕಾರಗಳ ಬಗ್ಗೆ ವಿವರವಾಗಿ ಮಾತನಾಡಿದರು.

ಒಟ್ಟಾರೆಯಾಗಿ ಮೂರನೇ ಕೇರಳ ಪಡನ ಕಾಂಗ್ರೆಸ್ ನಿಜವಾಗಿಯೂ ಮೂರು ದಿನಗಳ 'ಬೆಳವಣಿಗೆ ಬಗ್ಗೆ ಯೋಚನೆಗಳ ಹಬ್ಬ' ಆಗಿ ಒಂದು ಮರೆಯಲಾಗದ ಅದ್ಭುತ ಅನುಭವ ನೀಡಿತು. ಇಂತಹ ಕರ್ನಾಟಕ ಅಧ್ಯಯನ ಕಾಂಗ್ರೆಸಿನ ಕನಸು ಕಾಣಲು ನಾವೂ ಆರಂಭಿಸಬಹುದೇ ?

JANASHAKTHI KANNADA VARA PATRIKE FEB. 06, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

ಸರ್ಕಾರ ತೊಲಗಲಿ ಪ್ರತಿಭಟನೆ - ಸಿಎಂ ರಾಜೀನಾಮೆಗೆ ಆಗ್ರಹ

ಭಾರೀ ಭ್ರಷ್ಟಾಚಾರ, ಹಗರಣ, ಅಕ್ರಮಗಳಲ್ಲಿ ಮುಳುಗೇಳುತ್ತಿರುವ ರಾಜ್ಯದ ಬಿಜೆಪಿ ಸರ್ಕಾರ ತೊಲಗಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿಯು ನೀಡಿದ್ದ ಕರೆಯಂತೆ ಇದೇ ಜನವರಿ 24 ರಂದು ರಾಜ್ಯದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ.



ದಾಖಲೆಗಳ ಸಮೇತ ಹಗರಣಗಳ ಹೊರ ಬಂದಿದ್ದರೂ ಮುಖ್ಯಮಂತ್ರಿ ಮತ್ತು ಇಡೀ ಸಂಪುಟ ರಾಜೀನಾಮೆ ನೀಡದೇ ಅಧಿಕಾರಕ್ಕಂಟಿ ಹಲವಾರು ಹುನ್ನಾರಗಳನ್ನು ಮಾಡುತ್ತಿವೆ. ದೂರು ದಾಖಲಿಸಲು ಅನುಮತಿ ನೀಡಿದ ರಾಜ್ಯಪಾಲರ ಕ್ರಮವನ್ನೇ ನೆಪವಾಗಿರಿಸಿ ಧಾಳಿ ನಡೆಸುತ್ತಿದೆ. ಭ್ರಷ್ಟಾಚಾರ ಮುಚ್ಚಿಕೊಳ್ಳಲು ಬಂದ್‌ಗಳನ್ನು ನಡೆಸಿದೆ. ಮಾತ್ರವಲ್ಲ. ಶಾಸಕಾಂಗದ ಇತಿಹಾಸದಲ್ಲೇ ಕಪ್ಪು ಚುಕ್ಕೆಯಾದ ಅನೈತಿಕ, ಅಕ್ರಮಗಳ ಮೂಲಕ ಅಧಿಕಾರದಲ್ಲಿ ಉಳಿದಿದೆ. ಬಿಜೆಪಿಯ ಈ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳು, ಜನರನ್ನು ಪೂರ್ಣ ನಿರ್ಲಕ್ಷಿಸಿದ ಭ್ರಷ್ಟ ದುರಾಡಳಿತ ವಿರುದ್ಧ ಸಿಪಿಐ(ಎಂ) ಹಲವು ಹಂತಗಳ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಇದೇ 24 ರಂದು ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು 170 ಕ್ಕೂ ಹೆಚ್ಚಿದ್ದ ಜನ ಪ್ರತಿಭಟನೆ ನಡೆಸಿದರು. ಸಭೆಯನ್ನುದ್ದೇಶಿಸಿ ಪಕ್ಷದ ಹಿರಿಯ ಮುಖಂಡ ಸೆಕ್ರಟಾರಿಯೇಟ್ ಸದಸ್ಯರಾದ ಕಾಂ.ಕೆ.ರ್.ಶ್ರೀಯಾನ್ ಬಿ.ಮಾಧವರವರು ಸಭೆಯನ್ನುದ್ದೇಶಿಸಿ ಮಾತನಾಡಿ ಸರ್ಕಾರ ತೊಲಗಲಿ ಎಂದು ಆಗ್ರಹಿಸಿದ್ದಾರೆ. ಬೆಳ್ತಂಗಡಿಯ ತಾಲ್ಲೂಕು ಕಛೇರಿ ಎದುರು 85 ಜನರ ಪ್ರತಿಭಟನಾ ಪ್ರದರ್ಶನ ನಡೆದಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳಲ್ಲಿ ನೂರಾರು ಜನರ ಪ್ರತಿಭಟನಾ ಪ್ರದರ್ಶನ ನಡೆದಿದೆ. ಸೆಕ್ರೆಟಾರಿಯೆಟ್ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿಯವರು ಸಭೆಯನ್ನುದ್ದೇಶಿಸಿ ಬಾಗೇಪಲ್ಲಿಯಲ್ಲಿ ಮಾತನಾಡಿದ್ದಾರೆ.

ಕೋಲಾರ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸುಮಾರು 75 ರಷ್ಟಿದ್ದ ಪ್ರತಿಭಟನಾಕಾರರು ಧರಣಿ ನಡೆಸಿದ್ದಾರೆ. ಮತ್ತು ಜಿಲ್ಲಾಧಿಕಾರಿ ಕಛೇರಿ, ಮಳವಳ್ಳಿ ತಾಲ್ಲೂಕು ಕಛೇರಿ ಎದುರು ಪ್ರತಿಭಟನೆಗಳು ನಡೆದಿವೆ. ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿಯೆದುರು ಪ್ರತಿಭಟನೆ ನಡೆಸಿ ಸರ್ಕಾರದ ಭೂತದಹನ ನಡೆದಿದೆ. ದೇವದುರ್ಗ, ಸಿಂಧನೂರುಗಳಲ್ಲಿ ಪ್ರತಿಭಟನೆ ನಡೆದಿದೆ. ರಾಯಚೂರಿನಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ತುಮಕೂರಿನ ಟೌನ್‌ಹಾಲ್ ಎದುರು ನಡೆದ ಪ್ರತಿಭಟನೆಯಲ್ಲಿ 60 ಕ್ಕೂ ಹೆಚ್ಚಿನ ಪ್ರತಿಭಟನಾಕಾರರು ಭಾಗಿಯಾಗಿದ್ದಾರೆ. ಮೈಸೂರಿನಲ್ಲಿ 50 ಜನ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಹಾಗೆಯೇ ಗುಲಬರ್ಗಾ, ಗದಗ್, ದಾವಣಗೆರೆಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ.

ರಾಜಧಾನಿ ಬೆಂಗಳೂರಿನಲ್ಲಿ ಇದೇ 25 ರಂದು ಟೌನ್‌ಹಾಲ್ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಸಿವಿಕ್ ಫ್ರಂಟ್‌ನಿಂದ 250 ಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸಿದ್ದಾರೆ.

ಪ್ರತಿಭಟನಾತ್ಮಕವಾಗಿ ಭೂತದಹನ ಮಾಡಲಾಗಿದೆ.

ಇದರಲ್ಲಿ ಸಿಪಿಐ(ಎಂ)ನ ಕೆ.ಪ್ರಕಾಶ್, ಸಿಪಿಐ ನ ನಾಯಕರಾದ ವೆಂಕಟೇಶ್‌ರವರಲ್ಲದೇ ಡಿ.ಎಸ್.ಎಸ್ (ಅಂಬೇಡ್ಕರ್ ವಾದ)ದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಪಿ.ವಿ.ಸಿ.ಯ ಮುಖಂಡ ಪಟಾಪಟ್ ನಾಗರಾಜ್, ಟಿಪ್ಪು ಸಂಯುಕ್ತ ರಂಗದ ಮುಖಂಡರಾದ ಸರ್ದಾರ್ ಅಹ್ಮದ್ ಖುರೇಷಿ ಮುಂತಾದವರು ಭಾಗವಹಿಸಿ ಮಾತನಾಡಿದ್ದಾರೆ.

ಬಿಜೆಪಿ ಸರ್ಕಾರದ ವಿರುದ್ಧ ಜನ ಚಳುವಳಿಗಳನ್ನು ಸಿಪಿಐ(ಎಂ) ಸಂಘಟಿಸಿದ್ದು ಇನ್ನಷ್ಟು ವ್ಯಾಪಕ ಸ್ವರೂಪದ ಚಳುವಳಿಗೆ ಸಿದ್ಧವಾಗುತ್ತಿದೆ.

ಪಂಡಿತ್ ಭೀಮಸೇನ ಜೋಶಿ

ಖ್ಯಾತ ಹಿಂದುಸ್ತಾನಿ ಗಾಯಕ ಭಾರತರತ್ನ ಪಂಡಿತ ಭೀಮಸೇನ ಜೋಷಿಯವರು ಇದೇ ಜನವರಿ 24 ರಂದು 88ನೇ ವಯಸ್ಸಿನಲ್ಲಿ ಪುಣೆಯಲ್ಲಿ ನಿಧನರಾಗಿದ್ದಾರೆ. ಸಂಗೀತ ಲೋಕದ ದಿಗ್ಗಜನಿಗೆ ಸಂತಾಪ.



ಆಪರೇಷನ್ ಬಿಬಿಎಂಪಿ


ಪುಟ 9 ರಿಂದ

ಬೃಹತ್ ಭ್ರಷ್ಟರ ಬೆಂಬಲಕ್ಕೆ ಮೇಯರ್

ಎರಡು ಕಾಮಗಾರಿಗಳಿಗೆ ಒಂದೇ ವರ್ಕ್ ಕೋಡ್ ನೀಡಿ, ಅದರಂತೆ 18 ಕೋಟಿ ರೂ.ಗಳ 35 ಕಾಮಗಾರಿಗಳಿಗೆ ಅನುಮೋದನೆ ಪಡೆದುಕೊಳ್ಳಲಾಗಿದೆ ಎಂದು ವರ್ಕ್‌ಕೋಡ್ ಕರ್ಮಕಾಂಡವನ್ನು ಲೆಕ್ಕಪರಿಶೋಧಕರ ವರದಿ ಬಯಲು ಮಾಡಿದೆ. ಮೇಲಾಧಿಕಾರಿಗಳ ಗಮನಕ್ಕೆ ತಾರದೆ, ಕರಾಮತ್ತು ನಡೆಸಿರುವ ಕಿರಿಯ ಅಧಿಕಾರಿಗಳನ್ನು ಹಾಲಿ ಆಯುಕ್ತರಾದ ಸಿದ್ಧಯ್ಯ ಅಮಾನತ್ತು ಮಾಡಿ ಹಗರಣವನ್ನು ಲೋಕಾಯುಕ್ತರ ತನಿಖೆಗೆ ವಹಿಸಿದ್ದಾರೆ. ಇದನ್ನು ಸಹಿಸದ ಮಹಾಪೌರರಾದ ಬಿಜೆಪಿಯ ಎಸ್.ಕೆ.ನಟರಾಜ್ ಆಯುಕ್ತರ ವರ್ಗಾವಣೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ.

"ಚುನಾಯಿತರಾದ ಪೂಜನೀಯ ಪೌರರಿರುವಾಗ, ಮೇಯರ್ ನಾನಿರುವಾಗ ನಮ್ಮ ಗಮನಕ್ಕೆ ತಾರದೆ, ಪಾಪ ಅಧಿಕಾರಿಗಳನ್ನು ಅಮಾನತ್ತು ಮಾಡುವುದು ಸರಿಯಿಲ್ಲ. ಅವರ ಮೇಲಿನ ಆರೋಪ ಸಾಬೀತೇ ಆಗಿಲ್ಲ. ಆಗಲೇ ಸಸ್ಪೆಂಡ್ ಎಂದರೆ ಹೇಗೆ" ಎಂದು ಮಳ್ಳಿಯಂತೆ ಉಸುರಿದ್ದಾರೆ. ಭ್ರಷ್ಟರನ್ನು ಅಮಾನತ್ತು ಮಾಡಿದ್ದಕ್ಕೆ, ಭ್ರಷ್ಟಾಚಾರದ ವರ್ಕ್‌ಕೋಡ್ ಹಗರಣದ ಕೆಲಸವನ್ನು ಲೋಕಾಯುಕ್ತರ ತನಿಖೆಗೆ ಶಿಫಾರಸ್ಸು ಮಾಡಿದ್ದಕ್ಕೆ ಆಯುಕ್ತರನ್ನು ಮೇಯರ್ ಪ್ರಕಾರ ವರ್ಗಾವಣೆ ಮಾಡಬೇಕಂತೆ! ಪೂಜನೀಯ ಮಹಾಪೌರರು ಯಾರ ಪೂಜೆಗೆ ನಿಂತಿದ್ದಾರೆ ಎಂದು ಬೇರೆ ಹೇಳಬೇಕಿಲ್ಲ ಅಲ್ಲವೇ? ಇವರ ಪಕ್ಷ ಬಿಜೆಪಿ ಎಲ್ಲರಂತಲ್ಲವಂತೆ! ಅದು ಪಾರ್ಟಿ ವಿತ್ ಡಿಫರೆನ್ಸ್ ಅಂತೆ! ಹೌದು ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇದುವರೆಗೆ ಇಷ್ಟು ದೊಡ್ಡ ಪ್ರಮಾಣದ ರೂ.2000 ಕೋಟಿ ಅಕ್ರಮ ವರ್ಕ್ ಕೋಡ್ ಹಗರಣ ನಡೆದಿರಲಿಲ್ಲ. ಇಷ್ಟು ಲಜ್ಜೆಗೆಟ್ಟು ಯಾವುದೇ ಮೇಯರ್ ಕೂಡ ಬೃಹತ್ ಭ್ರಷ್ಟಾಚಾರದ ಬೆಂಬಲಕ್ಕೆ ಬಹಿರಂಗವಾಗಿಯಂತೂ ನಿಂತಿರಲಿಲ್ಲ.

ಕವಿತೆ



ದೊಂಬರಾಟದ ಹುಡುಗಿ

ಡೋಲು ಬಡಿಯುತ್ತಾ
ಕೇಕೆ ಹಾಕುತ್ತಾ
ಜಗದ ಕಿವಿಯ ತೆರೆಸಿದ್ದಾಳೆ
ಡೊಂಬರಾಟದ ಹುಡುಗಿ
ಚೋಟು ರಿಂಗಿನ ಒಳಗೆ
ತೂರಿ ಬಂದಳು ಹುಡುಗಿ
ಮೂಳೆಗಳಿಲ್ಲದ ಹಾವಿನಂತೆ
ತೋರಿಸಿದ್ದಳು ತನ್ನ
ಗೇಣುಹೊಟ್ಟೆಯ ತೆರೆದು
ಎಲ್ಲವೂ ಹೊಟ್ಟೆಗಾಗಿ ಎಂದು

ತಂತಿಯ ಮೇಲೊಂದು ಸಾಹಸ
ಬೊಂಬಿನ ಮೇಲೊಂದು ಸಾಹಸ
ಗಾಜಿನ ಬಾಟಲಿಯ ಮೇಲೆ
ಮೈ ನವಿರೇಳಿಸುವ ಸಾಹಸ
ಬಿದ್ದು ಕೈಕಾಲು ಮುರಿದೀತೆಂಬ
ಭಯವಿಲ್ಲ
ಗಾಜು ಹೊಟ್ಟೆಯ
ಸೀಳಿತೆಂಬ ಕಬುರಿಲ್ಲ
ಹಸಿದ ಹೊಟ್ಟೆಯ ಮುಂದೆ
ಎಲ್ಲವೂ ಗೌಣ.

ತುತ್ತು ಅನ್ನ ತಿನ್ನೋಕೆ
ಇಷ್ಟೊಂದು ಸಾಹಸ ಯಾಕೆ?
ಎನ್ನುತ್ತೀರಾ!
ಇಲ್ಲದಿದ್ದರೆ, ಇಲ್ಲವಲ್ಲ
ಅವಳ ಹೊಟ್ಟೆಗೆ ಅನ್ನ
ಯಾರು ಕಲಿಸಿದರು ಎಂದರೆ
ಹಸಿವು ಎನ್ನುತ್ತಾಳೆ ಹುಡುಗಿ

ಆ ಪುಟ್ಟ ಹುಡುಗಿ ಕಲಿತ
ಹಸಿದ ಹೊಟ್ಟೆಯ ಪಾಠ
ದೊಡ್ಡದು
ಭೂಮಂಡಲಕ್ಕಿಂತಲೂ
ದೊಡ್ಡದು
ಬೆಟ್ಟದಷ್ಟು ಎತ್ತರ
ಬೆಳೆದು ನಿಂತಿರುವ
ಆ ಹುಡುಗಿಯ ಮುಂದೆ
ನಾನೂ ನಿಂತಿದ್ದೆ
ಸಣ್ಣ ಹುಡುಗನಂತೆ

ಹುಲಿಕಟ್ಟಿ ಚನ್ನಬಸಪ್ಪ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH